# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-34, ಶ್ರೀ ಶುಭಕೃತ್‌ನಾಮ ಸಂವತ್ಸರ, ಮಾರ್ಗಶಿರ ಮಾಸ ಡಿಸೆಂಬರ್-2022, ಸಂಚಿಕೆ-9, ಪುಟಗಳು-32, ಬೆಲೆ ರೂ.-15/-




ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳಿಂದ ಶಿವಮೊಗ್ಗ ಬ್ರಾಹ್ಮಣ ಸಂಘದ ಸುರಭಿ ಗೋಶಾಲಾ ಕಾರ್ಯಕ್ರಮದಲ್ಲಿ ಆಶೀರ್ವಚನ.

## ಪ್ರತಿಭಾ ಪುರಸ್ಕಾರ ಸಮಾರಂಭ-2022



ಅತಿಥಿಗಳಿಂದ ಸಮಾರಂಭದ ಉದ್ಘಾಟನೆ



ಪುರಸ್ಕರಿತ ಪ್ರತಿಭಾನ್ವಿತರು





ಮುಖ್ಯ ಅತಿಥಿಗಳಿಗೆ ಗೌರವ ಸಮರ್ಪಣೆ ಅಧ್ಯಕ್ಷರಿಂದ






ರಾಜ್ಯದ ವಿವಿಧ ಬ್ರಾಹ್ಮಣ ಪಂಗಡಗಳ ಹಾಗೂ ಸಂಘಗಳ ಪದಾಧಿಕಾರಿಗಳ ಸಮಾವೇಶ

ಸಮಾವೇಶದಲ್ಲಿ ಹಿರಿಯ ಸದಸ್ಯರಿಗೆ ಸನ್ಮಾನ





ಶಿವಮೊಗ್ಗ ಜಿಲ್ಲಾ ಮಹಿಳಾ ಘಟಕದ ಉದ್ಘಾಟನಾ ಸಮಾರಂಭ






ಶಿವಮೊಗ್ಗದ ನ್ಯಾಷನಲ್ ಲಾ ಕಾಲೇಜ್ ಅಮೃತ ಮಹೋತ್ಸವ ಸಮಾರಂಭದಲ್ಲಿ ಮಹಾಸಭಾ ಅಧ್ಯಕ್ಷರು ಹಾಗೂ ಉಚ್ಚನ್ಯಾಯಾಲಯದ ನ್ಯಾಯಾಧೀಶ ಶ್ರೀ ಕೃಷ್ಣ ದೀಕ್ಷಿತ್





ಬಾಗಲಕೋಟೆ ಜಿಲ್ಲಾ ಯುವ ಘಟಕದ ಪದಗ್ರಹಣ ಸಮಾರಂಭ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066

E-mail : info@akbms.com
Website : www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್**

ಖಜಾಂಚಿ
**ವೆಂಕಟೇಶ ಎಸ್. ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ| ಬಿ.ಎಸ್. ರಾಘವೇಂದ್ರ ಭಟ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ| ಎಂ.ಕೆ. ಶ್ರೀಧರ್**

ಗೌರವ ಸಲಹೆಗಾರರು
**ಎಂ.ಕೆ. ಭಾಸ್ಕರರಾವ್**
**ಡಾ| ಎಂ. ಸೂರ್ಯಪ್ರಸಾದ್**

ಸಮಿತಿ ಸದಸ್ಯರು
**ಜ್ಯೋತಿಷಿ ವಿ|| ಡಾ| ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು-560 050. ದೂ. : 26606061.

# ನಲ್ನುಡಿ

**ನ ದ್ವಿಷಂತಿ ನ ಯಾಚಂತೇ ಪರನಿಂದಂ ನ ಕುರ್ವತೇ ।**
**ಅನಾಹೂತಾ ನ ಚಾಯಂತಿ ತೇನಾಶ್ಮಾನೋಽಪಿ ದೇವತಾಃ ॥**

'ಯಾರನ್ನೂ ದ್ವೇಷಿಸುವುದಿಲ್ಲ, ಯಾರನ್ನೂ ಬೇಡುವುದಿಲ್ಲ, ಪರರ ನಿಂದೆ ಮಾಡುವುದಿಲ್ಲ, ಕರೆಯದೇ ಹೋಗುವುದಿಲ್ಲ. ಈ ಕಾರಣಗಳಿಂದಲೇ ಕಲ್ಲಿಗೆ ಕೂಡ ದೇವತ್ವ ಲಭಿಸಿದೆ.'

ದೈವತ್ವದ ಗುಟ್ಟನ್ನು ಸಾರುವ 'ಸೂಕ್ತಿ ರತ್ನಮಾಲಾ' ಸುಭಾಷಿತ ಗ್ರಂಥದ ಶ್ಲೋಕವಿದು. ಸಾಮಾನ್ಯ ಮನುಷ್ಯನಾದವನು ನಾಲ್ಕಾರು ಒಳ್ಳೆಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ದೈವತ್ವಕ್ಕೆ ಏರಬಹುದು ಎಂದು ಈ ಶ್ಲೋಕವು ಸೂಚಿಸುತ್ತದೆ. ಈ ಅಜ್ಞಾತ ಕವಿಯು ಮೊದಲಿಗೆ ನಿರ್ಜೀವ ಕಲ್ಲು-ಬಂಡೆಗಳನ್ನು ನೋಡಿದ್ದಾನೆ. ನಂತರ ಅದೇ ಕಲ್ಲು-ಬಂಡೆಗಳು ಒಬ್ಬ ಶಿಲ್ಪಿಯ ಕೈಚಳಕದಿಂದ ದೇವವಿಗ್ರಹವಾಗಿ ರೂಪಾಂತರ ಹೊಂದಿದ್ದನ್ನು ಗಮನಿಸಿ, ಯಾವ ಗುಣಗಳನ್ನು ಮನುಷ್ಯ ಅಳವಡಿಸಿಕೊಂಡರೆ ವಿಗ್ರಹವಾಗಬಹುದು ಎಂದು ಚಿಂತಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಯಾರನ್ನು ದ್ವೇಷಿಸದಿರುವುದೇ ಮೊದಲನೇ ಗುಣ. ಸಾಧು-ಸಂತರ ಒಳ್ಳೆಯ ಗುಣವೇ ದುರ್ಜನರ ದ್ವೇಷಕ್ಕೆ ಕಾರಣವಾಗುತ್ತದೆ ಎಂದು ಇನ್ನೊಂದು ಸುಭಾಷಿತ. 'ಬೇಡದಿರುವುದು' ಎರಡನೇ ಗುಣ. ಮನುಷ್ಯ ದುರಾಸೆ ಹೊಂದಿ, ತನ್ನಲ್ಲಿ ಇರದಿರುವ ವಸ್ತುಗಳನ್ನು ಬೇರೆಯವರಲ್ಲಿ ಕೇಳವುದು ಅವನ ಸ್ವಭಾವ. ಆದರೆ ಶಿಲೆ ಯಾರನ್ನೂ, ಏನೂ ಬೇಡುವುದಿಲ್ಲ. ಶಿಲೆಯಲ್ಲಿರುವ ಮೂರನೇ ಗುಣ, ಬೇರೆಯವರನ್ನು ನಿಂದಿಸದಿರುವುದು. ಕೆಲವರಿಗೆ ಬೇರೆಯವರನ್ನು ಸದಾ ನಿಂದಿಸುತ್ತಿರುವುದೇ ತಮ್ಮನ್ನು ಹೊಗಳಿಕೊಳ್ಳುತ್ತಿರುವುದೇ ಮೂಲ ಸ್ವಭಾವ. (**ಆತ್ಮಶ್ಲಾಘನಂ ಪರಗರ್ಹಾಚ ಸಮಂ ಪಾತಕಮ್ ಎಂದು ಮಹಾಭಾರತದ ನುಡಿ**). ಆದ್ದರಿಂದಲೇ ಪುರಂದರದಾಸರು 'ಆಚಾರವಿಲ್ಲದ ನಾಲಿಗೆ, ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ, ವಿಚಾರವಿಲ್ಲದೇ ಪರರ ದೂಷಿಸುವುದಕ್ಕೆ ಚಾಚಿಕೊಂಡಿರುವಂತ ನಾಲಿಗೆ' ಎಂದು ಈ ನಾಲಿಗೆಯನ್ನು ಹೊಗಳುವುದು, ಅನವಶ್ಯಕ ಮಾತಿಗಿಂತ ಮೌನ ಲೇಸಲ್ಲವೇ? ನಾಲ್ಕನೆಯದಾಗಿ ಶಿಲೆಗಳು ಕರೆಯದೇ ಎಲ್ಲೂ ಹೋಗುವುದಿಲ್ಲ. ಸಭೆ-ಸಮಾರಂಭಗಳಿಗೆ ಕರೆಸಿಕೊಳ್ಳದೆ ಹೋದರೆ ಅವಕೃಪೆ, ಅವಮಾನಕ್ಕೆ ಒಳಗಾಗ ಬೇಕಾಗುತ್ತದೆ. ಮನುಷ್ಯನಾದವನು ದೈವತ್ವದ ಕಡೆಗೆ ಸಾಗಬೇಕಾದರೆ, ದ್ವೇಷ-ಅಸೂಯೆ, ಕೋಪ-ತಾಪಗಳನ್ನು ಬಿಟ್ಟುಬಿಡಬೇಕು. ಅರ್ಚಕ ಪ್ರಭಾವದಿಂದ ಶಿಲೆಯು ಪೂಜನೀಯ ವಿಗ್ರಹವಾಗುತ್ತದೆ. (**ಅರ್ಚಕಸ್ಯ ಪ್ರಭಾವೇನ ಶಿಲಾ ಭವತಿ ಶಂಕರಃ**), ಮೇಲ್ಕಂಡ ಅಂಶಗಳನ್ನು ಪಾಲಿಸಿದಾಗ ಮಾನವನು ಮಾಧವನಾಗುವುದು, ನರನು-ಹರನಾಗುವನು.

**ಪ್ರೊ: ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕ

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯ ಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ - ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**-ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ತತ್ತ್ವಬೋಧಃ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ಕರ್ಮೇಂದ್ರಿಯಾಣಿಕಾನಿ? ವಾಕ್–ಪಾಣಿ–ಪಾದ–ಪಾಯು–ಉಪಸ್ಥಾನಿ ಇತಿ ಪಂಚ ಕರ್ಮೇಂದ್ರಿಯಾಣಿ। ವಾಚಃ ದೇವತಾ ವಹ್ನಿಃ, ಹಸ್ತಯೋಃಇಂದ್ರಃ, ಪಾದಯೋಃವಿಷ್ಣುಃ, ಪಾಯೋಃಮೃತ್ಯುಃ, ಉಪಸ್ಥಸ್ಯಪ್ರಜಾಪತಿಃ ಇತಿ ಪಞ್ಚಕರ್ಮೇಂದ್ರಿಯದೇವತಾಃ।**

**ವಾಚಃವಿಷಯಃಭಾಷಣಮ್। ಪಾಣ್ಯೋಃವಿಷಯಃವಸ್ತುಗ್ರಹಣಮ್। ಪಾದಯೋಃವಿಷಯಃಗಮನಮ್। ಪಾಯೋಃವಿಷಯಃಮಲತ್ಯಾಗಃ, ಉಪಸ್ಥಸ್ಯವಿಷಯಃಆನಂದಃ ಇತಿ।**

**ಅನುವಾದ :** ಕರ್ಮೇಂದ್ರಿಯಗಳುಯಾವುವು? ವಾಕ್. ಪಾಣಿ. ಪಾದ. ಪಾಯು ಹಾಗೂ ಉಪಸ್ಥ ಎಂದು.

ವಾಕ್ಕಿನದೇವತೆಯು ಅಗ್ನಿ, ಹಸ್ತಗಳ ದೇವತೆ ಇಂದ್ರ, ಕಾಲುಗಳಿಗೆ ವಿಷ್ಣು, ಪಾಯುವಿಗೆ ಮೃತ್ಯು, ಉಪಸ್ಥಕ್ಕೆ ಪ್ರಜಾಪತಿ ಎಂದು ಐದು ಕರ್ಮೇಂದ್ರಿಯದೇವತೆಗಳು.

ವಾಕ್ಕಿನವಿಷಯವು ಮಾತನಾಡುವುದು, ಪಾಣಿಗಳವಿಷಯವು ವಸ್ತುಗಳನ್ನು ಹಿಡಿಯುವುದು, ಪಾದಗಳವಿಷಯವುಹೋಗುವುದು, ಪಾಯುವಿನ ವಿಷಯ ಮಲತ್ಯಾಗ ಹಾಗೂ ಉಪಸ್ಥದವಿಷಯವು ಆನಂದ ಎಂದು.

**ವಿವರಣೆ:** ವಾಗಿಂದ್ರಿಯ ಇತ್ಯಾದಿ ಐದು ಕರ್ಮೇಂದ್ರಿಯಗಳ ಮೂಲಕ ನಾವು ಮಾತಾಡುವುದು ಇತ್ಯಾದಿ ಎಲ್ಲಾ ಕೆಲಸಗಳನ್ನೂ ಮಾಡುತ್ತೇವೆ. ಪ್ರತಿಯೊಂದು ಇಂದ್ರಿಯಕ್ಕೂಅದರದ್ದೇ ಆದ ದೇವತೆಯನ್ನು ಆಚಾರ್ಯರು ತಿಳಿಸಿದ್ದಾರೆ. ವಾಗಿಂದ್ರಿಯದ ಮೂಲಕ ನಾವು ಮಾತನಾಡುವ ಕೆಲಸವನ್ನು ಮಾಡುತ್ತೇವೆ. ಪಾಣೀಂದ್ರಿಯ ಎಂದರೆ ಕೈಗಳಲ್ಲಿರುವಇಂದ್ರಿಯವು ಕೈಗಳ ಮೂಲಕ ವಸ್ತುಗಳನ್ನು ಹಿಡಿಯುವ ಕೆಲಸವನ್ನು ಮಾಡುವುದು. ಪಾದವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಗವನಕ್ಕೆಸಾಧನವಾಗಿದೆ. ಪಾಯು ಎಂದರೆ ಶರೀರದಲ್ಲಿರುವ ಮಲವನ್ನು ತ್ಯಜಿಸುವ ಇಂದ್ರಿಯವಾಗಿದೆ. ಉಪಸ್ಥವು ಸಂತಾನೋತ್ಪತ್ತಿಗೆ ಕಾರಣವಾದ ಇಂದ್ರಿಯವಾಗಿದೆ.

**ಕಾರಣಶರೀರಂಕಿಮ್? ಅನಿರ್ವಾಚ್ಯಾನಾದ್ಯ ವಿದ್ಯಾರೂಪಂ ಶರೀರದ್ವಯಸ್ಯಕಾರಣಭೂತಂಸತ್ವವರೂಪಾಜ್ಞಾನಂಯದ್ ಅಸ್ತಿ ತತ್ ಕಾರಣಶರೀರಮ್।**

**ಅನುವಾದ:** ಕಾರಣಶರೀರವು ಏನು? ಅನಿರ್ವಾಚ್ಯ ಅನಾದಿ ಅವಿದ್ಯೆಯ ರೂಪವಾಗಿದ್ದು ಎರಡು ಶರೀರಗಳಿಗೆ ಕಾರಣವಾಗಿರುವ ಸ್ವಸ್ವರೂಪದ' ಅಜ್ಞಾನವೇ ಕಾರಣಶರೀರ.

**ವಿವರಣೆ:** ಕಾರಣಶರೀರವನ್ನು ಅವಿದ್ಯೆ ಅಥವಾ ಅಜ್ಞಾನ ಎನ್ನುವರು. ಯಾಕೆಂದರೆ ಇದು ಜ್ಞಾನವರೋಧಿಯಾಗಿದೆ. ಜ್ಞಾನವು ಉಂಟಾದ ಕೂಡಲೇ ಅವಿದ್ಯೆ ನಾಶವಾಗುತ್ತದೆ. ಅನಿರ್ವಾಚ್ಯ ಎಂದರೆ ಸತ್ತು ಹಾಗೂ ಅಸತ್ತುಗಳಿಂದಭಿನ್ನವಾದದ್ದು. ಅವಿದ್ಯೆಯನ್ನು ಸತ್ತು ಎನ್ನಲು ಸಾಧ್ಯವಿಲ್ಲ. ಯಾಕೆಂದರೆ ಇದು ರಜ್ಜುಸರ್ಪದಂತೆ ಜ್ಞಾನವುಂಟಾದಾಗ ನಾಶವಾಗುತ್ತದೆ. ಇದನ್ನು ಅಸತ್ತು ಅಥವಾ ಶೂನ್ಯ ಎನ್ನುವಂತಿಲ್ಲ. ಯಾಕೆಂದರೆ ಇದು ತನ್ನ ಕಾರ್ಯಗಳನ್ನುಉಂಟುಮಾಡುತ್ತದೆ. ಅಸತ್ತಿನಿಂದ ಯಾವುದೇ ಕಾರ್ಯವು ಉಂಟಾಗಲಾರದು. ಹಾಗಾಗಿ ಅವಿದ್ಯೆಯನ್ನುಸದಸದ್ಭ್ಯಾಮ್ ಅನಿರ್ವಚನೀಯಮ್ ಎನ್ನುತ್ತಾರೆ. ಅವಿದ್ಯೆಯು ಅನಾದಿ ಎಂದರೆ ಇದಕ್ಕೆ ಉತ್ಪತ್ತಿ ಎಂಬುದು ಇಲ್ಲ. ಯಾಕೆಂದರೆ ಇದು ಯಾವಾಗ ಆರಂಭವಾಯಿತು ಎಂದು ಹೇಳುವುದು ಸಾಧ್ಯವಿಲ್ಲ. ಈ ಅವಿದ್ಯೆಯು ಸ್ವಸ್ವರೂಪವನ್ನು ಎಂದರೆ ಆತ್ಮನ ನೈಜ ರೂಪವನ್ನು ಮರೆಯಾಗಿಸುತ್ತದೆ. ಹಾಗಾಗಿ ಆಚಾರ್ಯರು ಇದನ್ನು ಸ್ವಸ್ವರೂಪಾಜ್ಞಾನಮ್ ಎಂದು ವಿವರಿಸಿದ್ದಾರೆ.

**ಅವಸ್ಥಾತ್ರಯಂಕಿಮ್? ಜಾಗ್ರತ್–ಸ್ವಪ್ನ–ಸುಷುಪ್ತಯಃತಿಸ್ರಃಅವಸ್ಥಾಃ।**

**ಅನುವಾದ:** ಅವಸ್ಥಾತ್ರಯವು ಏನು? ಜಾಗ್ರತ್, ಸ್ವಪ್ನ ಹಾಗೂ ಸುಷುಪ್ತಿಗಳೆಂಬ ಮೂರು ಅವಸ್ಥೆಗಳು.

**ವಿವರಣೆ:** ಜಾಗ್ರತ್ ಎಂದರೆ ಎಚ್ಚರದ ಅವಸ್ಥೆ. ಸ್ವಪ್ನ ಎಂದರೆ ಕನಸು. ಸುಷುಪ್ತಿ ಎಂದರೆ ಗಾಢ ನಿದ್ರೆಯ ಅವಸ್ಥೆ, ಇವುಗಳನ್ನು ಅವಸ್ಥಾತ್ರಯ ಎನ್ನುವರು.

**ಜಾಗ್ರದವಸ್ಥಾ ಕಾ? ಶ್ರೋತ್ರಾದಿಜ್ಞಾನೇಂದ್ರಿಯೈಃಶಬ್ದಾದಿವಿಷಯೋಜ್ಞಾಯತೇ ಇತಿ ಯತ್ತದ್ಜಾಗ್ರದವಸ್ಥಾ। ಸ್ಥೂಲಶರಾಭಿಮಾನ್ಯಾತ್ಮಾವಿಶ್ವಃ ಇತಿ ಉಚ್ಯತೇ।**

**ಅನುವಾದ:** ಜಾಗ್ರದವಸ್ಥೆ ಏನು? ಯಾವ ಅವಸ್ಥೆಯಲ್ಲಿ ಶ್ರೋತ್ರಾದಿ ಜ್ಞಾನೇಂದ್ರಿಯಗಳ ಮೂಲಕ ಶಬ್ದಾದಿವಿಷಯವು ತಿಳಿಯಲ್ಪಡುವುದೋ ಅದು ಜಾಗ್ರದವಸ್ಥೆ. ಸ್ಥೂಲಶರರಾಭಿಮಾನಿಯಾದ ಆತ್ಮನನ್ನು ವಿಶ್ವ ಎನ್ನುವರು.

**ವಿವರಣೆ:** ಜಾಗ್ರದವಸ್ಥೆಯಲ್ಲಿ ಮಾತ್ರ ಇಂದ್ರಿಯಗಳುಜಾಗೃತವಾಗಿದ್ದು ಬಾಹ್ಯ ಪ್ರಪಂಚವನ್ನು ತಿಳಿಯುತ್ತವೆ. ಉಳಿದ ಅವಸ್ಥೆಗಳಲ್ಲಿ ಇಂದ್ರಿಯಗಳು ನಿಷ್ಕ್ರಿಯವಾದ್ದರಿಂದ ಬಾಹ್ಯ ಜಗತ್ತಿನ ಅರಿವು ಉಂಟಾಗುವುದಿಲ್ಲ. ಜಾಗ್ರದವಸ್ಥೆಯಲ್ಲಿ ಮಾತ್ರ ಸ್ಥೂಲಶರೀರದ ಅನುಭವವಿದ್ದು ಜೀವನುಸ್ಥೂಲಶರೀರಾಭಿಮಾನಿಯಾಗಿರುವನು. ಈ ರೀತಿ ಸ್ಥೂಲಶರೀರದೊಂದಿಗೆ 'ನಾನು' ಎಂದು ಅಭಿಮಾನವನ್ನು ಹೊಂದಿದ ಜೀವಾತ್ಮನನ್ನು ಶಾಸ್ತ್ರದಲ್ಲಿ 'ವಿಶ್ವ' ಎನ್ನುವ ಹೆಸರಿನಿಂದ ಕರೆಯುವರು.

**ಸ್ವಪ್ನಾವಸ್ಥಾ ಕಾ? ಜಾಗ್ರದವಸ್ಥಾಯಾಂಯದೃಷುಯತ್ಶ್ರುತಂತಜ್ಜನಿತ ವಾಸನಯಾನಿದ್ರಾಸಮಯೇ ಯಾ ಪ್ರಪಞ್ಚಪ್ರತೀತಿಃ ಸಾ ಸ್ವಪ್ನಾವಸ್ಥಾ। ಸೂಕ್ಷ್ಮಶರೀರಾಭಿಮಾನ್ಯಾತ್ಮಾತೈಜಸಃ ಇತಿ ಉಚ್ಯತೇ।**

**ಅನುವಾದ :** ಸ್ವಪ್ನಾವಸ್ಥೆಯು ಏನು? ಜಾಗ್ರದವಸ್ಥೆಯಲ್ಲಿ ಯಾವುದು ನೋಡಲ್ಪಟ್ಟಿದೆಯೋ, ಯಾವುದು ಕೇಳಲ್ಪಟ್ಟಿದೆಯೋ, ಅದರಿಂದ ಉಂಟಾದ ವಾಸನೆಯಿಂದ ನಿದ್ರಾಸಮಯದಲ್ಲಾಗುವ ಪ್ರಪಂಚ ಪ್ರತೀತಿಯು ಸ್ವಪ್ನಾವಸ್ಥೆ. ಸೂಕ್ಷ್ಮಶರೀರಾಭಿಮಾನಿಯಾದ ಆತ್ಮನು ತೈಜಸ ಎನ್ನಲ್ಪಡುವನು.

**ವಿವರಣೆ:** ಸ್ವಪ್ನಾವಸ್ಥೆಯು ನಿದ್ರೆಯ ಸಮಯದಲ್ಲಿ ಉಂಟಾಗುತ್ತದೆ. ಆಗ ಇಂದ್ರಿಯಗಳು ನಿಷ್ಕ್ರಿಯವಾಗಿರುವುದರಿಂದ ಬಾಹ್ಯ ವಿಷಯಗಳು ತಿಳಿಯಲ್ಪಡುವುದಲ್ಲ. ಹಿಂದೆ ಅನುಭವಿಸಿದ ಜಾಗ್ರದವಸ್ಥೆಯಲ್ಲಿ ಅನುಭವಿಸಲ್ಪಟ್ಟ ಬಾಹ್ಯ ವಿಷಯಗಳು ಮನಸ್ಸಿನಲ್ಲಿ ವಾಸನೆಗಳನ್ನು ಮೂಡಿಸಿರುತ್ತವೆ. ವಾಸನೆಗಳೆಂದರೆ ನೆನಪಿಗೆ ಕಾರಣವಾದ ಅನುಭವಗಳ ಸೂಕ್ಷ್ಮರೂಪ. ಈ ವಾಸನೆಗಳಿಂದಾಗಿ ನಿದ್ರೆಯಲ್ಲಿ ಜಾಗ್ರದವಸ್ಥೆಯಲ್ಲಿ ಅನುಭವಸಿದಂತಹ ಪ್ರಪಂಚದ ಪ್ರತೀತಿ ಉಂಟಾಗುತ್ತದೆ. ಈ ಪ್ರತೀತಿಯೇ ಸ್ವಪ್ನ ಅಥವಾ ಕನಸು. ಈ ಅವಸ್ಥೆಯಲ್ಲಿಸ್ಥೂಲಶರೀರದ ಅನುಭವ ಇರುವುದಿಲ್ಲ. ಜೀವನು ಸೂಕ್ಷ್ಮ ಶರೀರದೊಂದಿಗೆ

**26 ನೇ ಪುಟದಲ್ಲಿ ಮುಂದುವರೆದಿದೆ**

# ಅಧ್ಯಕ್ಷರ ನುಡಿ



**ಆತ್ಮೀಯ ಬಂಧುಗಳೇ,**

**ಸರ್ವೇಜನಾಃ ಸುಖಿನೋ ಭವಂತುಃ**

ಬ್ರಾಹ್ಮಣರ ಸ್ವತ್ತೇ ಜನ್ಮಜಾತ ಪ್ರತಿಭೆ. ಈ ಪ್ರತಿಭೆ ಎಲ್ಲರ ಸುಪ್ತ ಮನಸ್ಸಿನಲ್ಲಿ ಹುದುಗಿದ್ದು, ಸಂಸ್ಕಾರ, ಕುಲ, ವಂಶ, ವಿದ್ಯೆ, ಅವಕಾಶ, ಪರಿಸರಕ್ಕೆ ಅನುಗುಣವಾಗಿ ಪ್ರಕಟವಾಗುತ್ತದೆ. ಆದ್ದರಿಂದಲೇ ಬ್ರಾಹ್ಮಣ ತಾಯಿ-ತಂದೆಯರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಸೂಕ್ತವಾದ ಶಿಕ್ಷಣ, ಸಂಸ್ಕಾರ, ಸದಾಚಾರಗಳನ್ನು ತಿಳಿಸಿಕೊಡಬೇಕು. ಸುಸಂಸ್ಕಾರದಿಂದ ಸದಾಚಾರವುಳ್ಳ ವಿದ್ಯಾವಂತ ವಿಪ್ರ ಯುವಕ-ಯುವತಿಯರು ಸತ್ಪ್ರಜೆಗಳಾಗಿ ರೂಪುಗೊಂಡು, ಕುಟುಂಬ, ಸಮಾಜ, ರಾಜ್ಯ, ರಾಷ್ಟ್ರದ ಅಪರೂಪದ ಮಾನವ ಸಂಪನ್ಮೂಲ ಶಕ್ತಿಯಾಗುತ್ತಾರೆ. ಈ ಹಂತದಲ್ಲಿ ಮನೆಗಳಲ್ಲಿ ಕುಟುಂಬಕ್ಕೆ, ಕುಲಕ್ಕೆ ಸಂಬಂಧಿಸಿದ ಧಾರ್ಮಿಕ, ಆಧ್ಯಾತ್ಮಕ ಕ್ರಿಯೆ ವಿಧಿಗಳನ್ನು ಮಕ್ಕಳಿಗೆ ಹಿರಿಯರು ತಿಳಿಸಿಕೊಡಬೇಕು. ಬ್ರಾಹ್ಮಣರ ಸಮಸ್ತ ಏಳಿಗೆಗೆ ಕಾರಣವಾದ ಎಲ್ಲ ವಿಪ್ರರು ಸಾಧ್ಯವಾದಷ್ಟು ಮಟ್ಟಿಗೆ ಗಾಯತ್ರಿ ಮಂತ್ರವನ್ನು ಪುರಶ್ಚರಣೆ ಮಾಡಬೇಕು. ಆಗ ಮಾತ್ರ ಸಮುದಾಯದಲ್ಲಿ ಆಧ್ಯಾತ್ಮಿಕ ಶಕ್ತಿ ಜಾಗೃತವಾಗಿ ಸತ್ಸಮಾಜದ ರಾಷ್ಟ್ರ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ. ಈ ದಿಶೆಯಲ್ಲಿ ಕಳೆದ ತಿಂಗಳು ನಡೆದ ವಿಪ್ರ ಪುರಸ್ಕಾರ ಸಮಾರಂಭ ವಿನೂತನವಾಗಿತ್ತು. ಇನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಅಂಕಗಳಿಸಿ ಪ್ರತಿಭಾನ್ವಿತರಾಗಿದ್ದಾರೆ. ಈ ಸಮಾರಂಭದಲ್ಲಿ ಶೇ 98ಕ್ಕೂ ಹೆಚ್ಚು ಅಂಕಗಳಿಸಿದ ಒಟ್ಟು 500 ವಿಪ್ರ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಿರುವುದು ಸಮಾಜಕ್ಕೆ ಹೆಮ್ಮೆಯ ಸಂಗತಿ. ಸಮಾರಂಭದಲ್ಲಿ ಉಪಸ್ಥಿತರಿದ್ದ ಶಿಕ್ಷಣ ತಜ್ಞರು, ಅಧ್ಯಾತ್ಮಿಕ ಗುರುಗಳು, ಗಣ್ಯರು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಪ್ರೋತ್ಸಾಹದಾಯಕ ಹಿತನುಡಿಗಳನ್ನು ನುಡಿದು ಸಮಾರಂಭದ ಘನತೆ ಹೆಚ್ಚಿಸಿದರು. ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಗೆ ಪುರಸ್ಕಾರವನ್ನು ನೀಡುವ ಯೋಜನೆಯನ್ನು ಮಹಾಸಭೆಯು ಹಮ್ಮಿಕೊಳ್ಳಲಿದೆ.

ಇತ್ತೀಚಿನ ವರ್ಷಗಳಲ್ಲಿ ಕೆಲವು ಕಥಾಕಥಿತ ಬುದ್ಧಿಜೀವಿಗಳು ರಾಜಕೀಯ ನೇತಾರರು ಅನವಶ್ಯಕವಾಗಿ ಬ್ರಾಹ್ಮಣ ಸಮುದಾಯವನ್ನು ನಿಂದಿಸುತ್ತಿರುವುದು ಮಾಧ್ಯಮಗಳಲ್ಲಿ ಬಿತ್ತರವಾಗಿದೆ. ಸ್ವಾರ್ಥಕ್ಕೋಸ್ಕರ ಅಥವಾ ಪೂರ್ವಗ್ರಹ ಪೀಡಿತರಾಗಿ ಇಂತಹ ವ್ಯಕ್ತಿಗಳು ವಿನಾಕಾರಣ ಸಮಾಜದಲ್ಲಿ ಬ್ರಾಹ್ಮಣರ ವಿರುದ್ಧ ದ್ವೇಷ-ಅಸೂಯೆಗಳ ಬೀಜವನ್ನು ಬಿತ್ತುತ್ತಿದ್ದಾರೆ. ಸಮಾಜದ ಶಾಂತಿ-ಸ್ವಾಸ್ಥ್ಯ ಸಾಮರಸ್ಯಕ್ಕೆ ಧಕ್ಕೆ ತರುತ್ತಿದ್ದಾರೆ. ಇದು ಶೋಚನೀಯ ಬೇಸರದ ಸಂಗತಿ. ವೇದಕಾಲದಿಂದಲೂ ಇಲ್ಲಿಯವರೆಗೆ ಬ್ರಾಹ್ಮಣರು ಎಲ್ಲ ಸಮುದಾಯದವರನ್ನು ಗೌರವದಿಂದ, ವಿಶ್ವಾಸದಿಂದ ಕಂಡಿದ್ದಾರೆ. ಸರ್ವೇಜನಾಃ ಸುಖಿನೋಭವಂತುಃ ಎಂಬುದು ಬ್ರಾಹ್ಮಣರ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಆದ್ದರಿಂದ ಅವರ ಮಟ್ಟಕ್ಕೆ ಇಳಿದು ಕಾದಾಡುವ ಬದಲು ಬ್ರಾಹ್ಮಣರು ತಮ್ಮ ಉದಾರ ಚರಿತ, ಸದಾಚಾರ, ಸತ್ವಗುಣ ಪ್ರಧಾನ ನಡವಳಿಕೆಗಳ ಮೂಲಕ ನಮ್ಮ ವಿರೋಧಿಗಳನ್ನು ಗೆಲ್ಲುವ ಮಾರ್ಗವನ್ನು ಅನುಸರಿಸುವುದು ಸೂಕ್ತ.

ಅಖಿಲ ಕರ್ನಾಟಕದಲ್ಲಿ ವಿಪ್ರ ಯುವ ಶಕ್ತಿ ಜಾಗೃತವಾಗುತ್ತಿದೆ. ಇದಕ್ಕೆ ಕುರುಹಾಗಿ ಬಾಗಲಕೋಟೆ ಜಿಲ್ಲೆಯಲ್ಲಿ ಯುವ ಘಟಕ ಆರಂಭವಗಿದೆ. ಇದೇ ರೀತಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಯುವ ಘಟಕಗಳನ್ನು ರಚಿಸಲಾಗುವುದು. ಇತ್ತೀಚೆಗೆ ಶಿವಮೊಗ್ಗ ಜಿಲ್ಲಾ ಮಹಿಳಾ ಘಟಕವನ್ನು ಆರಂಭಿಸಲಾಗಿದೆ. ಹೀಗೆ ಎಲ್ಲ ಜಿಲ್ಲೆಗಳಲ್ಲಿ ಯುವಕರ ಹಾಗೂ ಮಹಿಳೆಯರ ಕಾರ್ಯ ಪಡೆಯನ್ನು ಸ್ಥಾಪಿಸಿ, ವಿಪ್ರ ಚಟುವಟಿಕೆಗಳಿಗೆ ಚಾಲನೆ ನೀಡಲಾಗುತ್ತಿರುವುದು ಸಂತೋಷದ ಸಮಾಚಾರ.

ಕಳೆದ ತಿಂಗಳು ಎಲ್ಲ ತಾಲ್ಲೂಕುಗಳ ವಿವಿಧ ಉಪಪಂಗಡಗಳ ಬ್ರಾಹ್ಮಣ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳ ಸಭೆ ಭಾರತೀಯ ವಿದ್ಯಾಭವನದಲ್ಲಿ ನಡೆದು ವಿಪ್ರ ಸಮುದಾಯದ ಹಿತರಕ್ಷಣೆ ಹಾಗೂ ಅಭಿವೃದ್ಧಿ ಕುರಿತು ನಡೆಸಿದ ಸಮಾಲೋಚನೆಯು ಫಲಪ್ರದವಾಗಿದೆ.

ರಾಜ್ಯಾದ್ಯಂತ ಇರುವ ಸುಮಾರು 18 ಲಕ್ಷ ಶುಕ್ಲಯುಜುರ್ವೇದಿಗಳ ಸಂಘಟನೆಗೆ ಮಾರ್ಚ್-ಏಪ್ರಿಲ್ 2023ರಲ್ಲಿ ಹುಬ್ಬಳ್ಳಿಯಲ್ಲಿ ಬೃಹತ್ ಸಮಾವೇಶ, ನಡೆಸಲು ಯೋಜಿಸಿರುವುದು ವಿಪ್ರ ಸಮುದಾಯದ ಸಂಘಟನೆಗೆ ಪೂರಕವಾಗಿಯೇ ಇದೆ.

ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಯವರು ರಾಜ್ಯದಾದ್ಯಂತ ಸಂಚರಿಸಿ ಧರ್ಮ, ಸಂಸ್ಕೃತಿಗಳ ಜಾಗೃತಿ ಉಂಟುಮಾಡಿ ತಮ್ಮ ಅಮೃತಹಸ್ತಗಳಿಂದ ರಾಜ್ಯದ ಹಲವಾರು ದೇವಸ್ಥಾನಗಳ ಕುಂಭಾಭಿಷೇಕ ಮಹೋತ್ಸವಗಳಲ್ಲಿ ಪಾಲ್ಗೊಂಡು ಭಕ್ತರನ್ನು ಅನುಗ್ರಹಿಸಿ, ಶಂಕರ ತತ್ವದ ಮಹತ್ವವನ್ನು ತಿಳಿಸುತ್ತಾ ಸಮಾಜದ ಐಕ್ಯಮತ ಮಂತ್ರವನ್ನು ಸಾರುತ್ತಿದ್ದಾರೆ. ಜಗದ್ಗುರುಗಳ ನುಡಿಯನ್ನು ಆದೇಶವೆಂದು ಸ್ವೀಕರಿಸಿ ನಮ್ಮೊಳಗಿನ ಬೇಧ-ಭಾವಗಳನ್ನು ತ್ಯಜಿಸಿ ಸ್ವಪ್ರತಿಷ್ಠೆ ಸ್ವಹಿತಾಸಕ್ತಿಗಳನ್ನು ಮೀರಿ ಸಮಾಜದ ಐಕ್ಯಮತ್ಯ ಹಾಗೂ ಬಲವರ್ಧನೆಗೆ ಸದ್ಭಾವನೆ, ಸಾಮರಸ್ಯಗಳ ಮೂಲಕ ಸನಾತನ ಧರ್ಮದ ಸಂರಕ್ಷಣೆಗೆ ಕಟಿಬದ್ಧರಾಗೋಣ.

**ಅಶೋಕ ಹಾರನಹಳ್ಳಿ**

**ಮಹಾಸಭಾಧ್ಯಕ್ಷರು.**

# ಸಂಪಾದಕೀಯ

ಆತ್ಮೀಯ ವಿಪ್ರಬಂಧುಗಳೇ,

ನಮಸ್ಕಾರ. ನಮ್ಮ ದೇಶದ ಸುಮಾರು 138 ಕೋಟಿ ಜನರಲ್ಲಿ ಶೇಕಡ 50% ಯುವ ಜನತೆ ಇದ್ದಾರೆ. 69 ಕೋಟಿ ಯುವ ಪಡೆ 18 ರಿಂದ 35 ವಯೋಮಾನದವರು. ಈ 138 ಕೋಟಿಯಲ್ಲಿ ಕೇವಲ 3% ಬ್ರಾಹ್ಮಣರು. ಅವರಲ್ಲೂ ಎಷ್ಟು ವಿಪ್ರ ಯುವ ಜನತೆ ಇದ್ದಾರೆ ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲ. ಖಾಸಗೀಕರಣ, ಔದ್ಯೋಗಿಕರಣ, ಜಾಗತೀಕರಣಕ್ಕೆ ನಮ್ಮ ದೇಶವು 30 ವರ್ಷಗಳ ಹಿಂದೆ ತೆರೆದುಕೊಂಡ ಸಮಯದಿಂದ ಇಲ್ಲಿಯವರೆಗೆ ಬ್ರಾಹ್ಮಣ ಯುವಕ–ಯುವತಿಯರು ಉನ್ನತ ವ್ಯಾಸಂಗ, ಉದ್ಯೋಗಕ್ಕಾಗಿ ವಿದೇಶಗಳಿಗೆ ತೆರಳಿದ್ದಾರೆ. ಬಹಳಷ್ಟು ಪ್ರತಿಭಾವಂತರು ಅಮೆರಿಕಾ, ಇಂಗ್ಲೆಂಡ್, ಯುರೋಪ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ದಕ್ಷಿಣ ಏಷ್ಯಾಗಳಲ್ಲಿ ನೆಲೆಸಿ, ಅಲ್ಲಿಯ ಪ್ರಜೆಗಳಾಗಿದ್ದಾರೆ. ಹೀಗಾಗಿ ಇಂದು ನಮ್ಮ ದೇಶದಲ್ಲಿ ವಿಪ್ರ ಯುವ ಪ್ರತಿಭೆಯ ಕೊರತೆ ಇದೆ.

ಭಾರತವು ಆರು ಲಕ್ಷ ಹಳ್ಳಿಗಳ ದೇಶವೆಂದು ಸ್ವಾತಂತ್ರ್ಯ ಬಂದ ಹೊಸದರಲ್ಲಿ ಖ್ಯಾತಿ ಹೊಂದಿತ್ತು. ನಗರಗಳು ಇಷ್ಟೊಂದು ವೇಗವಾಗಿ ಬೆಳದಿರಲಿಲ್ಲ. ಎಲ್ಲ ವಯೋಮಾನದವರಿಗೂ ಒಂದಲ್ಲಾ ಒಂದು ಕೆಲಸವಿತ್ತು. ಸಂತೋಷದಿಂದ ತಮ್ಮ ಕೆಲಸ ಗಳನ್ನು ಮಾಡಿಕೊಂಡು ನೆಮ್ಮದಿಯಿಂದಿದ್ದರು. ಯಾವಾಗ ರಾಷ್ಟ್ರ ರಾಜಕಾರಣ ಹಳ್ಳಿಗಳನ್ನು ಪ್ರವೇಶಿಸಿತೋ, ಆಗಿನಿಂದ ಹಳ್ಳಿಗಳ ಸಾಮರಸ್ಯ ಕೆಡಲು ಪ್ರಾರಂಭವಾಯಿತು. ಸರ್ಕಾರಗಳು ನೂರಾರು ರೀತಿಯ ಸೌಲಭ್ಯಗಳನ್ನು ಗ್ರಾಮೀಣ ಜನರಿಗೆ ಕೊಡಲು ಆರಂಭಿಸಿದಾಗ, ಜನರು, ಯುವಜನತೆ ಸೋಮಾರಿಗಳಾಗಲು ಆರಂಭಿಸಿದರು. ಮತ್ತೊಂದು ಕಡೆ ನಗರಗಳು ಶರವೇಗದಿಂದ ಬೆಳೆದು ಗ್ರಾಮೀಣರು ಉನ್ನತ ಜೀವನ ನಡೆಸಲು ನಗರಗಳಿಗೆ ವಲಸೆ ಬರಲು ಆರಂಭಿಸಿದರು. ಹಳ್ಳಿಗಳ ಸ್ಥಿತಿ, ಅಲ್ಲಿನ ಗ್ರಾಮೀಣರ ದುಸ್ಥಿತಿಗಳನ್ನು ಕೇಳುವವರು ಇಲ್ಲವಾದರು. ನಗರಗಳಲ್ಲಿ ಉದ್ಯೋಗಕ್ಕೆ ವಿಪರೀತ ಸ್ಪರ್ಧೆಯನ್ನು ಎದುರಿಸಬೇಕಾಗಿ ಬಂದಿದ್ದರ ಜೊತೆಗೆ ರಾಜ್ಯ–ಕೇಂದ್ರ ಸರ್ಕಾರಗಳ ವೃತ್ತಿಗಳು, ಉದ್ಯೋಗಗಳು ಮಾರಾಟಕ್ಕೆ ತೆರೆದುಕೊಂಡವು. ಹೀಗಾಗಿ ಇಂದು ಭಾರತದಲ್ಲಿ ನಿರುದ್ಯೋಗ ಸಮಸ್ಯೆ ನಿರಂತರವಾಗಿ ಹೆಚ್ಚುತ್ತಲೇ ಇದೆ.

ಒಂದು ಸಮೀಕ್ಷೆಯ ಪ್ರಕಾರ ನಮ್ಮ ದೇಶದ ನಿರುದ್ಯೋಗಿಗಳ ಸಂಖ್ಯೆಯು ಹಲವು ಅಂದಾಜಿನ ಕೋಟಿಯಷ್ಟಿದೆ. ಹಳ್ಳಿಗಳಲ್ಲಿ ಶಾನುಭೋಗ ವೃತ್ತಿ ಮಾಡಿಕೊಂಡಿದ್ದ ಹಿಂದಿನ ತಲೆಮಾರಿನ ಬ್ರಾಹ್ಮಣರ ಪೀಳಿಗೆ ಯವರು ಕಷ್ಟವನ್ನು ಎದುರಿಸುತ್ತಿದ್ದಾರೆ. ಹಳ್ಳಿಗಳಲ್ಲಿರುವ ದೇವಸ್ಥಾನಗಳನ್ನು ಉತ್ತಮವಾಗಿ ನೋಡಿಕೊಳ್ಳುತ್ತಿದ್ದ ಪುರೋಹಿತರು, ಅವರ ಕುಟುಂಬ ತೀರಾ ಕಷ್ಟದಲ್ಲಿದ್ದಾರೆ. ಹಳ್ಳಿ, ಪಟ್ಟಣಗಳ ಬ್ರಾಹ್ಮಣ ನಿರುದ್ಯೋಗ ಯುವತಿಯರು ಹಾಗೂ ನಗರಗಳ ಉದ್ಯೋಗಸ್ಥ ಯುವತಿಯರು 'ಲವ್ ಜಿಹಾದ್' ಗೆ ಬಲಿಯಾಗುತ್ತಿದ್ದಾರೆ. ಇದು ಅತ್ಯಂತ ಶೋಚನೀಯ ಸಂಗತಿ. ಸ್ವಂತ ಉದ್ಯೋಗ ಮಾಡುವ ಯುವಕ–ಯುವತಿಯರಿಗೆ ಭಾರೀ ಬಂಡವಾಳ ಬೇಕಾಗಿದೆ. ಉದ್ಯಮ ಯಶಸ್ವಿಯಾಗಲು ಹಲವಾರು ವರ್ಷಗಳೇ ಬೇಕಾಗುತ್ತದೆ. ಈ ಕಡೆ ಒಳ್ಳೆಯ ಕೆಲಸವಿಲ್ಲದೇ ಯುವಜನತೆ ತತ್ತರಿಸಿ ಹೋಗುತ್ತಿದೆ.

ಈ ದಿಶೆಯಲ್ಲಿ ನಮ್ಮ ಮಹಾಸಭಾದ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಸಮರ್ಥ ಯುವಪಡೆಯನ್ನು ಕಟ್ಟಿ, ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಮಹಾಸಭಾದ ಮೂಲ ಮಂತ್ರವಾದ 'ಸಂಘಟನೆ–ಸಂಸ್ಕಾರ–ಸ್ವಾವಲಂಬನೆ'ಗೆ ಒತ್ತುಕೊಟ್ಟು ಸಂಪನ್ಮೂಲವನ್ನು ಕ್ರೋಢೀಕರಿಸುತ್ತಿದ್ದಾರೆ. ಅವರ ಈ ಮಹಾನ್ ಸಾಹಸಕ್ಕೆ ವಿಪ್ರ ಉದ್ಯಮಿಗಳು, ಯಶಸ್ವಿ ವೃತ್ತಿಪರರು ಬೆಂಗಾವಲಾಗಿ ನಿಲ್ಲಬೇಕಾಗಿದೆ. ನಮ್ಮ ಜಿಲ್ಲೆಗಳಲ್ಲಿರುವ ವಿಪ್ರ ಯುವ ಜನತೆಯನ್ನು ಗುರುತಿಸಿ, ಅವರನ್ನು ಕೆಲಸಕ್ಕೆ ಹಚ್ಚುವ ಮಹಾನ್ ಕಾರ್ಯವಾಗ ಬೇಕಾಗಿದೆ. ಇದಕ್ಕೆ ಅಪಾರವಾದ ಜನಬಲ, ಧನಬಲ, ದೈವಬಲ ಬೇಕಾಗಿದೆ. ಉದ್ಯಮದಿಂದಲೇ ಅಲ್ಲವೇ ಕಾರ್ಯಗಳು ಸಿದ್ಧಿಸುವುದು! ಕೇವಲ ಮನೋರಥಗಳಿಂದಲ್ಲ. ಮಲಗಿರುವ ಸಿಂಹದ ಬಾಯಿಗೆ ಯಾವುದಾದರೂ ಪ್ರಾಣಿ ಹೋಗಿ ಬೀಳುವುದೇ? **(ಉದ್ಯಮೇ ನ ಹಿ ಸಿದ್ಧ್ಯಂತಿ ಕಾರ್ಯಾಣಿ ನ ಮನೋರಥೈಃ। ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ।**

ಮುಂಬರುವ ದಿನಗಳಲ್ಲಿ ನಮ್ಮ ವಿಪ್ರ ರಾಜಕೀಯ ಮುಖಂಡರು, ವಿಪ್ರ ನೇತಾರರು, ಸ್ವಯಂ ಸೇವಕರು ಈ ಕಾರ್ಯದಲ್ಲಿ ತೊಡಗಲಿ ಎಂದು ಆಶಿಸೋಣ. ವಿಪ್ರ ಯುವಧ್ವನಿ, ಶಕ್ತಿ ರಾಜ್ಯದ ಎಲ್ಲೆಡೆ ಜಾಗೃತವಾಗಲಿ.

**ತಮ್ಮ ವಿಶ್ವಾಸಿ,**
**ಪ್ರೊ. ಎಂ.ಕೆ. ಶ್ರೀಧರ್**
**ಪ್ರಧಾನ ಸಂಪಾದಕ**


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಮಹಾಸಭೆಯಲ್ಲಿ ವಿಜೃಂಭಣೆಯ ಪ್ರತಿಭಾ ಪುರಸ್ಕಾರ

## ಕಠಿಣ ಪರಿಶ್ರಮದಿಂದಲೇ ಯಶಸ್ಸು ಸಾಧ್ಯ –ಸ್ವಾಮಿ ವೀರೇಶಾನಂದ ಸರಸ್ವತಿ






ಕಠಿಣ ಪರಿಶ್ರಮವಿಲ್ಲದಿದ್ದರೆ ಜೀವನದಲ್ಲಿ ಯಶಸ್ಸು ಸಾಧ್ಯವಿಲ್ಲ ಎಂದು ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸ್ವಾಮೀಜಿಯವರು ವಿದ್ಯಾರ್ಥಿ ಸಮುದಾಯಕ್ಕೆ ಕಿವಿಮಾತು ಹೇಳಿದರು.

ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಸಪ್ತರ್ಷಿ ಪ್ರತಿಷ್ಠಾನದ ಸಹಯೋಗದಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತಿಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಜೀವನದಲ್ಲಿ ನಾವು ಬಯಸಿದಂತೆ ಯಶಸ್ಸು ಪಡೆಯಬೇಕೆಂದರೆ ಕಷ್ಟಪಡದೆ ಬೇರೆ ದಾರಿಯಿಲ್ಲ. ವಿದ್ಯಾರ್ಥಿಗಳು ನಕಾರಾತ್ಮಕತೆ ಬಿಟ್ಟು ದೊಡ್ಡ ದೊಡ್ಡ ಆಲೋಚನೆಗಳಿಂದ ಮುನ್ನುಗ್ಗಿದರೆ ಸಾಧನೆಯ ಎತ್ತರದ ಶಿಖರ ಏರಬಹುದು ಎಂದರು.

ನಮ್ಮ ಸಮಾಜಕ್ಕೆ ಅಕ್ಷರಸ್ಥರೇ ನಿಜವಾದ ಶತ್ರುಗಳು ಎಂದ ಅವರು ಪ್ರಜ್ಞಾವಂತಿಕೆ, ವ್ಯಕ್ತಿತ್ವದಲ್ಲಿ ಚಾರಿತ್ರ್ಯ, ಮಾನವೀಯ ಅಂತಃಕರಣ ವಿಲ್ಲದಿದ್ದರೆ ಅಂಥವರಿಂದ ಸಮಾಜಕ್ಕೆ ಹಾನಿ. ಇವಿಲ್ಲದಿದ್ದರೆ ನಾವು ಪಡೆದ ಶಿಕ್ಷಣ ವ್ಯರ್ಥ ಎಂದ ಅವರು, ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ನೋಡುತ್ತಿದ್ದರೆ ನನಗೆ ರೋಮಾಂಚನವಾಗುತ್ತದೆ. ಬುದ್ಧಿವಂತ ಮಕ್ಕಳನ್ನು ಪುರಸ್ಕರಿಸುವುದೆಂದರೆ ಜಗನ್ಮಾತೆಯನ್ನು ಗೌರವಿಸಿ ದಂತೆ ಎನ್ನುವ ಮೂಲಕ ವೀರೇಶಾನಂದ ಸ್ವಾಮೀಜಿಯವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಕಾರ್ಯಕ್ಕೆ ಮೆಚ್ಚುಗೆ ಸೂಚಿಸಿದರು.

ಶಿಕ್ಷಣತಜ್ಞ ಡಾ.ಗುರುರಾಜ ಕರ್ಜಗಿ ಮಾತನಾಡಿ, ಸ್ವಕೇಂದ್ರಿತ ಗುರಿಗಳಿಂದ ಯಾರೂ ದೊಡ್ಡವರಾಗಿಲ್ಲ. ಇತರರಿಗಾಗಿ ಬದುಕಿದರೆ ಮಾತ್ರ ಹೆಚ್ಚಿನ ಸಾಧನೆ ಮಾಡಲು ಸಾಧ್ಯ. ಕಲಿಕೆಯಿಂದಲೇ ಜೀವನ ಮೌಲ್ಯಗಳನ್ನು ರೂಢಿಸಿಕೊಳ್ಳಲು ಸಾಧ್ಯ. ಚಿಕ್ಕಂದಿನಲ್ಲಿ ನಾವು ಕಲಿತ ಮೌಲ್ಯಗಳು ನಮ್ಮನ್ನು ಎಂದಿಗೂ ಬಿಟ್ಟು ಹೋಗುವುದಿಲ್ಲ. ಆಧ್ಯಾತ್ಮ ಮತ್ತು ವೈಜ್ಞಾನಿಕ ಮನೋಭಾವ ವಿದ್ಯಾರ್ಥಿಗಳಿಗೆ ಅತ್ಯಗತ್ಯ. ನಾವು ಮಾಡುವ ಕೆಲಸದಲ್ಲಿ ಶ್ರದ್ಧೆ ಮತ್ತು ಏಕಾಗ್ರತೆ ಬಹುಮುಖ್ಯ. ಪ್ರಾಮಾಣಿಕವಾಗಿ ಮುನ್ನಡೆದರೆ ದೇವರು ನಿಮ್ಮ ನೆರವಿಗೆ ಬರುತ್ತಾನೆ. ಆದರೆ ನಿಮ್ಮ ನಡತೆಯನ್ನು ಸಮಾಜ ಗಮನಿಸುತ್ತಿರುತ್ತದೆ. ನಿಮ್ಮ ನಡೆ ಇತರರಿಗೆ ಮಾದರಿಯಾದರೆ ಮಾತ್ರ ಶಿಕ್ಷಣ ಪಡೆದಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಹಿತ ನುಡಿಗಳನ್ನಾಡಿ, ಜೀವನದಲ್ಲಿ ಆದರ್ಶ, ಉತ್ತಮ ನಡವಳಿಕೆ, ನಮ್ಮ ಜೀವನಶೈಲಿ ಮತ್ತು ಹಿರಿಯರ ಮಾರ್ಗ ದರ್ಶನ ಸಮಾಜದಲ್ಲಿ ಪರಿವರ್ತನೆ ತರುತ್ತದೆ. ಋಷಿ ಪರಂಪರೆಯನ್ನು ಕಾಪಾಡಿಕೊಳ್ಳುವ ಕರ್ತವ್ಯ ನಮ್ಮೆಲ್ಲರ ಮೇಲಿದೆ ಎಂದರು. ಸಂಚಾಲಕ ರಾದ ಅರುಣ್ ಹಿರಿಯಣ್ಣರವರು ಪ್ರಾಸ್ತಾವಿಕ ಭಾಷಣ ಮಾಡಿ ಮಹಾಸಭೆಯು ಪ್ರತಿಭಾವಂತರನ್ನು ಪ್ರೋತ್ಸಾಹಿಸಲು ಯೋಜಿಸಿದ ಕಾರ್ಯಕ್ರಮಗಳನ್ನು ವಿವರಿಸಿದರು.

**ಸಮಾರಂಭದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿಯಲ್ಲಿ ಗರಿಷ್ಠ ಅಂಕ ಪಡೆದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ಪೈಕಿ 100 ಕ್ಕೂ ಹೆಚ್ಚು ಶೇಕಡ ನೂರರಷ್ಟು ಅಂಕಗಳಿಸಿದ ಪ್ರತಿಭಾನ್ವಿತರಿದ್ದದ್ದು ವಿಶೇಷ.**

ಸಮಾರಂಭದಲ್ಲಿ ಕರ್ನಾಟಕ ಸಂಗೀತ ಅಕಾಡೆಮಿ ಅಧ್ಯಕ್ಷರಾಗಿ ನೇಮಕವಾದ ಡಾ॥ ಎಂ.ಆರ್.ವಿ. ಪ್ರಸಾದ್ ಹಾಗೂ ಪ್ರತಿಭಾನ್ವಿತರನ್ನು ಪ್ರೋತ್ಸಾಹಿಸಿದ ಪ್ರಶಾಂತ್ ಗುರುರಾಜ್, ನವೀನ್, ಶಂಕರ್, ಜಿ. ಕೃಷ್ಣಮೂರ್ತಿ ಮತ್ತು ಶ್ರೀಕಾಂತ್‌ರವರನ್ನು ಸನ್ಮಾನಿಸಲಾಯಿತು. ಪರಮಾನಂದ ಸ್ವಾಮೀಜಿ, ಹಿರಿಯ ಕ್ರಿಕೆಟಿಗ ವಿಜಯ್ ಭಾರದ್ವಾಜ್ ಹಾಗೂ ಮಹಾಸಭಾದ ಪದಾಧಿಕಾರಿಗಳು ಸೇರಿದಂತೆ ಸಮಾರಂಭದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು ವಿಶೇಷ ಸಂಗತಿ.



# ಮಹಾಸಭೆಯಿಂದ ಬ್ರಾಹ್ಮಣ ಉಪ ಪಂಗಡಗಳು ಹಾಗೂ ಸಂಘಗಳ ಅಧ್ಯಕ್ಷರು/ಕಾರ್ಯದರ್ಶಿಗಳ ಸಭೆ ಫಲಪ್ರದ




**ಮಹಾಸಭೆ ಆಶ್ರಯದಲ್ಲಿ ದಿನಾಂಕ 26/11/2022 ರ ಶನಿವಾರ ದಂದು ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾ ಭವನದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಬ್ರಾಹ್ಮಣ ಸಂಘಗಳ ಹಾಗೂ ಬ್ರಾಹ್ಮಣ ಉಪ ಪಂಗಡಗಳ ಅಧ್ಯಕ್ಷರ ಹಾಗೂ ಕಾರ್ಯದರ್ಶಿ ಗಳ ಸಮಾಲೋಚನಾ ಸಭೆಯು ನಡೆಯಿತು. ವಿವಿಧ ಸಂಘಗಳ ಸುಮಾರು 150 ಪದಾಧಿಕಾರಿಗಳು ಭಾಗವಹಿಸಿದ ಈ ಸಭೆಯಲ್ಲಿ ಬ್ರಾಹ್ಮಣ ಸಂಘಟನೆಯನ್ನು ಬಲಗೊಳಿಸಿ ಸಮುದಾಯದ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಈ ಮುಂದಿನ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.**

**ನಿರ್ಣಯಗಳು**

1. ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ ಕೊಡಬೇಕಾಗಿರುವ ಶೇಕಡಾ 10ರಷ್ಟು ಮೀಸಲಾತಿ ಕಾಯ್ದೆಯ ಬಗ್ಗೆ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ಪ್ರಕಟಿಸಿ ಸಂವಿಧಾನದ 103 ನೇ ತಿದ್ದುಪಡಿ ಎತ್ತಿ ಹಿಡಿದಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಾಗೂ ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ವರ್ಷಗಳಿಂದ ನೆನೆಗುದಿಗೆ ಬಿದಿದ್ದ EWS ವರ್ಗಕ್ಕೆ ಕೊಡಬೇಕಾಗಿರುವ ಶೇಕಡಾ 10ರಷ್ಟು ಮೀಸಲಾತಿ ಸಮರ್ಪಕವಾಗಿ ಜಾರಿಗೆ ತರಲು ಕಾರ್ಯಪ್ರವೃತ್ತರಾಗಬೇಕೆಂದು ಒಕ್ಕೊರಲಿನಿಂದ ಒತ್ತಾಯಿಸುತ್ತಿದ್ದೇವೆ.

2. EWS certificate ಪರಿಧಿಯ ವ್ಯಾಪ್ತಿ ವಿಸ್ತಾರ ಹೆಚ್ಚಿಸುವುದು (ಅಂದರೆ ಪ್ರಸ್ತುತ EWS Certificate ಅನ್ನು ಕೇವಲ ಒಂದು ವರ್ಷಕ್ಕೆ ನೀಡಲಾಗುತ್ತಿದೆ ಅದನ್ನು ಒಂದು ವರ್ಷದಿಂದ ಕನಿಷ್ಟ 3 ರಿಂದ 5 ವರ್ಷದ ಅವಧಿಗೆ ನೀಡಲು ಕರ್ನಾಟಕ ಸರ್ಕಾರವನ್ನು ಆಗ್ರಹಪಡಿಸಲು ತೀರ್ಮಾನಿಸಲಾಯಿತು.

3. ಬೆಂಗಳೂರು ನಗರದ ಪದ್ಮನಾಭನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಹಾಸಭೆಗೆ ಹಂಚಿಕೆ ಮಾಡಿರುವ ನಾಗರಿಕ ಸೌಲಭ್ಯ ನಿವೇಶನದಲ್ಲಿ ಸುಸಜ್ಜಿತವಾದ ಆಡಿಟೋರಿಯಂ ಕಟ್ಟುವುದು ಮತ್ತು ಈ ಯೋಜನೆಗೆ ಈಗಾಗಲೇ ಅಂದಾಜಿಸಿದಂತೆ ಸರಿ ಸುಮಾರು 20 ಕೋಟಿಗೂ ಹೆಚ್ಚು ವೆಚ್ಚದ ಅಂದಾಜಿದ್ದು, ಕುಂದಾಪುರದ ಸಮ್ಮೇಳನದಲ್ಲಿ ಅಂದಿನ ಮುಖ್ಯಮಂತ್ರಿಗಳು ಈ ಯೋಜನೆಗೆ ಹೆಚ್ಚಿನ ಹಣಕಾಸಿನ ನೆರವನ್ನು ಘೋಷಿಸಿದ್ದರು. ಆದ್ದರಿಂದ ಆ ನೆರವಿನ ಭರವಸೆಯ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆದ್ಯತೆಯ ಮೇರೆಗೆ ಹಣಕಾಸು ಸಹಾಯವನ್ನು ಒದಗಿಸ ಬೇಕೆಂದು ಸರ್ಕಾರ ಹಾಗೂ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪಿಸುವುದು.

4. ಸರ್ಕಾರದ ಪತ್ರಿಕಾ ಜಾಹೀರಾತು ನೀತಿಯಲ್ಲಿ ವಿಪ್ರಬಾಂಧವರು ನಡೆಸುತ್ತಿರುವ ಪತ್ರಿಕೆಗಳಿಗೂ ಸೂಕ್ತ ಜಾಹೀರಾತು ಅವಕಾಶವನ್ನು ಕಲ್ಪಿಸಿಕೊಡುವುದು.

5. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಜಿಲ್ಲಾ ಹಾಗೂ ತಾಲ್ಲೂಕು ಬ್ರಾಹ್ಮಣಸಭಾದ ಸಹಕಾರದೊಂದಿಗೆ ಅಭಿವೃದ್ಧಿ ಮಂಡಳಿಯ ಯೋಜನೆಗಳನ್ನು ರೂಪಿಸಲು ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಸೂಕ್ತ ಹಣಕಾಸು ಸಹಾಯವನ್ನು ಒದಗಿಸಲು ಸಭೆಯು ಸರ್ಕಾರದ ಸಹಾಯವನ್ನು ಕೋರಲಾಗಿದೆ.

6. ನ್ಯಾಯಮೂರ್ತಿ ಶ್ರೀ ನಾಗಮೋಹನ್ ದಾಸ್‌ರವರು ನೀಡಿರುವ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಯಥಾವತ್ತಾಗಿ ಸರ್ಕಾರ ಸಮ್ಮತಿ ಸೂಚಿಸಬಾರದೆಂದು ಅದರಲ್ಲಿ ವೈದಿಕ ಪರಂಪರೆ ಮತ್ತು ಬ್ರಾಹ್ಮಣರನ್ನು ದೂಷಿಸಿರುವುದು ಆಕ್ಷೇಪಣೀಯವೆಂದು ಸಭೆಯು ಅಭಿಪ್ರಾಯಪಟ್ಟಿತು. ಆ ವರದಿಯಲ್ಲಿ ಪರಿಶಿಷ್ಟ ವರ್ಗಗಳ ಬಗ್ಗೆ ಮೀಸಲಾತಿ ಪ್ರಮಾಣದ ಅಂಶಗಳ ಬಗ್ಗೆ ಸರ್ಕಾರ ಸೂಕ್ತ ನಿರ್ಣಯ ಕೈಗೊಳ್ಳಬಹುದು.

ಇದೇ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸಂಸ್ಥಾಪನೆಯಲ್ಲಿ ಹಾಗೂ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಮಹಾಸಭೆಯ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ ಶ್ರೀ ಡಿ.ಎಸ್. ಹೊನ್ನಪ್ಪ ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ ಪ್ರೊ॥ ಎಚ್.ಎಸ್. ಲಕ್ಷ್ಮೀನಾರಾಯಣಭಟ್ಟ ದಂಪತಿಗಳನ್ನು ಆತ್ಮೀಯವಾಗಿ ಸಭೆಯ ಪರವಾಗಿ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಯವರು ಗೌರವಿಸಿದರು.



# ಮಹಾಸಭಾ ಶಿವಮೊಗ್ಗ ಜಿಲ್ಲಾ ಮಹಿಳಾ ಘಟಕ ಉದ್ಘಾಟನಾ ಸಮಾರಂಭ

# ಸಾಮರಸ್ಯದಿಂದ ವಿರೋಧಿಗಳ ಮನಸ್ಸನ್ನು ಬಂಧಿಸಬೇಕು

–ಅಶೋಕ ಹಾರನಹಳ್ಳಿ





ಶಿವಮೊಗ್ಗ : ಬೀದಿಯಲ್ಲಿ ನಿಂತು ಕಾಳಗ ಮಾಡುವುದಕ್ಕಿಂತ ಸಾಮರಸ್ಯದ ಮೂಲಕವೇ ವಿರೋಧಿಗಳ ಮನಸ್ಸನ್ನು ಬಂಧಿಸಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರು ಹೇಳಿದರು.

ಇಲ್ಲಿನ ಜಿಲ್ಲಾ ಬ್ರಾಹ್ಮಣ ಮಹಾಸಭಾ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಶನಿವಾರ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೇತೃತ್ವದಲ್ಲಿ ಆಯೋಜಿಸಿದ್ದ ಶಿವಮೊಗ್ಗ ಜಿಲ್ಲಾ ಮಹಿಳಾ ಘಟಕ ಉದ್ಘಾಟಿಸಿ ಮಾತನಾಡಿ, ಬ್ರಾಹ್ಮಣರ ಬಗ್ಗೆ ಕೆಲವರು ಅವಹೇಳನ ಮಾಡುತ್ತಿದ್ದಾರೆ. ದ್ವೇಷ ಸಾಧಿಸಿ, ಅಸಹನೆ ಉಂಟು ಮಾಡುತ್ತಿದ್ದಾರೆ. ಅದು ಏಕೆ ಎಂದೇ ಅರ್ಥವಾಗುತ್ತಿಲ್ಲ. ಇದಕ್ಕೆಲ್ಲ ತಲೆಕೆಡಿಸಿಕೊಳ್ಳ ಬಾರದು. ಬೇರೆಯವರಿಂದ ಕಲಿಯುವ ಬದಲು ನಾವೇ ಬೇರೆಯವರಿಗೆ ಮಾರ್ಗದರ್ಶಕರಾಗಬೇಕು ಎಂದು ಸಲಹೆ ನೀಡಿದರು.

ಸಂದಿಗ್ಧ ಪರಿಸ್ಥಿತಿಯಲ್ಲಿ ವಿಪ್ರರು ಒಂದು ರೀತಿಯಲ್ಲಿ ಕಳೆದುಹೋಗುತ್ತಿದ್ದಾರೆ. ಇದಕ್ಕಾಗಿ ನಮ್ಮನ್ನು ಟೀಕಿಸಿದವರಿಗೆ ನಾವು ಅವರೊಂದಿಗೆ ಜಗಳ ಮಾಡಬಾರದು. ಉದಾಹರಣೆಗೆ ಅಕಾಡೆಮಿಕ್ ವಲಯದ ಮಲ್ಲಿಕಾ ಘಂಟಿ ಅವರು ಬ್ರಾಹ್ಮಣರ ಕುರಿತು ಏನೇನೋ ಮಾತನಾಡಿದ್ದಾರೆ. ಅದಕ್ಕಾಗಿ ನಾವೇಕೆ ತಲೆ ಕೆಡಿಸಿಕೊಳ್ಳಬೇಕುಇ. ಅದು ಅವರ ಮನೋಭಾವನೆಯ ಪ್ರತೀಕವಾಗಿದೆ ಅಷ್ಟೇ ಎಂದ ಅವರು, ಸರ್ಕಾರದ ಸವಲತ್ತುಗಳಿಗೆ ಕಾಯುವುದಕ್ಕಿಂತ ನಾವೇ ಆರ್ಥಿಕ, ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಮುಂದೆ ಬರಬೇಕು ಎಂದರು.

ಪ್ರತಿ ಜಿಲ್ಲೆಯಲ್ಲಿ ಮಹಿಳಾ ಘಟಕ ಕಾರ್ಯಾರಂಭ ಮಾಡಬೇಕು ಎಂಬ ಆಶಯ ಇದೆ. ಅದಕ್ಕೆ ತಕ್ಕಂತೆ ಶಿವಮೊಗ್ಗದಲ್ಲಿ ಘಟಕ ಆರಂಭವಾಗಿದೆ. ರಾಜ್ಯಾದ್ಯಂತ 500 ಜನರನ್ನು ಗುರುತಿಸಿ ಸಂಚಾಲಕರಾಗಿ ನಿಯುಕ್ತಿ ಮಾಡಲಾಗುವುದು. ಮುಂದಿನ ವರ್ಷ ಮಹಿಳಾ ಸಮ್ಮೇಳನ ಆಯೋಜಿಸುವ ಗುರಿ ಹೊಂದಲಾಗಿದೆ. ಪ್ರತಿ ತಾಲ್ಲೂಕಿನಲ್ಲೂಈ ಮಹಿಳಾ ಘಟಕ ಕಾರ್ಯಾರಂಭ ಮಾಡಬೇಕು. ಮಹಾಸಭಾದಿಂದ ಬರುವ ಏಪ್ರಿಲ್‌ನಲ್ಲಿ ಶುಕ್ಲಯಜುರ್ವೇದ ಸಮ್ಮೇಳನ, ನಂತರದಲ್ಲಿ ಬರುವ ಯುವ ಹಾಗೂ ಮಹಿಳಾ ಸಮ್ಮೇಳನ ನಡೆಸುವ ಉದ್ದೇಶ ಇದೆ ಎಂದರು.

ನಾವು ಏನೆಲ್ಲಾ ಕಳೆದುಕೊಂಡಿದ್ದೇವೆ. ನಮ್ಮ ಹಿರಿಯರು ಭೂಮಿ ಕಳೆದುಕೊಂಡರು.. ನಾವು ಉಳುತ್ತಿದ್ದ ಭೂಮಿ ಯಾವ್ಯಾವುದೋ ನೆಪದಲ್ಲಿ ಬೇರೆಯವರ ಪಾಲಾಯಿತು. ಮೀಸಲಾತಿಯೂ ಇಲ್ಲವಾಯಿತು. ಈಗ ಶೇ.10ರಷ್ಟು ಮೀಸಲಾತಿ ಬಂದರೂ ಅದಿನ್ನೂ ಸ್ಪಷ್ಟವಾಗಿ ತೀರ್ಮಾನವಾಗಿಲ್ಲ. ಅದಕ್ಕೆ ಇನ್ನೆನೋ ಸಮಿತಿಗಳು ಬೇಕು ಎಂದು ಹೇಳುತ್ತಿದ್ದಾರೆ. ಹಾಗೆಂದು ತಲೆಕೆಡಿಸಿಕೊಂಡು ಕೂರದೇ ನಮ್ಮ ಕೆಲಸವನ್ನು ಮಾಡುತ್ತಾ ಆದರ್ಶ, ಸಂಸ್ಕೃತಿ ಎತ್ತಿ ಹಿಡಿಯುತ್ತಾ, ವಿರೋಧಿಗಳ ಮನಸ್ಸುಗಳನ್ನು ಒಲಿಸಿಕೊಳ್ಳುತ್ತಾ ಮುನ್ನೆಡೆಯೋಣ ಎಂದರು.

ಅಖಿಲ ಕರ್ನಾಟಕ ಬ್ರಹ್ಮಣ ಮಹಾಸಭಾ ರಾಜ್ಯ ಸಂಚಾಲಕಿ ಶ್ರೀಮತಿ ಶುಭಮಂಗಳ ಸುನೀಲ್ ದಿಕ್ಸೂಈಚಿ ಭಾಷಣ ಮಾಡಿದರು. ಕಾರ್ಯಕಾರಿ ಸಮಿತಿ ರಾಜ್ಯ ಸಹ ಸಂಚಾಲಕಿ ಭಾರತಿ ಸತೀಶ್, ಜಿಲ್ಲಾ ಸಂಚಾಲಕಿ ಪವಿತ್ರಾ ಆದರ್ಶ ಮೊದಲಾದವರು ಉಪಸ್ಥಿತರಿದ್ದರು. ಈಲ್ಲಾ ಬ್ರಹ್ಮ ಮಹಾಸಭಾ ಅಧ್ಯಕ್ಷ ಕೆ.ಸಿ. ನಟರಾಜ ಭಾಗವತ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕಾರಿ ಸಮಿತಿ ಸದಸ್ಯರ ಉಷಾ ವೆಂಕಟೇಶ್ ಸ್ವಾಗತಿಸಿದರು. ಸರಳಾ ಹೆಗಡೆ, ಪಾರ್ವತಿ ಅತಿಥಿಗಳನ್ನು ಪರಿಚಯಿಸಿದರು.

**ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಚಿತ್ರ ಸಹಿತ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು. ಲೇಖನ ವರದಿಗಳನ್ನು ಕಳುಹಿಸಬೇಕಾದ**

**ಇ–ಮೇಲ್ : e mail : vipranudi@gmail.com**

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/- ಸಂದಾಯಮಾಡಿ ಚಂದಾದಾರರಾಗಿ**

# ಬಾಗಲಕೋಟೆ ಜಿಲ್ಲೆಯಲ್ಲಿ ಯುವ ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

## ಮತಗಳಲ್ಲಿ ಭೇದಮಾಡದೆ ನಾವೆಲ್ಲ ಒಂದಾಗೋಣ : ಸಂದೀಪ ರವಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಯುವ ಘಟಕ ಬಾಗಲಕೋಟೆ ಜಿಲ್ಲಾ ಮತ್ತು ತಾಲೂಕ ಯುವ ಘಟಕದ ಪದಗ್ರಹಣ ಕಾರ್ಯಕ್ರಮ ಜಮಖಂಡಿಯಲ್ಲಿ ನೆರವೇರಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವೇದಬ್ರಹ್ಮ ಶ್ರೀ ರಂಗಾಚಾರ್ ಜೋಶಿರವರು ವಹಿಸಿದ್ದರು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯುವ ಘಟಕದ ಸಂಚಾಲಕರಾದ ಶ್ರೀ ಸಂದೀಪ್ ರವಿ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಯುವ ಘಟಕದ ರಾಜ್ಯ ಸಹ ಸಂಚಾಲಕರಾದ ವಿನಯ್‌ದೇಶಪಾಂಡೆ, ಮಾಧವ್ ದೇಶಪಾಂಡೆ, ರವರು, ರಾಜ್ಯ ಕಾರ್ಯಕಾರಣಿ ಸದಸ್ಯರಾದ ಭಾಸ್ಕರ್ ಮನಗೋಲಿ ರವರು, ನವೀನ್ ಕುಲಕರ್ಣಿ ರವರು, ಜಿಲ್ಲಾ ಯುವ ಘಟಕದ ನೂತನ ಸಂಚಾಲಕರಾದ ಶ್ರೀ ಸಂದೀಪ್ ಹುಲ್ಯಾಲ್‌ಕರ್ ರವರು ಮತ್ತು ಜಿಲ್ಲಾ ಬ್ರಾಹ್ಮಣ ಸಭಾದ ಮುಖಂಡರಾದ ಶ್ರೀ ನಿತಿನ್ ಹುಲ್ಯಾಲ್‌ಕರ್ ರವರು, ಶ್ರೀ ಶ್ರೀನಿವಾಸ್ ಪುರೋಹಿತ್ ರವರು, ಶ್ರೀ ನಾರಾಯಣ ಶಾಸ್ತ್ರಿ ರವರು ಮತ್ತು ಇತರ ಬ್ರಾಹ್ಮಣ ಸಮಾಜದ ಮುಖಂಡರುಗಳು ಉಪಸ್ಥಿತರಿದ್ದರು.

ಬ್ರಾಹ್ಮಣರು ಒಂದಾಗಬೇಕು. ಎಲ್ಲ ಮತಗಳನ್ನು ಭೇದಮಾಡದೇ ನಾವೆಲ್ಲ ಒಂದು ಎನ್ನುವ ಮನೋಭಾವನೆಯನ್ನು ಹೊಂದಿರಬೇಕು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ಯುವಕರಿಗಾಗಿ ಸಾಲ ಸೌಲಭ್ಯ ಮತ್ತು ಸಂಘದ ಸದಸ್ಯರಿಗೆ ಆಸ್ಪತ್ರೆಯ ಸೌಲಭ್ಯ ಒದಗಿಸಲಾಗುವುದು. ನಮ್ಮಲ್ಲಿ ಸಂಘಟನೆಯಿದ್ದರೆ ಎಲ್ಲಾ ಸರಕಾರಗಳು ಸಹ ನಮ್ಮನ್ನು ತಿರುಗಿ ನೋಡುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಯುವಘಟಕದ ರಾಜ್ಯ ಸಂಚಾಲಕ ಸಂದೀಪ ರವಿ ಹೇಳಿದರು.

ನಗರದ ವಿದ್ಯಾಭವನ ಶಾಲಾ ಆವರಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಬಾಗಲಕೋಟೆ ಜಿಲ್ಲೆ ಮತ್ತು ಎಲ್ಲಾ ತಾಲ್ಲೂಕುಗಳ ಯುವ ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದರು.

ಯುವ ಘಟಕದ ಸಹ ಸಂಚಾಲಕ ವಿನಯ್ ದೇಶಪಾಂಡೆ



ಮಾತನಾಡಿ ಇಂದು ಸಂಘಟನೆ ಅತ್ಯಗತ್ಯವಾಗಿದೆ. ಯುವಕರು ಇಂದು ಶಿಕ್ಷಿತರಾಗಿ ಮೇಲೇಳಬೇಕು. ಲವ್ ಜಿಹಾದ್‌ನಲ್ಲಿ ನಮ್ಮ ಯುವತಿಯರೇ ಹೆಚ್ಚು ಬಲಿಯಾಗುತ್ತಿದ್ದಾರೆ. ಅದನ್ನು ನಾವೆಲ್ಲ ಒಟ್ಟಾಗಿ ತಪ್ಪಿಸಬೇಕು. ಅದರ ಜೊತೆಗೆ ನಮ್ಮ ಸಂಸ್ಕಾರವನ್ನು ಎಲ್ಲರೂ ಮೈಗೂಡಿಸಬೇಕು ಎಂದರು. ಸಹ ಸಂಚಾಲಕ ಮಾಧವರಾವ್ ದೇಶಪಾಂಡೆ, ನಾರಾಯಣ ಶಾಸ್ತ್ರಿ ಮಾತನಾಡಿದರು. ಪಂಡಿತ ರಂಗಾಚಾರ್ಯ ಜೋಶಿ ಆಶೀರ್ವಚನ ನೀಡಿದರು. ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಸನ್ಮಾನ ಮಾಡಿದರು. ಬಾಗಲಕೋಟೆ ಸೇರಿದಂತೆ ಎಲ್ಲ ತಾಲ್ಲೂಕುಗಳ ಯುವ ಘಟಕದ ಪದಾಧಿಕಾರಿಗಳ ಪದಗ್ರಹಣ ನಡೆಯಿತು. ಜಿಲ್ಲಾ ಯವ ಘಟಕದ ಅಧ್ಯಕ್ಷರಾಗಿ ಸಂದೀಪ್ ಹುಲ್ಯಾಳಕರ ಸೇರಿದಂತೆ ಪದಾಧಿಕಾರಿಗಳು ಪದಗ್ರಹಣ ಮಾಡಿದರು. ವೇದಿಕೆಯಲ್ಲಿ ನವೀನ ಕುಲಕರ್ಣಿ, ಭಾಸ್ಕರ ಮನಗೋಳಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ಪುರೋಹಿತ, ಸಂತೋಷ ಹುಲ್ಯಾಲ ಇನ್ನಿತರರು ಇದ್ದರು.

ರಾಜೇಂದ್ರ ಹುಲ್ಯಾಳಕರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರಂಜನಿ ಹುಲ್ಯಾಳಕರ ಪ್ರಾರ್ಥಿಸಿದರು. ಪ್ರೊ ಪ್ರವೀಣ ಕುಲಕರ್ಣಿ ನಿರೂಪಿಸಿದರು. ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯ ನಿತೀನ ಹುಲ್ಯಾಳಕರ ವಂದಿಸಿದರು.



### ಸಾಗರದಲ್ಲಿ ಕುಂಭಾಭಿಷೇಕ ಮಹೋತ್ಸವ

## ಆದಿ ಶಂಕರರು ಬೋಧಿಸಿದ ಐಕ್ಯಮತ ಮಂತ್ರ ಇಂದಿಗೂ ಅನುಕರಣೀಯ

**-ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿಗಳು**

ವಾಸ್ತವದಲ್ಲಿ ಪ್ರಪಂಚದಲ್ಲಿ ಐಕ್ಯಮತ ತೋರಿಸಿದ್ದೇ ನಮ್ಮ ಭಾರತೀಯ ಧರ್ಮ. ನಾವು ಪರಸ್ಪರ ಯುದ್ಧ ಮಾಡುತ್ತಿಲ್ಲ. ಇಷ್ಟು ಭಿನ್ನಾಭಿಪ್ರಾಯಗಳಿದ್ದರೂ ಎಲ್ಲರೂ ತುಂಬ ಸೌಹಾರ್ದಿಂದ ಇದ್ದೇವೆ ಎಂದು ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿಗಳು ಹೇಳಿದರು.

ಇಲ್ಲಿನ ಮಹಾಗಣಪತಿ, ವೆಂಕಟೇಶ್ವರ, ಹರದೂರು ಶ್ರೀ ದುರ್ಗಾಂಬಾ ಸೇವಾ ಸಮಿತಿ ಹಾಗೂ ಕುಂಭಾಭೀಷೇಕ ಮಹೋತ್ಸವ ಸ್ವಾಗತ ಸಮಿತಿ ಆಯೋಜಿಸಿದ್ದ ಕುಂಭಾಭೀಷೇಕದಲ್ಲಿ ಇತ್ತೀಚೆಗೆ ಅವರು ಪಾಲ್ಗೊಂಡು ಆಶೀರ್ವಚನ ಮಾಡಿದರು. ಇತರ ಧರ್ಮ ದವರು ನಮ್ಮನ್ನು ನೋಡಿ ಒಮ್ಮತವಿಲ್ಲ ಎನ್ನುತ್ತಾರೆ. ನಿಮ್ಮಲ್ಲಿ ಬೇರೆ ಬೇರೆ ದೇವರು, ಗುಂಪುಗಳಿವೆ. ಭಸ್ಮ, ನಾಮ, ಕುಂಕುಮ ಹಚ್ಚಿ ಕೊಳ್ಳುತ್ತಾರೆ. ಅಸಂಬದ್ಧ ಮಾತುಗಳನ್ನಾಡುತ್ತಾರೆ. ಆದರೆ ಉಳಿದವರಂತೆ ಜಗತ್ತಿನಾದ್ಯಂತ ಹೊಡೆದಾಡುವುದು ನಮ್ಮ ಸಂಸ್ಕೃತಿ ಯಲ್ಲ. ನಮ್ಮಲ್ಲಿರುವ ಐದು ಬೆರಳುಗಳಂತೆ ವೈರುಧ್ಯಗಳಿದ್ದರೂ ಒಗ್ಗಟ್ಟಾಗಿರುವುದನ್ನು ನೆಲ, ಸಂಸ್ಕೃತಿ ಕಲಿಸಿಕೊಟ್ಟಿದೆ. ಭಗವಂತ ಒಬ್ಬನೇ ರೂಪು ಹಲವು ಎನ್ನುವ ಮೂಲಕ ಶ್ರೀ ಶಂಕರಾಚಾರ್ಯರು ಶತಮಾನಗಳ ಹಿಂದೆಯೇ ನಮ್ಮಲ್ಲಿ ಐಕ್ಯಮತದ ಅಗತ್ಯ ಹಾಗೂ ಅದನ್ನು ಬೆಳೆಸುವ ಬಗೆಯನ್ನು ಉಪದೇಶಿಸಿದ್ದಾರೆ. ಶಂಕರರ ತತ್ವವನ್ನು ಆಚರಣೆಗೆ ತರುವ ಮೂಲಕ ಸನಾತನ ಧರ್ಮ ಸಂರಕ್ಷಣೆಯ ಕಾರ್ಯದಲ್ಲಿ ಎಲ್ಲರೂ ಭಾಗಿಗಳಾಗಬೇಕೆಂದು ಕರೆ ನೀಡಿದರು.

ಸನ್ಯಾಸಿಗಳಿಗೆ ಧರ್ಮ ವಿಷಯದಲ್ಲಿ ಜನರಿಗೆ ಮಾರ್ಗದರ್ಶನ ಮಾಡಲು ರಾಗ-ದ್ವೇಷಗಳಿರಬಾರದು. ಎಲ್ಲರನ್ನು ಸಮಾನವಾಗಿ ನೋಡುವ ಮನೋಭಾವವಿರಬೇಕೆನ್ನುವುದು ಶಂಕರರ ಆಶಯ ವಾಗಿತ್ತು. ದೇಶಾದ್ಯಂತ ಸಂಚರಿಸಿ ತಪ್ಪು ಮಾರ್ಗದಲ್ಲಿರುವವರನ್ನು ಸರಿಯಾದ ಹಾದಿಗೆ ತಂದರು. ಚತುರಾಮ್ನಾಯ ಪೀಠ ಸ್ಥಾಪಿಸಿ, ಪೀಠಾಧಿಪತಿಗಳು ಹೇಗೆ ಧರ್ಮ ಪ್ರಚಾರ ಮಾಡಬೇಕೆನ್ನುವುದನ್ನು ಜಗತ್ತಿಗೆ ಉಪದೇಶಿಸಿದ್ದಾರೆ ಎಂದರು. ಹೈಕೋರ್ಟ್‌ನ ಹಿರಿಯ ವಕೀಲ ಕೆ. ದಿವಾಕರ್, ಸಾಗರದ ಶಾಖೆ ಶಂಕರಮಠದ ಅಶ್ವಿನಿ ಕುಮಾರ್ ಮಾತನಾಡಿದರು.

ನಗರಸಭೆ ಉಪಾಧ್ಯಕ್ಷ ವಿ. ಮಹೇಶ್, ಸ್ವಾಗತ ಸಮಿತಿ ಗೌರವಾಧ್ಯಕ್ಷ ಶಂಕರ ಶ್ಯಾನಭಾಗ್, ಅಧ್ಯಕ್ಷ ಅಶೋಕ್ ಜಿ. ಭಟ್, ಕಾರ್ಯಾಧ್ಯಕ್ಷ ಟಿ.ವಿ. ಪಾಂಡುರಂಗ, ಸಿ.ಎಂ.ಎನ್. ಶಾಸ್ತ್ರಿ, ಬಿ.ಎಚ್. ಲಿಂಗರಾಜ್, ಮ.ಸ. ನಂಜುಂಡಸ್ವಾಮಿ, ದಿನೇಶ್ ಕುಮಾರ್ ಜೋಶಿ ಮುಂತಾದ ಹಲವು ವಿಪ್ರ ಮುಖಂಡರು ಉಪಸ್ಥಿತರಿದ್ದರು.

## ನಗರದಲ್ಲಿ ಶ್ರೀ ಗುರು ದತ್ತಾತ್ರೇಯ ಜಯಂತಿ ಆಚರಣೆ



ಶ್ರೀ ಗುರು ದತ್ತಾತ್ರೇಯ ಚಾರಿಟೆಬಲ್ ಟ್ರಸ್ಟ್ (ರಿ) ಮುಖ್ಯಸ್ಥರಾದ ಶ್ರೀ ಲೋಕೇಶ್ ಶರ್ಮಾ ಮತ್ತು ತಂಡವು ಇಂದು ಶ್ರದ್ಧಾ ಭಕ್ತಿಗಳಿಂದ ಶ್ರೀ ದತ್ತಾತ್ರೇಯ ಜಯಂತಿಯನ್ನು ಆಚರಿಸಿದರು. ನೂರಾರು ಭಕ್ತರು ಭಾಗವಹಿಸಿದ್ದರು. ಕಾರ್ಯಕ್ರಮ ಯಶಸ್ವಿಯಾಯಿತು

### ವಿಪ್ರನುಡಿಗೆ ಚಂದಾದಾರರಾಗಲು ಮನವಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂ ಉಚಿತವಾಗಿ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಚಂದಾದಾರರಾಗಲು ವಿನಂತಿಸುತ್ತೇವೆ. ಈ ವಿಪ್ರನುಡಿ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡ ಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.**

## ಉತ್ತರಾದಿ ಮಠದಲ್ಲಿ ಆರು ಲಕ್ಷ ದೀಪೋತ್ಸವ
## ಅಂಧಕಾರ ಹೋಗಲಾಡಿಸಲು ದೀಪ ಹಚ್ಚಿ : ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಕಾರ್ಯಕ್ರಮ ಭವ್ಯವಾಗಿ ನಡೆಯಿತು. ಒಟ್ಟು ಆರು ಲಕ್ಷ ದೀಪದ ಬೆಳಕು ಝಗಮಗಿಸಿದವು. ಬೆಳಿಗ್ಗೆ ಶ್ರೀ ಅಕ್ಷೋಭ್ಯತೀರ್ಥರ, ಶ್ರೀ ಜಯತೀರ್ಥರ ಹಾಗೂ ಶ್ರೀ ರಗುನಾಥತೀರ್ಥರ ಮೂಲ ವೃಂದಾವನಗಳಿಗೆ ವಿಶೇಷ ಪೂಜೆ, ಅಲಂಕಾರ, ಪಂಚಾಮೃತಾಭಿಷೇಕ ಹಾಗೂ ಹಸ್ತೋದಕ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಲಕ್ಷ ದೀಪೋತ್ಸವ ನಂತರ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಅನುಗ್ರಹ ಸಂದೇಶ ನೀಡಿ, ಸೂರ್ಯ, ಚಂದ್ರ, ಅಗ್ನಿ ಸೇರಿ ಪ್ರಕಾಶಮಾನವಾದ ವಸ್ತುಗಳನ್ನು ನೀಡಿದ ಭಗವಂತನಿಗೆ ಸ್ಮರಿಸುವ ಸಂಕೇತವಾಗಿ ದೀಪ ಬೆಳಗಬೇಕು ಎಂದು ಶ್ರೀಪಾದಂಗಳವರು ಹೇಳಿದರು.

ಭಗವಂತನು ನಿತ್ಯದಲ್ಲಿ ಸ್ವಯಂ ಪ್ರಕಾಶಮಾನನಾಗಿದ್ದಾನೆ. ನಾವು ಕೊಡುವ ಬೆಳಕು ಭಗವಂತನಿಗೆ ಬೇಕಿಲ್ಲ. ನಮ್ಮಲ್ಲಿನ ಅಂಧಕಾರ ಹೋಗಲಾಡಿಸಲು ನಾವು ದೀಪವನ್ನು ಹಚ್ಚಬೇಕು. ತತ್ವ ಪ್ರಪಂಚಕ್ಕೆ ಜಯತೀರ್ಥರೆಂಬ ದೀಪದ ಬೆಳಕನ್ನು ನೀಡಿದ ಶ್ರೀ ಅಕ್ಷೋಭ್ಯತೀರ್ಥರ ಸನ್ನಿಧಾನದಲ್ಲಿ ಆರು ಲಕ್ಷ ದೀಪ ಬೆಳಗುವ ಮೂಲಕ ಕೃತಜ್ಞತೆ ಸಲ್ಲಿಸಲಾಗಿದೆ ಎಂದರು.

ವಿದ್ಯಾಧೀಶಾಚಾರ್ಯ ಗುತ್ತಲ ಮಾತನಾಡಿ, ಪ್ರಣತಿ ಎಂಬ ಮನಸ್ಸಿನಲ್ಲಿ ಪಂಚೇಂದ್ರಿಯಗಳೆಂಬ ಐದು ಬತ್ತಿ ಹಾಕಿ ದೀಪ ಬೆಳಗಲಾಗುತ್ತಿದೆ. ನನ್ನ ಐದು ಇಂದ್ರಿಯಗಳನ್ನು ನಿನಗೆ ಸಮರ್ಪಿಸುವೆ ಎಂಬ ಅನುಸಂಧಾನದ ಮೂಲಕ ಭಗವಂತನಲ್ಲಿ ಪ್ರಾರ್ಥಿಸಬೇಕು. ದೇವರಿಗೆ ನಾವು ಬೆಳಗುವ ದೀಪದ ಬೆಳಕಿನ ಅಗತ್ಯವಿಲ್ಲ. ನಮ್ಮ ಉದ್ಧಾರಕ್ಕಾಗಿ ನಾವು ದೀಪ ಹಚ್ಚಬೇಕು. ಒಂದು ಸೂರ್ಯನಲ್ಲಿ ದೊಡ್ಡ ತೆಗ್ಗು ಮಾಡಿದರೆ ಅದು ಮುಚ್ಚುವುದಕ್ಕೆ ಲಕ್ಷಾನುಗಟ್ಟಲೆ ಎಕರೆ ಭೂಮಿ ಬೇಕು. ಜಗತ್ತನ್ನು ಬೆಳಗಲು ಸೂರ್ಯನ ಅಧಿಪತಿಯಾಗಿದೆ. ದೀಪ ಹಚ್ಚುವುದು ಭಗವಂತನಿಗಾಗಿ ಅಲ್ಲ. ನಮ್ಮ ಆತ್ಮೋದ್ಧಾರಕ್ಕಾಗಿ ದೀಪ ಹಚ್ಚಬೇಕು ಎಂದರು.

ಗೋಮಾಯದಿಂದ ಒಂದು ಲಕ್ಷ ಪ್ರಣತಿ ಸಿದ್ದಪಡಿಸಲಾಗಿತ್ತು. ಮಳಖೇಡ ಉತ್ತರಾದಿ ಮಠದಿಂದ ಜ್ಞಾನದ ಬೆಳಕು ಜಗತ್ತನ್ನು ಬೆಳಗಲಿ ಎಂಬ ಉದ್ದೇಶದಿಂದ ಲಕ್ಷ ದೀಪೋತ್ಸವ ಹಮ್ಮಿಕೊಳ್ಳಲಾಗಿದೆ. ರಾಜ್ಯ ಸೇರಿ, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿನಿಂದ ಅಪಾರ ಪ್ರಮಾಣದ ಭಕ್ತರು ಆಗಮಿಸಿ ದೀಪೋತ್ಸವ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದರು.

ಉತ್ತರಾದಿಮಠದ ದಿವಾನರಾದ ಶಶಿ ಆಚಾರ್ಯ, ಮಳಖೇಡ ಉತ್ತರಾದಿ ಮಠದ ವ್ಯವಸ್ಥಾಪಕ ವೆಂಕಣ್ಣಾಚಾರ್ಯ ಪೂಜಾರ, ಪಂಡಿತ್ ಗೋಪಾಲಾಚಾರ್ಯ ಅಕಮಂಚಿ, ಪಂ. ವಿಷ್ಣುದಾಸ ಚಾರ್ಯ ಖಚೂರಿ, ಪಂ.ಹನುಮಂತಾಚಾರ್ಯ ಸರಡಗಿ, ಪಂ. ಪ್ರಸನ್ನಾಚಾರ್ಯ ಜೋಶಿ ಸೇರಿ ಅಪಾರ ಭಕ್ತರು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಡಾ. ಕಮಲಾಕರ್ ಕುಲಕರ್ಣಿ ರಚಿತ ಹರಿದಾಸರ ಸಾಹಿತ್ಯದಲ್ಲಿ ವೈರಾಗ್ಯ ತತ್ವ ಗ್ರಂಥ ಲೋಕಾರ್ಪಣೆ ಮಾಡಲಾಯಿತು.

## ಫೆಬ್ರವರಿ 12ರಂದು ಬೀದರ ಜಿಲ್ಲಾ ಬ್ರಾಹ್ಮಣ ಸಮ್ಮೇಳನ

ಗುರು ಹಿರಿಯರ ಮಾರ್ಗದರ್ಶನದಂತೆ ಸಂಘಟನೆಯಲ್ಲಿ ಶಕ್ತಿ ಇದೆ. ಈ ಮಾತು ಬಹಳ ಪ್ರಸ್ತುತ, ಇಂದು ದೇಶದಲ್ಲಿ ಅತಿಹೆಚ್ಚು ದಬ್ಬಾಳಿಕೆಗೆ ಒಳಗಾದ ಸಮಾಜ ಎಂದರೆ ಅದು ಬ್ರಾಹ್ಮಣರು, ಸಾಮಾಜಿಕ ಕಾಳಜಿಯಿಂದ ಇಂದು ನಾವುಗಳು ಜಾಗೃತರಾಗಿ, ಸಂಘಟಿತವಾಗಬೇಕಿದೆ, ಸಮಾಜವನ್ನು ಸದೃಢಗೊಳಿಸಲು ಒಗ್ಗೂಡಬೇಕಿದೆ. ಅದರಂತೆ ಬರುವ ಫೆಬ್ರುವರಿ ತಿಂಗಳ 12– 02– 2023 ರಂದು ಬೀದರ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಮಾಡಬೇಕು ಎಂದು ಜಿಲ್ಲಾ ಬ್ರಾಹ್ಮಣ ಸಂಘವು ನಿರ್ಧರಿಸಿದೆ. ಈ ಸಂದರ್ಭದಲ್ಲಿ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರು ಹಾಗೂ ಮಹಾಸಭೆಯ ಕೇಂದ್ರ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ವೇಂಕಟೇಶ್ ಮೊರಖಂಡಿಕರ ರವರ ವಿನಂತಿ ಏನೆಂದರೆ :

'ಹಿಂದೂ ಧರ್ಮದ ಸಂಸ್ಕೃತಿಗೆ ಮೂಲ ಸನಾತನ ಸಂಸ್ಕೃತಿ, ಈ ಸನಾತನ ಸಂಸ್ಕೃತಿಯ ಸಂರಕ್ಷರು ಶ್ರೀಮತಸ್ಥ ಬ್ರಾಹ್ಮಣರು. ನಮ್ಮ ಸಂಸ್ಕೃತಿ, ಆಚರಣೆ, ವೇದ ಹಾಗೂ ಗ್ರಂಥಗಳೇ ದೇಶಕ್ಕೆ ಮಾರ್ಗ ದರ್ಶನವಾಗಿವೆ. ಆದರೆ ಸಂಸ್ಕೃತಿಯ ಪ್ರತಿಪಾದಕರಾದ ಬ್ರಾಹ್ಮಣರು ಇಂದು ಸಾಮಾಜಿಕವಾಗಿ ದಬ್ಬಾಳಿಕೆಗೆ ಒಳಗಾಗಿದ್ದಾರೆ, ನಮ್ಮ ಸಮುದಾಯ ಹಾಗೂ ಸಮಾಜದ ಒಳಿತಿಗಾಗಿ, ಇದರ ರಕ್ಷಣೆ ಮತ್ತು ಬಲವಾದ ಸಂಘಟನೆ ನಿರ್ಮಿಸಲು ಹಾಗೂ ಯುವ ಪೀಳಿಗೆಯಿಂದ ಭವಿಷ್ಯದ ದೃಷ್ಟಿಯಿಂದ ಸದೃಢರಾಗುವ ಉದ್ದೇಶದಿಂದ ಪ್ರಥಮ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ. ಈ ಸಮ್ಮೇಳನದಲ್ಲಿ ಸಮಾಜದ ಪ್ರತಿಯೊಬ್ಬರ ಸಹಕಾರ ಅಗತ್ಯವಿದೆ, ಆದಕಾರಣ ಸಮಾಜದ ಸಮಸ್ತ ಬಾಂಧವರು ಈ ಸಂಘಟನೆಗೆ ಕೈ ಜೋಡಿಸುವ ಮೂಲಕ ಮೋದಲನೆ ಸಮ್ಮೇಳನ ಯಶಸ್ವಿ ಮಾಡೋಣ. ಸಮಾಜದ ಏಳಿಗೆಗಾಗಿ, ಸದೃಢ ಸಂಘಟನೆಗಾಗಿ ನಿಮ್ಮ ಸಲಹೆ ಸೂಚನೆಗಳು ಕೂಡಾ ಅತ್ಯಂತ ಮಹತ್ವದ್ದಾಗಿದೆ' ಎಂದರು.

ಸಮ್ಮೇಳನ ಯಶಸ್ವಿಗಾಗಿ ಪ್ರತಿಯೊಬ್ಬರು ತನು, ಮನ, ಧನದಿಂದ ಸಹಾಯ ಮಾಡಬೇಕು ಎಂದು ಸಮಾಜ ಭಾಂದವರನ್ನು ಈ ಸಂದರ್ಭದಲ್ಲಿ ವಿನಂತಿಸಿಕೊಂಡರು.

# ಶುಕ್ಲಯಜುರ್ವೇದಿಗಳ ಸಂಘಟನೆಗೆ ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಮೊದಲ ಬೃಹತ್ ಸಮಾವೇಶಕ್ಕೆ ನಿರ್ಧಾರ



ರಾಜ್ಯಾದ್ಯಂತ ಇರುವ ಸುಮಾರು 18 ಲಕ್ಷ ಶುಕ್ಲಯಜುರ್ವೇದಿಗಳನ್ನು ಸಂಘಟಿಸುವ ದೃಷ್ಟಿಯಿಂದ 2023ರ ಏಪ್ರಿಲ್ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಮೊದಲ ಬೃಹತ್ ಸಮಾವೇಶ ನಡೆಸಲು ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಲು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಒಮ್ಮತದಿಂದ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ವೈ.ಎ. ಸುಧಾಕರಬಾಬು ಅವರನ್ನು ಸಂಚಾಲಕರನ್ನಾಗಿ ನೇಮಿಸಿದ್ದಾರೆ.

ಮಹಾಸಭೆಯ ಉಪಾಧ್ಯಕ್ಷ ಶ್ರೀ ರಾಜೇಂದ್ರಪ್ರಸಾದ್ ಹಾಗೂ ಸಂಘಟನಾ ಕಾರ್ಯದರ್ಶಿ ಶ್ರೀ ರಾಘವೇಂದ್ರ ಭಟ್ಟ ಮತ್ತು ಶುಕ್ಲಯಜುರ್ವೇದ ಸಂಘದ ಪದಾಧಿಕಾರಿಗಳು ಮತ್ತು ಮುಖಂಡರುಗಳು ಮಹಾಸಭೆಯ ವತಿಯಿಂದ ಈ ಬೃಹತ್ ಸಮಾವೇಶ ನಡೆಸುವ ಬಗ್ಗೆ ಅಧ್ಯಕ್ಷರೊಡನೆ ಸಮಾಲೋಚನೆ ನಡೆಸಿದರು. ಶುಕ್ಲಯಜುರ್ವೇದಿ ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ನೆಲಸಿರುವುದರಿಂದ ಸಮಾವೇಶವನ್ನು ಹುಬ್ಬಳ್ಳಿಯಲ್ಲಿ ನಡೆಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು. ನಾಡಿನ ಸಮಸ್ತ ಶುಕ್ಲಯಜುರ್ವೇದಿಗಳು ಈ ಮಹಾ ಸಮಾವೇಶವು ಯಶಸ್ವಿಯಾಗಲು ಸಹಕರಿಸಬೇಕೆಂದು ಉಪಾಧ್ಯಕ್ಷರಾದ ಶ್ರೀ ರಾಜೇಂದ್ರಪ್ರಸಾದ್‌ರವರು ಈ ಸಂದರ್ಭದಲ್ಲಿ ವಿನಂತಿಸಿದರು.

# ಮಲ್ಲೇಶ್ವರಂನಲ್ಲಿ ಶ್ರೀ ಗೀತಾ ಜಯಂತಿ






ಮಲ್ಲೇಶ್ವರಂ ಬ್ರಾಹ್ಮಣ ಮಹಾಸಭಾ ಮತ್ತು ಟಿಟಿಡಿ ಸಹಯೋಗದೊಂದಿಗೆ ನೆನ್ನೆ ಶ್ರೀ ಗೀತಾ ಜಯಂತಿಯ ಆಚರಣೆಯನ್ನು ವಿಜೃಂಭಣೆಯಿಂದ ಮಲ್ಲೇಶ್ವರಂ ಯದುಗಿರಿಯ ಯತಿ ರಾಜ ಮಠದ ಸಂಸ್ಕೃತಿ ಭವನದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ತ್ರಿಮತಸ್ಥರ 3 ಗುರುಗಳನ್ನು ಒಂದೇ ವೇದಿಕೆಯುಲ್ಲಿ ಅದ್ದೂರಿಯಾಗಿ ಕರೆತರಲಾಯಿತು. ಶ್ರೀ ಕೃಷ್ಣನ ಗೀತಾ ಸಾರವನ್ನು ಅತ್ಯಂತ ಅದ್ಭುತವಾಗಿ ಮೂರು ಗುರುಗಳು ಮನಮುಟ್ಟುವಂತೆ ವಿವರಿಸಿದರು. ಕಣ್ಮುಂದೆ ಶ್ರೀಕೃಷ್ಣ ನಿಂತಂತೆ ಭಾಸವಾಯಿತು. ಅವಿಚ್ಛಿನ್ನ ಪರಂಪರೆಯ ಕೂಡ್ಲಿ ಶೃಂಗೇರಿ ಮಹಾಸಂಸ್ಥಾನದ ಶ್ರೀ ವಿದ್ಯಾ ವಿಶ್ವೇಶ್ವರ ಭಾರತೀ ಸ್ವಾಮಿಗಳು, ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಸ್ವಾಮಿಗಳು, ಶ್ರೀ ವಿಶ್ವ ಪ್ರಸನ್ನತೀರ್ಥ ಶ್ರೀಪಾದಂಗಳವರು ಒಂದೇ ವೇದಿಕೆಯಲ್ಲಿ ಮೂರು ದಿಗ್ಗಜರನ್ನು  ಕಾಣುವುದು ಸೌಭಾಗ್ಯವನಿಸಿತು.

ಹಿಂದೂ ಸಂಸ್ಕೃತಿಯ ಬಗ್ಗೆ, ಇಂದಿನ ಪರಿಸ್ಥಿತಿಯ ಬಗ್ಗೆ ರೋಮಾಂಚನಕಾರಿ ಭಾಷಣ ನೀಡಿದ ಶ್ರೀಯುತ ಪ್ರಮೋದ್ ಮುತಾಲಿಕ್ ರವರನ್ನು ಗುರುಗಳು ಸತ್ಕರಿಸಿದರು.

ಶ್ರೀ. ಭಾಸ್ಕರ್ ರಾವ್ ಅವರು ಈ ಸಂದರ್ಭದಲ್ಲಿ ಸಭೆಯನ್ನು ಉದ್ಘಾಟಿಸಿ ಬ್ರಾಹ್ಮಣರ ಒಗ್ಗಟ್ಟು ಹೇಗಿರಬೇಕು ಎಂಬುದರ ಬಗ್ಗೆ ವಿಚಾರವನ್ನು ತಿಳಿಸಿದರು.

ಇಂತಹ ಸತ್ಕಾರ್ಯ ನಡೆಯಲು ಸಹಾಯ ಮಾಡಿದ ಸಂಸ್ಥೆಗೆ ಮತ್ತು ಅದರ ಅಧಿಕಾರಿಗಳಿಗೆ ಶ್ರೀಯುತ ಕೌಶಿಕ್ ಅವರಿಗೆ ನಮನವನ್ನು ಸಲ್ಲಿಸೋಣ.

ಉತ್ತರ ವಲಯದಲ್ಲಿ ಇಂತಹ ಕಾರ್ಯಕ್ರಮಗಳು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು. ಬ್ರಾಹ್ಮಣರ ಒಗ್ಗಟ್ಟು ಇಡೀ ಜಗತ್ತಿಗೆ ತಿಳಿಯಬೇಕು.

ಶ್ರೀ ವಿಕ್ರಮ್ ರವರು ಸಂಜಯ ನಗರದ ಮಠದ ಪರವಾಗಿ ಶ್ರೀಗಳಿಗೆ ಸೇವೆಯನ್ನು ಸಲ್ಲಿಸಿದರು.

ಶ್ರೀಯುತ. ಶ್ರೀಕಂಠಪ್ರಸಾದರವರು ಇನ್ನು ಮುಂತಾದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

# ಚೆನ್ನೈಯಲ್ಲಿ ದಕ್ಷಿಣ ಭಾರತ ಬ್ರಾಹ್ಮಣ ಸಂಘಗಳ ಒಕ್ಕೂಟದ ಸಭೆ



ದಕ್ಷಿಣ ಭಾರತದ ಎಲ್ಲ ಬ್ರಾಹ್ಮಣ ಸಂಘಗಳು ಒಂದೇ ಅಡಿಯಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು ತಮಿಳುನಾಡು ಬ್ರಾಹ್ಮಣ ಸಂಘ (ಕುಂಭಕೋಣಂ) ದವರು ನಡೆಸಿದ ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಜಂಟಿ ಕಾರ್ಯದರ್ಶಿಗಳಾದ ಶ್ರೀ ಆರ್. ರವಿಕುಮಾರ್ ರವರು ಭಾಗವಹಿಸಿದ್ದರು. ಈ ಸಭೆಯಲ್ಲಿ ಕೇರಳ ಹಾಗೂ ತೆಲಂಗಾಣ ಬ್ರಾಹ್ಮಣ ಸಂಘಗಳೂ ಸಹ ಉಪಸ್ಥಿತರಿದ್ದರು.

ದೇಶಾದ್ಯಂತ ಬ್ರಾಹ್ಮಣರು ಒಗ್ಗಟ್ಟಿನಿಂದ ಸಮಾಜದ ಬಲವರ್ಧನೆಗೆ ಪ್ರಯತ್ನಿಸುವಂತೆ ಈ ಸಭೆಯಲ್ಲಿ ಸುಧೀರ್ಘವಾಗಿ ಚರ್ಚೆ ನಡೆಸಲಾಯಿತು. ರವಿಕುಮಾರ್‌ರವರು 1 ವರ್ಷದಿಂದ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕಹಾರನಹಳ್ಳಿ ಅವರ ನೇತೃತ್ವದಲ್ಲಿ ಮಹಾಸಭೆಯು ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳ ವಿವರವನ್ನು ನೀಡಿದ ಸಂದರ್ಭದಲ್ಲಿ ಎಲ್ಲಾ ಪದಾಧಿಕಾರಿಗಳು ಮಹಾಸಭೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು.



# ಬೆಳಗಾವಿಗೆ ಮಹಾಸಭಾಧ್ಯಕ್ಷರ ಭೇಟಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿಯವರು ಬೆಳಗಾವಿಯಲ್ಲಿಂದು ಸಮಾಜ ಸಂಘಟನೆ ಬಗ್ಗೆ ಚರ್ಚೆ ನಡೆಸಿದರು. ಕಿತ್ತೂರು ಕರ್ನಾಟಕ ಭಾಗದ ಬ್ರಾಹ್ಮಣ ಸಮಾವೇಶ ಮಾಡುವುದು ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ವಿಲಾಸ ಜೋಶಿ. ನಗರಸೇವಕಿ ವಾಣಿ ಜೋಶಿ. ಪ್ರಿಯಾ ಪುರಾಣಿಕ, ಅನಿಲ ಕುಲಕರ್ಣಿ, ಅಕ್ಷಯ ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.

## ಪ್ರಮೋದ್ ಮುತಾಲಿಕ್ ಮಹಾಸಭೆಗೆ ಭೇಟಿ



ಶ್ರೀರಾಮ ಸೇನೆಯ ಮುಖ್ಯಸ್ಥರಾದ ಶ್ರೀ ಪ್ರಮೋದ್ ಮುತಾಲಿಕ ಅವರು ಮಹಾಸಭಾ ಅಧ್ಯಕ್ಷರನ್ನು ಭೇಟಿ ಮಾಡಿ ಮಹಾಸಭಾ ಹಮ್ಮಿ ಕೊಂಡಿರುವ ನೂತನ ಯೋಜನೆಗಳ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗು ಮುಂದಿನ ದಿನಗಳಲ್ಲಿ ಶ್ರೀ ಅಶೋಕ ಹಾರನಹಳ್ಳಿ ಅವರು ಮಹಾಸಭೆಯನ್ನು ಇನ್ನಷ್ಟು ಎತ್ತರಕ್ಕೆ ಕೊಂಡ್ಯೊ ಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

## ಯಲಹಂಕದಲ್ಲಿ ಸದಸ್ಯತ್ವ ಅಭಿಯಾನ






ಮಹಾಸಭಾ ಉಪಾಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದ್. ಸಂಘಟನಾಕಾರ್ಯದರ್ಶಿ ಶ್ರೀ ರಾಘವೇಂದ್ರ ಭಟ್ಟ, ಜಂಟಿ ಕಾರ್ಯದರ್ಶಿ ಹೆಚ್.ಸಿ. ಪುರುಷೋತ್ತಮ, ಕಾರ್ಯಕಾರಿಣಿ ಸದಸ್ಯರಾದ ಪುರುಷೋತ್ತಮಾಚಾರ್ ವೈದ್ಯ, ರಾಘವೇಂದ್ರ, ಟಿ.ಎಲ್.ಎಸ್. ಕುಮಾರ್, ವಿನಾಯಕ ಮತ್ತು ಯಲಹಂಕ ಬ್ರಾಹ್ಮಣ ಸಭಾದ ಅಧ್ಯಕ್ಷರು, ಪದಾಧಿಕಾರಿಗಳು ಈ ಸದಸ್ಯತ್ವ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ನೆರವಾದರು.

ಈ ಅಭಿಯಾನದಲ್ಲಿ 150ಕ್ಕೂ ಹೆಚ್ಚು ನೂತನ ಸದಸ್ಯರು ನೋಂದಾವಣೆಯಾಗಿದ್ದು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮುಂಬರುವ ದಿನಗಳಲ್ಲಿ ಸದಸ್ಯರಾಗುವ ಭರವಸೆ ನೀಡಿದರು.

## ಶ್ರೀ ಕೃಷ್ಣೇಂದ್ರ ಗುರುಗಳ ಆರಾಧನೆ



ಶ್ರೀ ಕೃಷ್ಣೇಂದ್ರ ಗುರುಗಳ ಆರಾಧನೆ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಮನೋಳಿ ಅವರು ಗುರುಗಳ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಉತ್ಸವ ಸಮಿತಿಯ ಆಡಳಿತ ಮಂಡಳಿ ಹಾಗೂ ನೂರಾರು ಭಕ್ತರು ಭಾಗವಹಿಸಿದ್ದರು

## ಆರ್.ಸಿ. ವಿಕ್ರಮ್ ನಾಗರವರಿಗೆ ಅಭಿನಂದನೆಗಳು



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಆಜೀವ ಸದಸ್ಯರಾದ ಶ್ರೀ ಆರ್. ಚಂದ್ರಶೇಖರ್‌ರವರ ಪುತ್ರ ಚಿ॥ ಆರ್.ಸಿ. ವಿಕ್ರಮ್ ನಾಗರವರು ಬಿ.ಇ. (ಎಲೆಕ್ಟ್ರಾನಿಕ್ಸ್ ಅಂಡ್ ಟೆಲಿಕಮ್ಯುನಿಕೇಷನ್) ಯಲ್ಲಿ ರಾಜ್ಯಕ್ಕೆ 2ನೇ ರ್‍ಯಾಂಕ್ ಪಡೆದು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದಾರೆ. ಇವರು ಬೆಂಗಳೂರಿನ ಎಂ.ಎಸ್. ರಾಮಯ್ಯ ತಾಂತ್ರಿಕ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ಸಿಲ್ವರ್ ಮೆಡಲ್ ಅನ್ನೂ ಸಹ ಪಡೆದಿರುತ್ತಾರೆ. ಇವರಿಗೆ ಮಹಾಸಭೆಯ ವತಿಯಿಂದ ಹಾರ್ದಿಕ ಅಭಿನಂದನೆಗಳು.

**ಪ್ರಕಟಣೆ ಅಯುತ ಚಂಡಿ ಯಾಗದ ಕಾರ್ಯಕ್ರಮಕ್ಕೆ ಸುಮಾರು 50 ಜನರು ಋತ್ವಿಜರು ಬೇಕಾಗಿದ್ದಾರೆ**

ಮುಂಬರುವ ಫೆಬ್ರವರಿ 2023 ರಲ್ಲಿ ಮಾಘ ಬಹುಳ ಮಾಸದಲ್ಲಿ ಹಾಗೂ ಫಾಲ್ಗುಣ ಶುದ್ಧ ಮಾಸದಲ್ಲಿ ಹರಿಯಾಣದಲ್ಲಿ ಒಂದು ತಿಂಗಳು ನಡೆಯುವಂತಹ ಅಯುತ ಚಂಡಿ ಯಾಗದ ಕಾರ್ಯಕ್ರಮಕ್ಕೆ ಸುಮಾರು 50 ಋತ್ವಿಜರು ಬೇಕಾಗಿದ್ದಾರೆ. ಅಲ್ಲಿ ಸಲಕ್ಷಣವಾಗಿ ಸಪ್ತಶತೀ ಚಂಡಿ ಪಾರಾಯಣವನ್ನು ಮಾಡುವಂತಹ ಋತ್ವಿಜರು ಬೇಕಾಗಿದ್ದಾರೆ. ಹೋಗಿ ಬರುವ ಖರ್ಚಿನ ಜೊತೆಗೆ ದಿನವೊಂದಕ್ಕೆ 2,500 ಸಾವಿರಗಳ ಸಂಭಾವನೆ ನೀಡಲಿದ್ದಾರೆ. **ಆಸಕ್ತಿಯುಳ್ಳವರು ಬೇಗ ಸಂಪರ್ಕಿಸಬೇಕಾಗಿ ವಿನಂತಿ.**

**ಯಮ್ಮನೂರು ಚಿದಂಬಶಾಸ್ತ್ರಿ , ಬೆಂಗಳೂರು ಮೊ. : 9611145750**

# ಬ್ಯಾಡ್‌ಮಿಟನ್ ವಿಪ್ರ ಕಪ್–2022







13.11.2022ರಂದು ಬೆಂಗಳೂರಿನ ವಸಂತವಲ್ಲಭ ನಗರದಲ್ಲಿ ರಾಜ್ಯಮಟ್ಟದ ಎಲ್ಲಾ ತ್ರಿಮತಸ್ಥ ಬ್ರಾಹ್ಮಣರಿಗೆ ಬ್ಯಾಡ್ಮಿಂಟನ್ ಪಂದ್ಯಾಟವು ನಡೆಯಿತು. ಈ ಪಂದ್ಯಾಟವನ್ನು ಶ್ರೀ ವಿಲಾಸ್ ಖಾಡಿಲ್ಕರ್ ಹಾಗೂ ಶ್ರೀ ಶ್ರೀವತ್ಸ ಗೋಖಲೆ ಯವರು ಆಯೋಜಿಸಿದ್ದರು. ದ್ವಾರಕಾ ಲಾಡ್ಜಿಂಗ್ ನ ಮಾಲಕರಾದ ಶ್ರೀ ಶ್ರೀನಿವಾಸ್ ರಾವ್ ಅವರು ದೀಪ ಬೆಳಗಿಸಿ ಪಂದ್ಯಾಟಕ್ಕೆ ವಿದ್ಯುಕ್ತವಾಗಿ ಚಾಲನೆಯನ್ನು ನೀಡಿದರು. ಅವರೊಂದಿಗೆ ಹನುಮಗಿರಿ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಅಶ್ವಥ್ ನಾರಾಯಣ, ಹರ್ಷ ರಿಫ್ರೆಶ್ಮೆಂಟ್ ನ ಮಾಲಕರದ ಶ್ರೀ ಸುಧೀರ್, ಹನುಮಗಿರಿ ಬ್ರಾಹ್ಮಣ ಸಭಾದ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ್ ಉಪಸ್ಥಿತರಿದ್ದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ಸಹಕಾರ್ಯದರ್ಶಿಗಳಾದ ಶ್ರೀ ಕಾರ್ತಿಕ್ ಬಾಪಟ್ ಮಾತನಾಡಿ ಇಂತಹ ಕಾರ್ಯಕ್ರಮಗಳು ಬ್ರಾಹ್ಮಣ ಮಿತ್ರರನ್ನು ಸೇರಿಸಲು ಉತ್ತಮ ವೇದಿಕೆ ಎಂದು ಹೇಳಿದರು, ಸಮಾರೋಪ ಸಮಾರಂಭದಲ್ಲಿ ಅತಿಥಿಗಳಾಗಿ ಶ್ರೀ ಗಣಪತಿ ಜೋಶಿ, ಶ್ರೀ ನಿಖಿಲ್ ಭಾರದ್ವಾಜ್, ಶ್ರೀ ಜಯಸಿಂಹ ಶತ್ರುಘ್ನ, ಶ್ರೀಮತಿ ಪೂರ್ಣಿಮಾ ಜಗನ್ನಾಥ್, ಶ್ರೀ ಸುದರ್ಶನ ಪಟವರ್ಧನ್, ಶ್ರೀ ವಿನೋದ್ ಖಾಡಿಲ್ಕರ್ ಮತ್ತು ಬ್ಯಾಡ್ಮಿಂಟನ್ ಕೋರ್ಟ್ ನ ಮಾಲಕರಾದ ಶ್ರೀ ಧನಂಜಯರವರು ಉಪಸ್ಥಿತರಿದ್ದರು.

# ಅ.ನಾ. ಪ್ರಹ್ಲಾದರಾವ್ ಪದಬಂಧಕ್ಕೆ ಮತ್ತೊಂದು ದಾಖಲೆಯ ಗರಿ



ಬೆಂಗಳೂರು: ಪದಬಂಧ ಬರವಣಿಗೆಯಲ್ಲಿ ಹೆಸರು ಮಾಡಿದ ಶ್ರೀ ಅ.ನಾ.ಪ್ರಹ್ಲಾದ್‌ರಾವ್ ಅವರ ಇದುವರೆಗಿನ ಪ್ರಕಟಿತ ಪದಬಂಧ ಪುಸ್ತಕಗಳು ಭಾರತದಲ್ಲೇ ಅಧಿಕ ಎಂಬ ನೂತನ ದಾಖಲೆ ಬರೆದಿವೆ. ಇಂಡಿಯಾ ಬುಕ್ ಆಫ್ ರೆಕಾರ್ಡ್ ಈ ಬಗ್ಗೆ ಪ್ರಕಟಣೆಯೊಂದನ್ನು ಹೊರಡಿಸಿದೆ. ಅವರ ಪದಬಂಧಗಳು ಕಳೆದ ಹಲವಾರು ವರ್ಷಗಳಿಂದ ಪ್ರತಿದಿನವೂ ಸಂಯುಕ್ತ ಕರ್ನಾಟಕ ಹಾಗೂ ಹಲವು ಸಿನಿ ಮ್ಯಾಗಜಿನ್‌ಗಳಲ್ಲಿ ಪ್ರಕಟಗೊಳ್ಳುತ್ತಿದೆ.

ಅ.ನಾ.ಪ್ರಹ್ಲಾದ್‌ರಾವ್ ಅವರು ಮಾತನಾಡುತ್ತಾ, 2023ರ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನ ಪುಸ್ತಕದಲ್ಲಿ ನನ್ನ ಪದಬಂಧ ಪುಸ್ತಕಗಳನ್ನು ಪರಿಗಣಿಸಿರುವುದು ಸಂತಸ ತಂದಿದೆ ಎಂದರು. ಇದುವರೆಗೂ ಪ್ರಕಟಗೊಂಡ 13 ಪದಬಂಧ ಪುಸ್ತಕಗಳ ಪೈಕಿ ಲಭ್ಯವಿರುವ 11 ಪುಸ್ತಕದಲ್ಲಿ ದಾಖಲಿಸಲು ಪರಿಗಣನೆಗೆ ತೆಗೆದುಕೊಳ್ಳಲಾಗಿದ್ದೂ ಕೂಡ ದೇಶದಲ್ಲಿ ಪ್ರಕಟಗೊಂಡ ಅತಿ ಹೆಚ್ಚು ಪದಬಂಧ ಪುಸ್ತಕಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ನನ್ನ ಎಲ್ಲ ಪದಬಂಧ ಪುಸ್ತಕಗಳನ್ನು ಪ್ರಕಟಿಸಿದ ಕೀರ್ತಿ ಜಯನಗರದ ವಸಂತ ಪ್ರಕಾಶ ಸಂಸ್ಥೆಗೆ ಸಲ್ಲುತ್ತದೆ ಎಂದು ರಾವ್ ತಿಳಿಸಿದ್ದಾರೆ.

**ಮಾನ್ಯ ಸದಸ್ಯರಲ್ಲಿ ವಿನಂತಿ:**

**ಮಹಾಸಭೆಯ ಸದಸ್ಯರ ಪಟ್ಟಿಯನ್ನು ಪರಿಷ್ಕರಿಸಲಾಗುತ್ತಿದೆ. ಆಜೀವ/ದಾನಿ/ ಅಂಗಸಂಸ್ಥೆ ಸದಸ್ಯರ ವಿಳಾಸಗಳು ಬದಲಾವಣೆ ಆಗಿರುವಲ್ಲಿ ತಮ್ಮ ಸದಸ್ಯತ್ವ ಸಂಖ್ಯೆಯೊಂದಿಗೆ, ಇತ್ತೀಚಿನ ವಿಳಾಸ ಹಾಗೂ ಮೊಬೈಲ್ ಸಂಖ್ಯೆಗಳನ್ನು ಹಾಗೂ ಹಿರಿಯ ಸದಸ್ಯರು ದೈವಾಧೀನರಾಗಿರುವ ಸಂದರ್ಭದಲ್ಲಿ ಅವರ ಮಾಹಿತಿಗಳನ್ನು ಮಹಾಸಭೆಗೆ ಕಳುಹಿಸಿಕೊಟ್ಟರೆ ಸದಸ್ಯತ್ವ ಪಟ್ಟಿಯನ್ನು ಪರಿಷ್ಕರಿಸಲು ಬಹಳ ಸಹಾಯವಾಗುತ್ತದೆ. ಸದರಿ ಕಾರ್ಯಕ್ರಮಕ್ಕೆ ತಮ್ಮ ಸಹಕಾರ ಕೋರಿದೆ.**

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ
## ಪಾಠಶಾಲಾ ವಿದ್ಯಾರ್ಥಿಗಳಿಗೆ ಸಂಸ್ಕೃತ ಭಾಷಣ ಸ್ಪರ್ಧೆ



ರಾಯಚೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಯುವ ಘಟಕ, ರಾಯಚೂರು ಜಿಲ್ಲೆ ವತಿಯಿಂದ ನವಂಬರ್ 14 ಮಕ್ಕಳ ದಿನಾಚರಣೆ ಪ್ರಯುಕ್ತ ನಗರದ ಜವಾಹರ ನಗರದ ಶ್ರೀ ಗುರುಸಾರ್ವಭೌಮ ಪಾಠಶಾಲಾದಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕೃತ ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಯುವ ಘಟಕದ ಸಹಸಂಚಾಲಕ ಹನುಮೇಶ ಸರಾಫ್ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಮಠದ ವಿಚಾರಣಾಕರ್ತರು ಹಾಗೂ ಬ್ರಾಹ್ಮಣ ಮಹಾಸಭಾದ ಹಿರಿಯ ಪ್ರಕೋಷ್ಠದ ಸದಸ್ಯರಾದ ನರಸಿಂಗರಾವ ದೇಶಪಾಂಡೆ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಡಾ.ಆನಂದ ಫಡ್ನೀಸ್,

ಜಿಲ್ಲಾ ಸಂಚಾಲಕರಾದ ಡಿ.ಕೆ.ಮುರುಳಿಧರ, ಮಠದ ವ್ಯವಸ್ಥಾಪಕರಾದ ದ್ವಾರಕಾನಾಥ ಆಚಾರ್ಯರು ಭಾಗವಹಿಸಿದ್ದರು,

ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ, ದ್ವಿತೀಯ, ಹಾಗೂ ತೃತೀಯ ಬಹುಮಾನ ಘೋಷಿಸಲಾಯಿತು, ಬಹುಮಾನ ವಿತರಣೆಯನ್ನು ಸಮಾಜದ ಹಿರಿಯರಾದ ಶ್ರೀ ಅನಂತರಾವ ಸರಾಫ್ ನೆರವೇರಿಸಿದರು. ನಂತರದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಹಣ್ಣುಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಯುವ ಘಟಕದ ಸಮಿತಿ ಸದಸ್ಯ ವಿನೋದ ಸಾಗರ, ವಂದನಾರ್ಪಣೆಯನ್ನು ರಾಯಚೂರು ಜಿಲ್ಲಾ ಯುವ ಘಟಕ ಸಂಚಾಲಕ ಪ್ರಲ್ಹಾದ ಕುಲಕರ್ಣಿ ಮಾಡಿದರು.

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,**
**ಬ್ಯಾಂಕ್ ಕಾಲೋನಿ, ಬೆಂಗಳೂರು–560 050.**

## ಸ್ಥಳದ ಬಾಡಿಗೆ ಇರುವುದಿಲ್ಲ

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,**
**ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,**
**ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು**
**ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**
**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**
**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**
**ದೂರವಾಣಿ : 080–26793054 ಮೊಬೈಲ್ 8277433666**

## ಡಾ.ಹೊನ್ನವಳ್ಳಿ ರಾಮಸ್ವಾಮಿ.



1963 ರಲ್ಲಿ ವಿದ್ಯಾರ್ಥಿಯಾಗಿ ಅಮೇರಿಕಕ್ಕೆ ಬಂದ ಅವರು ಇಲ್ಲಿಗೆ ನಂತರ ಬಂದ ವಲಸಿಗ ಕನ್ನಡ ಕುಟುಂಬಗಳಿಗೆ ಪೋಷಕ ಸ್ಥಾನವನ್ನು ತುಂಬಿದ್ದರು. ಅವರು ಅಟ್ಲಾಂಟಾದಾದ್ಯಂತ ವಿವಿಧ ಚಟುವಟಿಕೆಗಳಲ್ಲಿ ಸ್ವಯಂಸೇವಕರಾಗಿದ್ದರು ಮತ್ತು ಇತ್ತೀಚಿನವರೆಗೂ ಅವರು ಇಲ್ಲಿನ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಾಗಿದ್ದರು.

ಅವರು ಬಿಟ್ಟು ಹೋದ ನಂತರ ತೆರವಾದ ಜಾಗವನ್ನು ತುಂಬುವುದು ಅಸಾಧ್ಯ. ಇಲ್ಲಿನ ಅನಿವಾಸಿ ಕನ್ನಡಿಗರ ಹೃದಯದಲ್ಲಿ ಅವರಿಗೆ ಸದಾ ಪ್ರೀತಿಯ ಸ್ಥಾನವಿದ್ದೇ ಇದೆ. ಪ್ಲೇಗ್‌ನಿಂದ ತಾಯಿಯನ್ನು ಕಳೆದುಕೊಂಡ ಚಿಕ್ಕ ಹುಡುಗ ತನ್ನ ಜೀವನವನ್ನು ಹೇಗೆ ಮುನ್ನಡೆಸಿದರು ಮತ್ತು ತನ್ನ ಜೀವನದಲ್ಲಿ ತನ್ನನ್ನು ಮಾತ್ರವಲ್ಲದೆ ತನ್ನ ಸುತ್ತಲಿನ ಎಲ್ಲ ಜನರ ಜೀವನವನ್ನು ಸದಾ ಮೇಲೆತ್ತುವ ಪ್ರಯತ್ನ ಮಾಡುತ್ತಿದ್ದರು ಎಂಬುದು ಎಲ್ಲರಿಗೂ ಸ್ಫೂರ್ತಿಯಾಗಿದೆ!

ಕನ್ನಡಕ್ಕಾಗಿ ಸದಾ ತುಡಿಯುತ್ತಿದ್ದ ಡಾ. ರಾಮಸ್ವಾಮಿಯವರು ಇಲ್ಲಿದ್ದ ಕೆಲವೇ ಕೆಲವು ಕನ್ನಡ ಕುಟುಂಬಗಳನ್ನು ಸೇರಿಸಿ 1973 ರಲ್ಲಿ ಕಟ್ಟಿದ ನೃಪತುಂಗ ಕನ್ನಡ ಕೂಟ ಇಂದು ಬಹಳ ಯಶಸ್ವಿಯಾಗಿ ನೂರಾರು ಕನ್ನಡ ಪರ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಿರಿಯ ಪರಿಷತ್ತಿನ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿಯವರು ಶ್ರೀಯುತರ ಜ್ಯೇಷ್ಠ ಸೋದರರಾಗಿದ್ದು ದಿ. ರಾಮಸ್ವಾಮಿಯವರು ಹಿಂದೆ ಮಹಾಸಭೆಗೆ ಉದಾರವಾಗಿ ಧನ ಸಹಾಯವನ್ನು ನೀಡಿದ್ದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

## ಶ್ರೀಮತಿ ಶ್ರೀದೇವಿ ಕುಲಕರ್ಣಿ



ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಇತ್ತೀಚಿಗೆ ಅಗಲಿದ ಶ್ರೀಮತಿ ಆಶಾ ಮತ್ತು ಶ್ರೀಮತಿ ಶ್ರೀದೇವಿ ಕುಲಕರ್ಣಿ ಇವರ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು ಈ ಸಭೆಯಲ್ಲಿ ಡಾಕ್ಟರ್ ಅಜಿತ್ ಕುಲಕರ್ಣಿ ಅವರು ಹೃದಯ ಕಾಯಿಲೆ ಮಂಜಾಗ್ರತೆಯ ಬಗ್ಗೆ ಮತ್ತು ಆರೋಗ್ಯದ ಬಗ್ಗೆ ಸಲಹೆಯನ್ನು ಕೊಟ್ಟರು, ಈ ಸಭೆಯಲ್ಲಿ ವೀಣಾ ರಾಜೇಂದ್ರ, ಶೀಲಾ ದಾಸ್, ಸುಧಾ, ಭಾರತಿ , ಶುಭ ಮತ್ತು ಇತರರು ಸಂತಾಪ ವ್ಯಕ್ತಪಡಿಸಿದರು ಈ ಕಾರ್ಯಕ್ರಮದಲ್ಲಿ ಡಾಕ್ಟರ್ ಆನಂದ್ ಪಡ್ಡುನೀಸ್ಸ್, ಡಿಕೆ ಮುರಳಿ ಧರ ಪ್ರಾಣೇಶ್ ಮುತಾಲಿಕ್ ರಾಮರಾವ್ ಗಣೆಕಲ್ ತಿರುಮಲ ರಾವ್, ಕಿಶನ್ ರಾವ್, ಡಿಕೆ ರೇಖಾ ಇನ್ನು ಇತರರು ಉಪಸ್ಥಿತರಿದ್ದರು

## ದಿ॥ ಜಯತೀರ್ಥಾಚಾರ್ಯ ವಾಸುದೇವಾಚಾರ್ಯ ಮಳಗಿ




ನಾಡಿನ ಪ್ರಖ್ಯಾತ ವಿದ್ವಾಂಸರು, ಜ್ಞಾನನಿಧಿ, ಪಂಡಿತ ದಿವಂಗತ ಜಯತೀರ್ಥಾಚಾರ್ಯ ವಾಸುದೇವಾಚಾರ್ಯ ಮಳಗಿ ಅವರ ಧಾರವಾಡದ ಮನೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ಗುರುವಾರ ಭೇಟಿ ನೀಡಿ, ಗೌರವ ಸಲ್ಲಿಸಿ, ಆಚಾರ್ಯರ ಮಕ್ಕಳಿಗೆ ಸಾಂತ್ವನ ಹೇಳಿದರು, . ಪಂ.ಮಳಗಿ ಆಚಾರ್ಯರ ಅಗಲಿಕೆಯಿಂದ ನಾಡು, ನುಡಿ ಬಡವಾಗಿದೆ. ಬ್ರಾಹ್ಮಣ ಸಮಾಜದ ಅಮೂಲ್ಯ ಆಸ್ತಿ ಕಳೆದು ಕೊಂಡಂತಾಗಿದೆ ಎಂದು ಅಧ್ಯಕ್ಷರು ಶ್ರದ್ಧಾಂಜಲಿ ಸಲ್ಲಿಸಿದರು,

ಅ.ಕ.ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಪ್ರಮೋದ ಮನೋಳಿ, ಕಾರ್ಯಕಾರಿ ಸಮಿತಿ ಸದಸ್ಯರೂ, ಮಾಜಿ ಮಹಾಪೌರರಾದ ಹನುಮಂತ ಡಂಬಳ ಹಾಜರಿದ್ದರು.

# ದಾಸಸಾಹಿತ್ಯದ ವಿಜಯ ದುಂದುಭಿ ಶ್ರೀ ವಿಜಯದಾಸರು

-ಮುರಳೀಧರ ಕುಲಕರ್ಣಿ, ರಾಯಚೂರು




ದಾಸಸಾಹಿತ್ಯ ಜನಸಾಮಾನ್ಯರ ಉದ್ಧಾರಕ ಶಕ್ತಿಯ ಸಾಹಿತ್ಯ. ಇಂದಿನ ದಿನಗಳಲ್ಲಿ ಈ ಸಾಹಿತ್ಯವು ಮಾನವನ ಬದುಕಿನ ಎಲ್ಲಾ ಸ್ತರಗಳಿಗೂ ಅತಿ ಉಪಯುಕ್ತ ವಾಗಿದೆ ಮತ್ತು ಮೌಲಿಕವಾಗಿದೆ. ಹರಿದಾಸರು ಮನೆಯಿಂದ ಮನೆಗೆ, ಊರಿಂದ ಊರಿಗೆ, ಪ್ರದೇಶದಿಂದ ಪ್ರದೇಶಕ್ಕೆ ಸಾತ್ವಿಕ, ಆದರ್ಶ, ನೀತಿ ಮತ್ತು ಮಾನವೀಯ ಮೌಲ್ಯಗಳ ಸಂದೇಶಗಳನ್ನು ಅತಿ ಸರಳ ಕನ್ನಡದಲ್ಲಿ ಎಲ್ಲರಿಗೆ ತಿಳಿಯುವಂತೆ ಸಾರಿದ ಮಹನಿಯರು.

ದಾಸರು ದೇಶ ಸುತ್ತಿದರು, ಭಕ್ತಿ ಬಿತ್ತಿದರು, ಜಾತಿ, ಮೂಢನಂಬಿಕೆ, ಖಂಡಿಸಿ ಭಗವದ್ಭಕ್ತಿ ಎನ್ನುವ ಶಿಖರದತ್ತ ಜನತೆಯನ್ನು ಎತ್ತಿದರು. ಈ ದಾಸರ ಪರಂಪರೆಯಲ್ಲಿ ಪುರಂದರದಾಸರ ನಂತರ ಬರುವ ಶ್ರೇಷ್ಠ ದಾಸರು ಹಾಗೂ ಅಪರೋಕ್ಷ ಜ್ಞಾನಿಗಳೇ ವಿಜಯದಾಸರು.

ದಾಸ ಸಾಹಿತ್ಯದ ಪ್ರಥಮ ಘಟ್ಟದಲ್ಲಿ ಶ್ರೀಪಾದದಾಸರು, ವಾದಿರಾಜರು, ವ್ಯಾಸರಾಜರು, ಪುರಂದರದಾಸರು, ಕನದಾಸರು ಇದ್ದರೆ, ದ್ವಿತೀಯ ಘಟ್ಟ ಪ್ರಾರಂಭವಾಗುವುದೇ ವಿಜಯದಾಸರಿಂದ. ಈ ದಾಸರು ಪುರಂದರದಾಸರು ಹಚ್ಚಿದ ದೀಪಕ್ಕೆ ಎಣ್ಣೆ ಸುರಿದು, ಆ ಕಾಲಘಟ್ಟದಲ್ಲಿ ಅನನ್ಯವಾಗಿ ಮುಂದುವರಿಸಿಕೊಂಡು ಬಂದಂತಹ ದಾಸ ಶ್ರೇಷ್ಠರೇ ವಿಜಯದಾಸರು. ಇವರು ಶ್ರೀ ಗೋಪಾಲದಾಸರು, ಜಗನ್ನಾಥದಾಸರು, ಮೋಹನದಾಸರು, ತಿಮ್ಮಣ್ಣದಾಸರು ಮುಂತಾದ 60 ಕ್ಕೂ ಹೆಚ್ಚು ಶಿಷ್ಯರಿಗೆ ದಾಸ ದೀಕ್ಷೆಯನ್ನು ನೀಡಿ, ದಾಸ ಪರಂಪರೆಯನ್ನು ಮುಂದುವರಿಸಿದರು.

ಸಾ.ಶ. 1682 ರಿಂದ 1755 ರವರೆಗೆ ವಿಜಯದಾಸರ ಪ್ರಖರತೆ ಎಷ್ಟಿತ್ತೆಂದರೆ ಅದು **"ವಿಜಯದಾಸ ಯುಗ"** ಎಂದೇ ವಿದ್ವಾಂಸರಿಂದ ಗೌರವಿಸಲ್ಪಟ್ಟಿದೆ. ಪುರಂದರದಾಸರಿಂದ ಮತ್ತು ಕನಕದಾಸರಿಂದ ಹರಿದುಬಂದ ದಾಸಸಾಹಿತ್ಯದ ಸುಧೆ ಎರಡನೇ ಘಟ್ಟದಲ್ಲಿ ವಿಜಯದಾಸರಿಂದ ಸರಳ ಕನ್ನಡದಲ್ಲಿ ಮಧ್ವಶಾಸ್ತ್ರ ವಿಚಾರಗಳು ಅನಾವರಣಗೊಂಡಿದ್ದು ವಿಶೇಷವಾಗಿ ಕಂಡುಬರುತ್ತದೆ.

**ಬಡತನದ ಬೇಗೆ** : ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ಚೀಕಲಪರ್ವಿ ಎಂಬ ಪುಟ್ಟ ಗ್ರಾಮದಲ್ಲಿ ಸಾತ್ವಿಕ ದಂಪತಿಗಳಾಗಿದ್ದ ಶ್ರೀನಿವಾಸಾಚಾರ್ಯ ಮತ್ತು ಕೂಸಮ್ಮ ಎಂಬ ದಂಪತಿಗಳ ಪುಣ್ಯ ಗರ್ಭದಲ್ಲಿ ಜನಿಸಿದವರೇ "ದಾಸಪ್ಪ". ಇವರೇ ಮುಂದೆ ವಿಜಯದಾಸ ರಾದರು. ಈ ದಂಪತಿಗಳು ಅತೀ ಕಡುಬಡತನದಲ್ಲಿ ದಾರಿದ್ರ್ಯವನ್ನು ಅನುಭವಿಸುತ್ತಿದ್ದರು. ಅವರಿಗೆ ಉಣ್ಣಲು ಊಟವಿಲ್ಲದೇ ಎಷ್ಟೋ ದಿನಗಳವರೆಗೆ ಉಪವಾಸವನ್ನು ಅನುಭವಿಸಿದರು. ತೊಡಲು ಮೈತುಂಬ ಬಟ್ಟೆ ಇರಲಿಲ್ಲ. ಅವರ ಬಡತನವನ್ನು ಕಂಡು ಅಲ್ಲಿಯ ಕುಚೇಷ್ಟಿಗಳು ದಾಸಪ್ಪನನ್ನು "ಕೂಸಿ ಮಗ ದಾಸ" ಎಂದು ಹಿಯ್ಯಾಳಿಸಿ ತಿರಸ್ಕಾರದಿಂದ ನೋಡುತ್ತಿದ್ದರು. ಇದೇ ದಾಸಪ್ಪರು ಭಗವಂತನ ಅನುಗ್ರಹದಿಂದ ವಿಜಯದಾಸರಾದಾಗ ಹಿಂದಿನ ಬಡತನವನ್ನು ನೆನೆದು

**"ಸಂಜೀ ತನಕ ಇದ್ದು ಸಣ್ಣ ಸೌಟಿನ ತುಂಬಾ**
**ಗಂಜಿ ಕಾಣದೇ ಬಳಲಿದೆನು ॥**
**ಒಬ್ಬ ಹೆಂಗಸಿಗೆ ಅನ್ನ ಹಾಕುವುದಕ್ಕೆ ತಬ್ಬಿಬ್ಬುಗೊಂಡೆ।**
**ನಾ ಹಿಂದೆ ಮನೆಮನೆಗೆ ತಿರುಗಿದೆ ಕಾಸುಪುಟ್ಟದೆ ಸುಮ್ಮನೆ।**
**ಮಧ್ಯಾಹ್ನದ ಕಾಲಕ್ಕೆ ಬಂದ ಅತಿಥಿಯರಿಗೆ ಅನ್ನ ಕೊಟ್ಟೆನೆಂದರೆ ಕಾಣೆನು ॥**

ಎಂದು ತಮ್ಮ ಅತಿ ದಾರಿದ್ರ್ಯತೆಯ ಬಗ್ಗೆ ಹಾಡಿದ್ದಾರೆ. ಕಾಲಧರ್ಮ ದಂತೆ ಆ ಬಡತನದಲ್ಲಿಯೇ ದಾಸಪ್ಪನಿಗೆ 'ಅರಳಮ್ಮ' ಎಂಬ ಬಾಲಕಿ ಯೊಡನೆ ಮದುವೆಯಾಯಿತು. ಬಡತನದ ಬೇಗೆ, ದಾರಿದ್ರ್ಯದ ಭಾರ, ಜನರ ತಿರಸ್ಕಾರ ಇದನ್ನು ಸಹಿಸದೆ ಹದಿಮೂರರ ವಯಸ್ಸಿನಲ್ಲಿಯೇ ಗೊತ್ತುಗುರಿ ಕಾಣದೇ ಮನೆಬಿಟ್ಟು ಹೋದರು. ಕೊನೆಗೆ ಅವರು ಸೇರಿದ್ದು ಕಾಶಿಗೆ. ಕಾಶಿಯಲ್ಲಿ ಬೀದಿ ಬೀದಿ ಅಲೆಯುತ್ತಾ, ಸಿಕ್ಕಲ್ಲಿ ತಿನ್ನುತ್ತಾ ಕಾಲಕಳೆಯುತ್ತಿದ್ದರು.

**ಬದುಕಿನ ತಿರುವು** : ಕಾಶಿಯಲ್ಲಿ ಒಂದು ರಾತ್ರಿ ನಿದ್ದೆಯಲ್ಲಿದ್ದಾಗ ಕಂಡ ಸ್ವಪ್ನ ಇಡೀ ದಾಸಪ್ಪನ ಬದುಕಿನ ದಿಕ್ಕನ್ನೇ ಬದಲಿಸಿತ್ತು. ಕನಸಿನಲ್ಲಿ "ಪುರಂದರದಾಸರು ಬಂದು ಕೈಹಿಡಿದು ತುಂಬಿದ ಗಂಗಾನದಿ ದಾಟಿಸಿ ಆಚೆ ದಡದ ವ್ಯಾಸಕಾಶಿಗೆ ಕರೆದೊಯ್ದಂತಾಯಿತು. ಅಲ್ಲಿ ವೇದವ್ಯಾಸರ ದರ್ಶನವಾಯಿತು. ಆಗ ಪುರಂದರದಾಸರು ದಾಸಪ್ಪನ ನಾಲಿಗೆಯ ಮೇಲೆ "ವಿಜಯ" ಎಂಬ ಬೀಜಾಕ್ಷರ ಬರೆದು ಅದೃಶ್ಯರಾದಂತಾಯಿತು. ಬಡತನದಿಂದ ಕಂಗೆಟ್ಟು, ಹೀನ ಸ್ಥಿತಿಯಲ್ಲಿದ್ದ ಶಾಸ್ತ್ರ, ಅಧ್ಯಯನ, ಉಪನಿಷತ್ತು, ವೇದ ಇವುಗಳ ಜ್ಞಾನವಿಲ್ಲದ ನಿರಕ್ಷರ ಕುಕ್ಷಿ ದಾಸಪ್ಪರು ಅಂದಿನಿಂದ ಪ್ರಖಾಂಡ ಪಂಡಿತರಾದರು". ದೈವ ಅನುಗ್ರಹದಿಂದ ಎಲ್ಲಾ ಜ್ಞಾನ ಅವರಲ್ಲಿ ಮೇಳೈಸಿತು. ಅಂದಿನಿಂದ ಅವರು 'ವಿಜಯವಿಠ್ಠಲ' ಅಂಕಿತದಿಂದ ವಿಜಯದಾಸರಾದರು.

ಕಾಶಿಯಲ್ಲಿಯೇ ವಿಜಯದಾಸರ ಗುಡಿಸಲು ಹರಿದಾಸ ಮಂದಿರವಾಯಿತು. ನೂರಾರು ಮಂದಿ ಇವರ ಜ್ಞಾನಕ್ಕೆ ಮರುಳಾಗಿ ಭಕ್ತರಾದರು. ಸಮಸ್ತ ಶಾಸ್ತ್ರವಿಚಾರಗಳೆಲ್ಲವೂ ನಾಲಿಗೆಯ ತುದಿಯಲ್ಲಿ ನಲಿದಾಡಿತು. ನುಡಿದಿದ್ದೆಲ್ಲಾ ನಾದವಾಯಿತು. ಹೇಳಿದ್ದೆಲ್ಲಾ ಹಾಡುಗಳಾಯಿತು, ಉಸಿರಾಡಿದ್ದೆಲ್ಲಾ ಸುಳಾದಿಗಳಾದವು. ಅಪರೋಕ್ಷ ಜ್ಞಾನಿಯಾಗಿ ಮಧ್ವಸಿದ್ಧಾಂತದ ತವನಿಧಿಯಾಗಿ ವಿಜಯದಾಸರೆಂದು ಪ್ರಖ್ಯಾತರಾದರು.

ನಂತರ ಶ್ರೀ ವಿಜಯದಾಸರು ಚೀಕಲಪರ್ವಿ ಗ್ರಾಮಕ್ಕೆ ಹಿಂದಿರುಗಿದ ನಂತರ ಹಿಯ್ಯಾಳಿಸಿದ ಜನರೇ ಅವರ ಪರಿಪೂರ್ಣ ಜ್ಞಾನವನ್ನು ಕಂಡು ಗೌರವಿಸಲು ಪ್ರಾರಂಭಿಸಿದರು. ಈ ಬದಲಾವಣೆಯನ್ನು ಕುರಿತು ಅವರೇ ತಮ್ಮ ಸಂಕೀರ್ತನೆಯಲ್ಲಿ ಹೇಳಿರುವುಂತೆ

**"ನಿನ್ನ ಒಲುಮೆಯಿಂದ ನಿಖಿಲ ಜನರು ಬಂದು ಮನ್ನಿಸುವರೋ ಮಹರಾಯ"**

ಹಿಂದೆ ಬಡತನದ ಬೇಗೆಯಿಂದ ಬಳಲಿದ್ದ ನಾನು ಇಂದು ಭಗವಂತನ ಅನುಗ್ರಹದಿಂದ ಪ್ರತಿನಿತ್ಯ ಹಬ್ಬ, ಸಮಾರಾಧನೆ, ದ್ರವ್ಯ, ರಾಜಮರ್ಯಾದೆ, ನಾನು ಇದ್ದಕಡೆಯೇ ಬಂದು ಪ್ರಾಪ್ತವಾಗುತ್ತಿದೆ. ಇದೆಲ್ಲಾ ನಿನ್ನ ಒಲುಮೆ ಎಂದು ಗದ್ಗದಿತರಾಗಿ ಹಾಡಿದ್ದಾರೆ.

ಪುರಂದರದಾಸರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ವಿಜಯದಾಸರು 25 ಸಾವಿರ ಹಾಡುಗಳನ್ನು, ಪದಪದ್ಯಗಳನ್ನು, ಉಗಾಭೋಗಗಳನ್ನು, ಲಾಲಿಹಾಡುಗಳನ್ನು, ಜೋಗುಳ ಹಾಡುಗಳನ್ನು, ಸುವ್ವಿ ಹಾಡುಗಳನ್ನು, ಶಾಸ್ತ್ರ, ದಂಡಕ, ಗದ್ಯ ಹೀಗೆ ಹತ್ತು ಹಲವು ಸ್ತರಗಳಲ್ಲಿ ಸಾಹಿತ್ಯವನ್ನು ರಚಿಸಿ ದಾಸಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡುಗೆಯಾಗಿದ್ದಾರೆ.

ಶ್ರೀ ವಿಜಯದಾಸರು ಸಮಾಜಮುಖಿಯಾಗಿ, ಸಾರ್ವಕಾಲಿಕ ಮೌಲ್ಯದ ಸಾಮಾಜಿಕ ಚಿಂತನೆಯನ್ನು ನಡೆಸಿದರು. ಪ್ರತಿಯೊಬ್ಬರಿಗೂ ನೈತಿಕತೆ, ಮಾನವೀಯ ಮೌಲ್ಯ, ಸರಳ ಜೀವನ ಭಗವಂತನಲ್ಲಿ ಆಡಂಬರವಿಲ್ಲದ ಭಕ್ತಿಯನ್ನು ಬಿಂಬಿಸಿದರು. ಇವರ ಕೆಲವು ಸಂಕೀರ್ತನೆಗಳನ್ನು ನೋಡಿದಾಗ ಇಂದಿಗೂ ಅವು ಪ್ರಸ್ತುತ ಗೊಳ್ಳುತ್ತವೆ.

"ಯಾರನ್ನೂ ಜರಿಯಬೇಡ । ಖಳರ ಮನೆಗಳಿಗೆ ಹೋಗಿ ತಿರಿಯಬೇಡ । ಪರಸತಿಯನ್ನು ಸ್ವಪ್ನದಲ್ಲಿಯೂ ಬೆರಿಯಬೇಡ । ಪಾಕಮಾಡಿ ಒಬ್ಬನೇ ಊಟ ಮಾಡಬೇಡ । ಅರಸರುಗಳ ಹಿಂದೆ ಅಲಿದು ಅವರನ್ನು ಹಾಡಿಹೊಗಳಬೇಡ । ಖೂಳ ಜನರ ಸಂಗಬೇಡ । ಸಾಲದು ಎನ್ನಬೇಡ । ನಾಳಿಗೇನೆಂಬ ಚಿಂತೆ ಬೇಡ । ವೈರಾಗ್ಯ ಎಂದು ಕಾಡಿಗೆ ಹೋಗಿ ಕುಳಿತುಕೊಳ್ಳಬೇಡ । ಸಮಾಜದಲ್ಲಿದ್ದು ಇನ್ನೊಬ್ಬರಿಗೆ ಉಪಕಾರ ಮಾಡಿ ನಗುನಗುತ ಸಜ್ಜನರ ಸಹವಾಸದಲ್ಲಿ ಬಾಳು । ಹರಿಯ ಮರೆಯಬೇಡ".

ಎಂಬ ತಾತ್ವಿಕ ವಿಚಾರಗಳನ್ನು ಬದುಕಿನ ಸುಖದ ಅರ್ಥವನ್ನು ತಿಳಿಸಿದ್ದಾರೆ. ವಿಜಯದಾಸರು ಕಾಶಿಯಿಂದ ರಾಮೇಶ್ವರದವರೆಗೆ ಅನೇಕ ಬಾರಿ ತೀರ್ಥಯಾತ್ರೆ ಮಾಡಿದರು. ಇಷ್ಟಪಟ್ಟು ತಿರುಪತಿ ದೇವರ ದರ್ಶನಕ್ಕೆ ಹೋದಾಗ ಅಲ್ಲಿ ನೂಕು ನುಗ್ಗಲಿನಲ್ಲಿ ದರ್ಶನ ಮಾಡದೇ ಅಲ್ಲಿದ್ದ ಪರಿಚಾರಕರಿಂದ ಬೆನ್ನಿಗೆ ಹೊಡಿಸಿಕೊಂಡು ಹೊರಗೆ ನೂಕಲ್ಪಟ್ಟರು. ಆಗ ವಿಜಯದಾಸರು ವೆಂಕಟೇಶನನ್ನು ಕುರಿತು **ನಿನ್ನ ದರುಶನಕೆ ಬಂದಿಲ್ಲವೋ ದೇವಾ, ನಿನ್ನ ಭಕ್ತರ ಪುಣ್ಯವಂತರ ದಿವ್ಯ ಚರಣವನ್ನು ನೋಡಲು ಬಂದೆ**. ಎಂಬ ಹಾಡು ಹಾಗೂ **ಪವಮಾನ ಜಗದ ಪ್ರಾಣ** ಇಂದಿಗೂ ಜನಪ್ರಿಯ ಸಂಕೀರ್ತನೆಗಳಾಗಿದೆ.

ಅತ್ತನೂರಿನ ಗ್ರಾಮದಲ್ಲಿ ಅಸ್ಖಲಿತವಾಗಿ ನಿಖರ ಭವಿಷ್ಯವನ್ನು ಹೇಳುತ್ತ ಕುಳಿತಿರುವ ಬಾಗಣ್ಣನಿಗೆ ಶ್ರೀ ವಿಜಯದಾಸರು ಜ್ಞಾನದ ಕಣ್ಣು ತೆರೆಯಿಸಿ ಶ್ರೀಗೋಪಾಲ ವಿಠ್ಠಲ ಎಂದು ಅಂಕಿತ ನೀಡಿದರು. ಅದೇ ರೀತಿ ಮಾನವಿಯ ಪಂಡಿತರಾಗಿದ್ದ ಶ್ರೀನಿವಾಸಾಚಾರ್ಯರ ಅಹಂನ್ನು ಅಳಿಸಿ ಅವರಿಗೆ ಅನುಗ್ರಹಿಸಿ ಶ್ರೀ ಜಗನ್ನಾಥದಾಸರನ್ನಾಗಿ ಮಾಡಿ "ಶ್ರೀ ಹರಿಕಥಾಮೃತಸಾರ" ದಂತಹ ಅತ್ಯಂತ ಮಹತ್ವದ ಶಾಸ್ತ್ರಕಾವ್ಯವನ್ನು ರಚಿಸುವಂತೆ ಮಾಡಿದರು. ಒಬ್ಬ ಬಡ ಹೆಣ್ಣುಮಗಳು ದಾರಿದ್ರ್ಯ ನಿಂದನೆಗೆ ಬೇಸತ್ತು ತನ್ನ ಕಜ್ಜಿ ಹಾಗೂ ಕುರೂಪಿ ಮಗನನ್ನು ತಳ್ಳಿ, ತಾನೂ ತುಂಗಭದ್ರ ನದಿಯಲ್ಲಿ ಬೀಳಲು ಪ್ರಯತ್ನಿಸಿದಾಗ ಆಕೆಯನ್ನು ತಡೆದು ಸಮಾಧಾನಪಡಿಸಿ ಆ ಮಗುವನ್ನು ಪಡೆದು ತಾವೇ ಸ್ನಾನ ಮಾಡಿಸಿ ದತ್ತು ಪುತ್ರರನನ್ನಾಗಿ ಸ್ವೀಕರಿಸಿ ಮೋಹನ ಎಂದು ಹೆಸರಿಟ್ಟರು. ಆ ಮಗುವಿಗೆ ಆಶೀರ್ವಾದವನ್ನು ಮಾಡಿ **"ಚಿರಂಜೀವಿ ಯಾಗಿರು ಚಿಣ್ಣ ನೀನು ಪರಮ ಭಾಗವತರ ಪದಧೂಳಿ ಧರಿಸುತಲಿ"** ಎಂದು ಆಶೀರ್ವದಿಸಿದರು, ಮುಂದೆ ಅವರೇ **ಮೋಹನದಾಸರಾದರು**.

ವಿಜಯದಾಸರ ಕುರಿತು ಇಂದಿಗೂ ಅವರ ಭಕ್ತವೃಂದ ಲಕ್ಷಾಂತರ ಜನ ಹಾಡಿಕೊಳ್ಳುವ ವಿಜಯಕವಚ "ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ ದುರಿತ ತೊರೆದು ಪೊರೆವ ವಿಜಯಗುರು ಗಳೆಂಬರ" ಎಂಬ ಹಾಡನ್ನು ಕಲ್ಲೂರು ಸುಬ್ಬಣ್ಣಾಚಾರ್ಯರು ರಚಿಸಿದ್ದಾರೆ. ತಮ್ಮ ವಿದ್ವತ್ತಿನ ಬಗ್ಗೆ ಅಹಂ ಬೆಳೆಸಿಕೊಂಡಾಗ ಅದನ್ನು ಒಬ್ಬ ಅಡುಗೆಯವನ ಕಡೆಯಿಂದ ಸುಧಾಮಂಗಳವನ್ನು ಮಾಡಿಸಿದ ಪವಾಡದಿಂದ ಪಂಡಿತರಾಗಿದ್ದ ಶ್ರೀ ಕಲ್ಲೂರು ಸುಬ್ಬಣಾಚಾರ್ಯರು ವ್ಯಾಸವಿಠ್ಠಲರಾಗಿ ಹರಿದಾಸರನ್ನಾಗಿ ಮಾಡಿದರು.

ಇಂತಹ ದಾಸಸಾಹಿತ್ಯದ ಧೃವತಾರೆ, ಇವರು ತಂಬೂರಿ ಮೀಟಿ ದಡೆಯಲ್ಲ ಭಗವಂತನ ವಾಣಿಯಾಗಿ, ಪುರಂದರ ನುಡಿಯಾಗಿ, ವಿಜಯವಾಣಿಯಾಗಿ ಮೆರೆಯಿತು. ಇಂತಹ ಅಪ್ರತಿಮ ದಾಸಶ್ರೇಷ್ಠರ 261 ನೇ ಆರಾದನಾ ಮಹೋತ್ಸವದ ಅಂಗವಾಗಿ ಕರ್ನಾಟಕದಾದ್ಯಂತ ಅತೀ ವಿಜೃಂಭಣೆಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಆಚರಿಸಲಾಗುತ್ತಿದೆ. ಅದರಲ್ಲಿ ವಿಶೇಷ ವಾಗಿ ಅವರ ಹುಟ್ಟಿದ ಸ್ಥಳವಾದ ಚೀಕಲಪರ್ವಿ ಮತ್ತು ಹರಿಪಾದ ಸೇರಿದ ಸ್ಥಳವಾದ ಚಿಪ್ಪಗಿರಿಯಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತಿವೆ.

**ಇದೇ ನವಂಬರ್–2022, ರ 2, 3 ಮತ್ತು 4 ರಂದು ನಡೆಯುವ ಅಪರೋಕ್ಷ ಜ್ಞಾನಿಗಳು ಹಾಗೂ ದಾಸಶ್ರೇಷ್ಠರಾದ ಶ್ರೀ ವಿಜಯದಾಸರ 262ನೇ ಆರಾಧನಾ ವಿಜ್ರಂಭಣೆಯಿಂದ ನಾಡಿನಾದ್ಯಂತ ಜರುಗಿತು**.

# ಎ. ತಾಂದೋಣಿರಾವ್

**ಸುರೇಶ್ ಮೂನ**



ಕೆ.ಆರ್ ರಸ್ತೆಯು ನಿಟ್ಟೂರು ಶ್ರೀನಿವಾಸ ರಾವ್ ರಸ್ತೆಗೆ ಸೇರುವ ಮುನ್ನ ರಸ್ತೆಯ ಬಲಕ್ಕೆ ಮಾಡಲ್ ಹೌಸ್ ಸ್ಟ್ರೀಟ್ ಎಂಬ ಫಲಕವಿರುವ ಬೀದಿಯಿದೆ. ಈ ಸುತ್ತಲೂ ಅನೇಕ ರೀತಿಯ ಮನೆಗಳಿರ–ಬೇಕಾದರೆ ಇಲ್ಲಿ ಮಾಡಲ್ ಹೌಸ್ ಯಾವುದು, ಅದಕ್ಕೆ ಆ ಹೆಸರು ಬರಲು ಕಾರಣವೇನು ಎಂಬ ಕುತೂಹಲ ಮೂಡುತ್ತದೆ. ಇದಕ್ಕೆ ಕಾರಣವು ಇದೆ. ಈ ಫಲಕಕ್ಕೆ ಅಂಟಿಕೊಂಡಂತೆ ಇರುವ ಕಾಂಪೌಂಡ್‌ನ ಒಳಗಿನ ವಿಶಾಲವಾದ ಜಾಗದಲ್ಲಿ 2010ರ ವೇಳೆಗೆ ಸುಮಾರು75 ವರ್ಷಗಳ ಹಳೆಯ ಸುಂದರ ಮನೆಯೊಂದಿತ್ತು. ಇದೇ ಮಾಡೆಲ್ ಹೌಸ್. ಈ ಮನೆಯನ್ನು ಕಟ್ಟಿಸಿದವರು ಕರ್ನಾಟಕ ರಾಜ್ಯದ ಆಗಿನ ಮುಖ್ಯ ಇಂಜಿನಿಯರ್ ಆಗಿದ್ದ ಎ. ತಾಂದೋಣಿರಾವ್ ಅವರು.

ಮಾಧ್ವ ಸಂಪ್ರದಾಯಕ್ಕೆ ಸೇರಿದ ತಾಂದೋಣಿರಾಯರು ಎಳಂದೂರು ಬಳಿಯ ಅಗರಂಗೆ ಸೇರಿದವರು. ತಮಿಳುನಾಡು ಬಳಿಯ ತಾಂದೋಣಿ ಬೆಟ್ಟದ ಶ್ರೀನಿವಾಸ ಇವರ ದೇವರು. ಹೀಗಾಗಿ ಹಿರಿಯರು ಇವರಿಗೆ ಇಟ್ಟ ಹೆಸರು ತಾಂದೋಣಿರಾವ್. ಇವರು ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮುಖ್ಯ ಇಂಜಿನಿಯರ್ ಆಗಿ ನಮ್ಮ ನಾಡಿನ ವಿವಿಧ ಜಾಗಗಳಲ್ಲಿ ಹಾಗೂ ಬೆಂಗಳೂರಿನಲ್ಲಿ ಅಮೂಲ್ಯ ಸೇವೆ ಸಲ್ಲಿಸಿದರು. ಸರ್‌ಎಂ.ವಿ. ಅವರೊಂದಿಗೆ ಕೃಷ್ಣರಾಜ ಸಾಗರ ಅಣೆಕಟ್ಟಿನ ನಿರ್ಮಾಣದಲ್ಲೂ ಇವರು ಮುಖ್ಯಪಾತ್ರ ವಹಿಸಿದ್ದಾರೆ.

ಬೆಂಗಳೂರಿನ ಹೃದಯದ ಭಾಗದಲ್ಲಿರುವ ಮತ್ತು ಈ ನಗರದ ಕೆಲವು ಪಾರಂಪರಿಕ ಶೈಲಿಯ ಸುಂದರ ಕಟ್ಟಡಗಳಲ್ಲಿ ಒಂದಾದ ಸರ್ ಕೆ.ಪಿ. ಪುಟ್ಟಣ್ಣಚೆಟ್ಟಿ ಪುರ ಭವನದ ಕಾರ್ಯನಿರ್ವಾಹಕ ಇಂಜಿನಿಯರ್ ಎ.ತಾಂದೋಣಿರಾವ್ ಅವರೇ. 1933 ಮಾರ್ಚ್ 6 ರಂದು ಕೃಷ್ಣರಾಜೇಂದ್ರ ಒಡೆಯರ್ ಅವರು ಈ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಿದರು. 1935ರ ಸೆಪ್ಟೆಂಬರ್ 11 ರಂದು ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಈ ಕಟ್ಟಡವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸುಂದರ ಶೈಲಿಯಲ್ಲಿ ಈ ಭವನವನ್ನು ನಿರ್ಮಿಸಿದ ಎ.ತಾಂದೋಣಿರಾವ್ ಮತ್ತಿತರರನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಇದೇ ರೀತಿ ವಿಕ್ಟೋರಿಯ ಆಸ್ಪತ್ರೆ ಬದಿಗೆ ಇರುವ ವಾಣಿವಿಲಾಸ ಆಸ್ಪತ್ರೆಯ ನಿರ್ಮಾಣದ ಕಾರ್ಯನಿರ್ವಾಹಕ ಇಂಜಿನಿಯರ್ ಕೂಡ ಇವರೇ. ಈ ಕಟ್ಟಡದ ಶಂಕುಸ್ಥಾಪನೆಯನ್ನು 1930ರ ಆಗಸ್ಟ್ 26 ರಂದು ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ನೆರವೇರಿಸಿದ್ದರು. 1935ರ ಮಾರ್ಚ್ 8 ರಂದು ಉದ್ಘಾಟನೆ ನಡೆಸಿದವರು ಮಹಾರಾಜ ಕೃಷ್ಣರಾಜ ಒಡೆಯರ್ ಅವರು. ಈ ಕಟ್ಟಡ ನಿರ್ಮಾಣವಾಗುತ್ತಿರುವಾಗಲೇ ದಿವಾನ್ ಸರ್ ಮಿರ್ಜಾಇಸ್ಮಾಯಿಲ್ ಮತ್ತು ಮಹಾರಾಜರು ಬಂದು ನಿರ್ಮಾಣದ ಕ್ರಮವನ್ನು ಗಮನಿಸುತ್ತಿದ್ದರು. ಇದರ ಪಕ್ಕದ ವಿಕ್ಟೋರಿಯ ಆಸ್ಪತ್ರೆ ಬ್ರಿಟಿಷ್ ವಾಸ್ತುಶೈಲಿಯಲ್ಲಿತ್ತು. ಅದಕ್ಕೆ ಸರಿ ಸಾಟಿಯಾಗಿ ಸಂಪೂರ್ಣ ಭಾರತೀಯ ಶಿಲ್ಪ ಕಲೆಯ ಶೈಲಿಯಲ್ಲಿ ಸ್ಥಳೀಯ ಅಧಿಕಾರಿಗಳೇ ಈ ಕಟ್ಟಡ ನಿರ್ಮಾಣ ಮಾಡಿದ್ದು ಮಹಾರಾಜರಿಗೂ ಮತ್ತು ದಿವಾನರಿಗೂ ಹೆಮ್ಮೆ ಮತ್ತು ಸಂತೋಷದ ವಿಷಯವಾಗಿತ್ತು

ಸಜ್ಜನ್‌ರಾವ್ ವೃತ್ತದ ಬಳಿ ಕಲಾಸಿಪಾಳ್ಯಕ್ಕೆ ಹೋಗುವ ರಸ್ತೆಯ ಎಡಬದಿಗಿರುವ ಅಶಕ್ತ ಪೋಷಕ ಸಭಾ, ಚಾಮರಾಜಪೇಟೆಯ ಒಂದನೇ ಕ್ರಾಸ್‌ನಲ್ಲಿರುವ ಸಂಸ್ಕೃತ ಕಾಲೇಜಿನ ಕಟ್ಟಡ, ಐದನೇ ಮೇನ್‌ನಲ್ಲಿರುವ ಶ್ರೀಮನ್‌ಮಾಧ್ವ ಸಂಘದ ಕಟ್ಟಡ, ಅಲ್ಲಿಂದ ಮುಂದೆ ಹೋದರೆ ರಾಘವೇಂದ್ರ ಕಾಲೋನಿಯ ಮಠ ಇವೆಲ್ಲವೂ ಎ.ತಾಂದೋಣಿ ರಾವ್‌ಅವರ ಮೇಲ್ವಿಚಾರಣೆಯ ರಚನೆಗಳೆ. ಕೆ.ಆರ್. ರಸ್ತೆಯಲ್ಲಿರುವ ನಾಷನಲ್ ಹೈಸ್ಕೂಲ್‌ನ ಹೊಸ ಕಟ್ಟಡವನ್ನು ನಿರ್ಮಿಸಿದ ಮಹನೀಯರೂ ಇವರೇ.

ಈ ಕಟ್ಟಡದ ಪ್ರವೇಶದ್ವಾರದ ಮೇಲಿನ ಮುಖ್ಯಗೋಪುರಕ್ಕೆ ಮುಂಬೈನ ಕೈಗಾರಿಕೋದ್ಯಮಿಗಳಿಂದ ದೊಡ್ಡ ಗಡಿಯಾರವನ್ನು ತರಿಸಿ ಹಾಕಿಸಿ ಅದರ ಅಂದವನ್ನು ಇವರು ಹೆಚ್ಚಿಸಿದ್ದರು. 1940ರ ಜುಲೈ 1 ರಂದು ದಿವಾನ್ ಸರ್ ಮಿರ್ಜಾಇಸ್ಮಾಯಿಲ್ ಈ ಕಟ್ಟಡವನ್ನು ಉದ್ಘಾಟಿಸಿದ್ದರು. ಇದರ ಪ್ರವೇಶದ್ವಾರದಲ್ಲಿರುವ ಶಿಲಾ ಫಲಕದಲ್ಲಿ ಎ.ತಾಂದೋಣಿ ರಾವ್ ಅವರ ಹೆಸರನ್ನು ಇಂದಿಗೂ ಕಾಣಬಹುದು. ಲಾಲ್‌ಬಾಗ್ ಗಾಜಿನ ಮನೆಯ ಪೂರ್ವ ಭಾಗವನ್ನು ಭದ್ರಾವತಿ ಉಕ್ಕಿನ ಕಾರ್ಖಾನೆಯ ವಸ್ತುಗಳಿಂದ ಇತರ 3 ಭಾಗಗಳ ಸೌಂದರ್ಯಕ್ಕೆ ಭಂಗ ಬರದಂತೆ ಅದೇ ರೀತಿಯಲ್ಲಿ ಈ ಭಾಗವನ್ನು ರಚಿಸಿದವರು ಇವರು.

ಹೀಗೆ, ನಗರದಲ್ಲಿ ಹಲವಾರು ಸುಂದರ ಕಟ್ಟಡಗಳನ್ನು ನಿರ್ಮಿಸಿದ ಇವರು ಕೆ.ಆರ್. ರಸ್ತೆಯಲ್ಲಿನ ತಮ್ಮ ಮನೆಯನ್ನು ಆಗ ಲಭ್ಯವಿದ್ದ ಆಧುನಿಕ ತಂತ್ರಜ್ಞಾನವನ್ನು ಬಳಸಿ ಹೊಸ ರೀತಿಯಲ್ಲಿ ನಿರ್ಮಿಸಿದರು. ಕಾಂಪೌಂಡ್ ಗೋಡೆಗೆ ಪ್ರಿಕಾಸ್ಟ್‌ಕಾಂಕ್ರೀಟ್ ಪಾನೆಲ್‌ಗಳು, ವರಾಂಡಕ್ಕೆ ಹಾಗು ಮಹಡಿಯ ಮೇಲಿನ ಇದೇ ರೀತಿ ಜಾಗಗಳಿಗೆ ಪ್ರಿಕಾಸ್ಟ್‌ಕಾಂಕ್ರೀಟ್ ಜಾಲಿ, ಮನೆಯ ವರಾಂಡದ ಮುಖ್ಯದ್ವಾರಕ್ಕೆ ಕೊಲಾಪ್ಸಿಬಲ್ ಗೇಟ್, ವಿಶಾಲವಾದ ಎತ್ತರವಾದ ರೂಮಿನ ಛಾವಣಿಗಳಿಗಿಂತ ಎತ್ತರವಾಗಿದ್ದ ಜಾಕ್‌ಆರ್ಚ್‌ಟೆರೇಸ್ ಇವೆಲ್ಲವೂ ಆಗಿನ ಕಾಲಕ್ಕೆ ನವೀನ ಪ್ರಯೋಗಗಳು. ಕಾಂಕ್ರೀಟ್ ರಚನೆಗಳ ನಿರ್ಮಾಣದ ಬಗ್ಗೆ ಮಾಹಿತಿ ನೀಡುತ್ತಿದ್ದ ರಾಷ್ಟ್ರ ಮಟ್ಟದ "ಕಾಂಕ್ರೀಟ್‌ಜರ್ನಲ್" ಎಂಬ ಪತ್ರಿಕೆ ಈ ಮನೆಯ ಫೋಟೋವನ್ನು ಪ್ರಕಟಿಸಿ ಇದನ್ನು 'ಮಾಡೆಲ್ ಹೌಸ್' ಎಂದು ಕರೆದಿತ್ತು. ಹೀಗಾಗಿ, ಇದು ಅದೇ ಹೆಸರಿನಿಂದ ಪ್ರಸಿದ್ಧಿ ಆಯಿತಲ್ಲದೆ, ಅದರ ಪಕ್ಕದ ರಸ್ತೆ ಮತ್ತು ಅದರ ಸುತ್ತಲಿನ ಬಡಾವಣೆಯು ಮಾಡೆಲ್‌ಹೌಸ್ ಬ್ಲಾಕ್ ಎಂದು ಪ್ರಸಿದ್ಧಿಯಾಯಿತು. ಹೀಗೆ ಹೊಸ ತಂತ್ರಜ್ಞಾನವನ್ನು ಸ್ಥಳೀಯವಾಗಿ ಅಳವಡಿಸಿ ಆಗಿನ ಕಾಲಕ್ಕೆ ಹೊಸ ಕಟ್ಟಡಗಳನ್ನು ನಿರ್ಮಿಸಿದ್ದ ಈ ಮಹನೀಯರು 1941ರ ಮಾರ್ಚ್‌ನಲ್ಲಿ ದೈವಾಧೀನರಾದರು.

# ಬ್ರಿಟಿಷರ ವಿರುದ್ಧ ಸಿಡಿದೆದ್ದ ಪ್ರಥಮ ಬ್ರಾಹ್ಮಣ ಮಹಿಳೆ ಝಾನ್ಸಿರಾಣಿ ಲಕ್ಷ್ಮೀಬಾಯಿ

**"ಯತ್ರನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ"**

**-ಛಾಯಾಪತಿ**

ಸನಾತನ ಭಾರತೀಯ ಸಂಸ್ಕೃತಿಯಲ್ಲಿ ಈ ಪವಿತ್ರ ಭೂಮಿ ಭಾರತದಲ್ಲಿ ನಾರಿಯರಿಗೆ ಕೊಟ್ಟ ಸ್ಥಾನಮಾನವನ್ನು ಈ ಶ್ಲೋಕ ಹೇಳುತ್ತದೆ. ಎಲ್ಲಿ ನಾರಿಯರನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ. ಎಂತಹ ಉದಾತ್ತ ಕಲ್ಪನೆ ನಮ್ಮ ಸಂಸ್ಕೃತಿಯದು. ಆದ್ದರಿಂದಲೇ ವಿಶ್ವದ ಯಾವ ದೇಶಗಳಲ್ಲಿಯೂ ಹುಟ್ಟಿರಲಾರದಷ್ಟು ವೀರ ವನಿತೆಯರು,ಸಾಧ್ವಿಗಳು, ತಪಸ್ವಿನಿಯರು, ಪತಿವ್ರತೆಯರು ಈ ಭರತ ಭೂಮಿಯಲ್ಲಿ ಜನಿಸಿದ್ದಾರೆ. ಬ್ರಾಹ್ಮಣ ಜನಾಂಗದಲ್ಲಿ ಜನಿಸಿ ಭಾರತೀಯ ಮಹಿಳಾ ಸಮುದಾಯಕ್ಕೇ ಏಕೆ ಜಗತ್ತಿನ ನಾರಿ ಸಮುದಾಯಕ್ಕೇ ಗೌರವ ತಂದುಕೊಟ್ಟು ಆಂಗ್ಲರ ವಿರುದ್ಧ ವೀರಾವೇಶದಿಂದ ಹೋರಾಡಿ ಪ್ರಾಣಾರ್ಪಣೆ ಮಾಡಿದ ವೀರ ವನಿತೆಯ ವೀರಗಾಥೆಯನ್ನು ಕೇಳೋಣ ಬನ್ನಿ.

ಒಂದು ತೊಡೆಯೇ ನಿಶ್ಚೇಷ್ಠಿತವಾಗಿತ್ತು, ಹೊಟ್ಟೆಯಿಂದಲೂ ರಕ್ತ ಹರಿಯುತ್ತಿತ್ತು, ವೇಗವಾಗಿ ಹಿಂಬಾಲಿಸಿದ ವೈರಿ ಸೈನಿಕನ ಖಡ್ಗ ಪ್ರಹಾರದಿಂದ ಎಡಕೆನ್ನೆ ಸೀಳಿ ಕಣ್ಣುಗುಡ್ಡೆಯೇ ಕಿತ್ತು ಬಂತು, ಆದರೂ ಎಡಗೈಯಿಂದಲೇ ಆ ಸೈನಿಕನ ಭುಜವನ್ನು ಕತ್ತರಿಸಿ ಸಮಾಧಾನ ಪಡೆದ ಆ ಬ್ರಾಹ್ಮಣ ವೀರ ವನಿತೆಯೇ ಝಾನ್ಸಿ ರಾಣಿ ಲಕ್ಷ್ಮೀಬಾಯಿ

ಮಹಾರಾಷ್ಟ್ರದ ಸತಾರ ಜಿಲ್ಲೆಯ ವಾಯಿ ಎಂಬ ಗ್ರಾಮ, ಸೈಹಾದ್ರಿಯ ಏರು ತಗ್ಗುಗಳ ಮತ್ತು ಭೀಕರ ಕಾಡುಗಳ ಮಧ್ಯೆ ಇದ್ದ ಹಳ್ಳಿ, ವೇದಶಾಸ್ತ್ರ ಕೋವಿದರ, ವಿದ್ವಾಂಸರ, ಪಂಡಿತರ ಕೇಂದ್ರವಾಗಿತ್ತು ಆ ಹಳ್ಳಿ. ಕರ್ಹಾಡ ಎಂಬ ಮರಾಠಿ ಬ್ರಾಹ್ಮಣರ ವಂಶದಲ್ಲಿ ಜನಿಸಿದವಳೇ ಝಾನ್ಸಿ ರಾಣಿ ಲಕ್ಷ್ಮೀಬಾಯಿ. ಮಹಾರಾಷ್ಟ್ರದ ಈ ಕುಗ್ರಾಮದಲ್ಲಿ ನೆಲೆಸಿದ್ದ ಪೂರ್ವಜರ ವಂಶದಲ್ಲಿ ಜನಿಸಿದ ಈ ಬಾಲೆ ಉತ್ತರ ಪ್ರದೇಶದ ಝಾನ್ಸಿಗೆ ಹೇಗೆ ರಾಣಿಯಾದಳು ಎಂಬ ಕುತೂಹಲ ಮೂಡುವುದು ಸಹಜ. ಪೇಶ್ವೆಯ ರಾಜ ಬಾಜಿರಾಯ. ಅವನ ತಮ್ಮ ಚೀಮಾಜಿ. ಬ್ರಿಟಿಷರ ಕುತಂತ್ರದಿಂದ ಈ ಇಬ್ಬರು ಅಣ್ಣತಮ್ಮಂದಿರು ಉತ್ತರ ಪ್ರದೇಶಕ್ಕೆ ಕಳಿಸಲ್ಪಟ್ಟರು. ಅಣ್ಣ ಬಾಜೀರಾಯನಿಗೆ ಬಿಠೂರ್ ಎಂಬ ಪ್ರದೇಶವನ್ನು, ತಮ್ಮ ಚೀಮಾಜಿಗೆ ಕಾಶಿಯನ್ನು ಬಳುವಳಿಯಾಗಿ ಕೊಟ್ಟರು. ಲಕ್ಷ್ಮೀಬಾಯಿಯ ಪೂರ್ವಜರು ವಾಯಿಯಿಂದ ಚೀಮಾಜಿಯ ಜೊತೆ ಬಂದವರಲ್ಲಿ ಬ್ರಾಹ್ಮಣ ಮೋರೋ ಪಂಥರೂ ಒಬ್ಬರು. ಇವರು ಚೀಮಾಜಿಯ ಪರಮ ಆಪ್ತರು. ಚೀಮಾಜಿಯ ಮಹಲಿನ ಒಂದು ಭಾಗದಲ್ಲಿ ಮೋರೋ ಪಂಥರ ವಾಸ್ತವ್ಯ. ಭಾಗೀರಥಿ ಎಂಬ ನೇಮ ನಿಷ್ಠೆಯ ಸಾಧ್ವಿ ಮೋರೋ ಪಂಥರ ಪತ್ನಿ. ಈ ಬಡ ಬ್ರಾಹ್ಮಣ ದಂಪತಿಗಳ ಮಗಳೇ ಲಕ್ಷ್ಮೀಬಾಯಿ.

ಕಾರ್ತಿಕ ಮಾಸದ ಬಿದಿಗೆಯ ದಿನ 1835 ನವಂಬರ್ 15ರಂದು ಜನಿಸಿದ ಆ ಹೆಣ್ಣು ಮಗು ತಾಯಿಯಂತೆ ರೂಪವಂತೆ. ಅವಳಿಗೆ ಮಣಿಕರ್ಣಿಕ ಎಂದು ನಾಮಕರಣ ಮಾಡಿದರು (ಇದು ಗಂಗಾಮಾತೆಯ ಇನ್ನೊಂದು ಹೆಸರು) ಅವಳನ್ನು ಮನುಭಾಯಿ ಎಂದು ಪ್ರೀತಿಯಿಂದ ಕರೆಯುತ್ತಿದ್ದರು.

ಮನುಭಾಯಿಗೆ ನಾಲ್ಕು ವರ್ಷವಾದಾಗಲೇ ತಾಯಿ ಭಾಗೀರಥಿ ತೀರಿಕೊಂಡಳು. ಮನುಭಾಯಿ ಹೆಣ್ಣಾಗಿದ್ದರೂ ಅವಳ ಧೈರ್ಯ, ಸ್ಥೈರ್ಯ, ನಡಿಗೆ ಎಲ್ಲವೂ ಗಂಡಸನ್ನು ಮೀರಿಸುವಂತಿತ್ತು. ಬೆಳೆಯುತ್ತಾ ಬೆಳೆಯುತ್ತಾ ಗಂಡು ಮಕ್ಕಳ ಉಡುಗೆ ತೊಡುಗೆಯನ್ನೇ ಧರಿಸುತ್ತಿದ್ದಳು. ಹೆಣ್ಣುಮಕ್ಕಳಿಗೆ ಸಹಜವಾದ ಆಟ ಪಾಠಗಳನ್ನು ಬದಿಗೊತ್ತಿ ಕತ್ತಿವರಸೆ, ಕುದುರೆ ಸವಾರಿ, ಬಂದೂಕು ಗುರಿ ಮುಂತಾದ ವಿರೋಚಿತವಾದ ಅಭ್ಯಾಸವೇ ಅವಳಿಗೆ ಇಷ್ಟವಾಗಿತ್ತು. ಜೊತೆಗೆ ಸಾಧ್ವಿ ಸೀತೆ, ವೀರಮಾತೆ ಜೀಜಾಬಾಯಿ ಮುಂತಾದವರ ಬಗ್ಗೆ ತಂದೆ ತಿಳಿಸಿಕೊಟ್ಟಿದ್ದರು. ಇತ್ತ ಮೋರೋಪಂಥನರಿಗೆ ಆಶ್ರಯ ನೀಡಿದ್ದ ಚೀಮಾಜಿ ಅನಾರೋಗ್ಯದಿಂದ ಕಾಲವಾದ. ಪತ್ನಿಯನ್ನು ಕಳೆದುಕೊಂಡಿದ್ದ ಮೋರೋಪಂಥನರಿಗೆ ತನ್ನ ಆಶ್ರಯದಾತನೂ ಮರಣ ಹೊಂದಿದ್ದು ಅತಿ ದುಃಖಕ್ಕೆ ಕಾರಣವಾಗಿ ಕಾಶಿನಗರವೇ ಬೇಸರವೆನಿಸಿತ್ತು. ಆಗ ಚೀಮಾಜಿಯ ಅಣ್ಣ ಬಾಜಿರಾಯನಿಂದ ಕರೆ ಬಂತು. ಹಾಗಾಗಿ ಕಾಶಿಯನ್ನು ಬಿಟ್ಟು ಬ್ರಹ್ಮಾವರ್ತ (ಬಿಠೂರ್)ಕ್ಕೆ ಬಂದು ಬಾಜಿರಾಯನ ಆಶ್ರಯದಲ್ಲಿ ನೆಲೆಸಿದರು. ಅಲ್ಲಿ ಮನೂಭಾಯಿಯ ಸಮವಯಸ್ಕರಾದ ಅರಮನೆಯ ಮಕ್ಕಳಾದ ನಾನಾ ಸಾಹೇಬ್ ಮತ್ತು ರಾವ್ ಸಾಹೇಬ್ ಗೆಳೆಯರಾದರು ಅವರೊಂದಿಗೆ ಕತ್ತಿವರಸೆ ಕುದುರೆ ಸವಾರಿ ಮುಂತಾದ ವಿರೋಚಿತ ಅಭ್ಯಾಸ ಸಾಗಿತ್ತು. ಒಮ್ಮೆಯಂತೂ ನಾನಾಸಾಹೇಬ್ ಮತ್ತು ರಾವ್ ಸಾಹೇಬ್ ಇಬ್ಬರು ಇವಳನ್ನು ಬಿಟ್ಟುಅರಮನೆಯ ಆನೆ ಏರಿ ಹೋದರು ಇದರಿಂದ ಮನುಭಾಯಿಗೆ ಬೇಸರವಾಯಿತು. ಇದನ್ನು ಕಂಡು ತಂದೆ ಮೋರೋಪಂತರು" ಮಗಳೇ, ನಾವು ಛತ್ರಪತಿಗಳಲ್ಲ, ರಾಜಮನೆತನ ದವರಲ್ಲ, ಸಾಮಂತರೂ ಅಲ್ಲ ಹಾಗಾಗಿ ಆನೆ ಏರುವ ಯೋಗ್ಯತೆ ನಮಗೆ ಇಲ್ಲ ನಮಗೆ ಸಲ್ಲದ್ದಕ್ಕೆ ಆಸೆ ಪಡಬಾರದು"ಎಂದು ಸಮಾಧಾನ ಪಡಿಸಲು ಬಂದಾಗ ಆಕೆ -"ಏನಿಲ್ಲ, ನನ್ನ ಹಣೆಯಲ್ಲಿ ಒಂದಲ್ಲ ಹಲವಾರು ಆನೆಯ ಒಡೆತನ ಬರೆದಿದೆ" ಎಂದು ಮಾರುತ್ತರವಿತ್ತಳು.

ಪ್ರಾಥಮಿಕ ಶಾಲೆಗೆ ಸೇರಿದ ಮನು ತರಗತಿಯಲ್ಲಿ ಬುದ್ಧಿ ಮತ್ತು ಪ್ರತಿಭೆ ಯಲ್ಲಿ ಎಲ್ಲರಿಗಿಂತ ಮುಂದು. ಉನ್ನತ ತರಗತಿಗೆ ಹೋಗುತ್ತಾ ಹೋಗುತ್ತಾ ಮರಾಠಿ, ಪಾರಸಿ, ಹಿಂದಿ ಕಲಿತಳು. ಜೊತೆಗೆ ರಾಮಾಯಣ ಮಹಾಭಾರತ ಗ್ರಂಥಗಳನ್ನು ಓದಿಕೊಂಡಳು. ಬೆಳೆವ ಸಿರಿ ಮೊಳಕೆಯಲ್ಲೇ ಎಂಬ ಗಾದೆ ಮಾತಿನಂತೆ ಅನೇಕರು ಇವಳು ಜಗತ್ಪ್ರಸಿದ್ಧಳಾಗುವಳೆಂದು ಉದ್ಘರಿಸಿದ್ದರು.

ಮಗಳು ದಷ್ಟಪುಷ್ಟವಾಗಿ ಸುಂದರವಾಗಿ ಬೆಳೆಯುತ್ತಿದ್ದಾಳೆ. ಸಹಜವಾಗಿ ಎಲ್ಲಾ ತಂದೆ ತಾಯಿಗಳಿಗಿರುವಂತೆ ಮನುಭಾಯಿಯ ತಂದೆ ಮೋರೋ ಪಂತರಿಗೆ ಮಗಳ ಭವಿಷ್ಯ, ಅವಳ ಮದುವೆಯ ಚಿಂತೆ ಪ್ರಾರಂಭವಾಯಿತು. ಅನೇಕರು ನಿನ್ನ ಮಗಳಿಗೆ ಒಳ್ಳೆಯ ರಾಜಕುಮಾರ ಹುಡುಗನೇ ಸಿಗುವನೆಂದು ಹೇಳುತ್ತಿದ್ದರು.ಆಗ ನಾನೊಬ್ಬ ಬಡ ಬ್ರಾಹ್ಮಣ, ರಾಜಕುಮಾರನಿಗೆ ಸರಿಸಾಟಿ ಯಾಗಿ ಉಡುಗೊರೆ ಸತ್ಕಾರ ಮಾಡುವಷ್ಟು ಶಕ್ತಿ ನನಗೆಲ್ಲಿದೆ ಎಂದು ಉದ್ಗರಿಸುತ್ತಿದ್ದರು. ಆದರೆ ಅವಳಿಗೆ ದೊರಕಿದ್ದು ಶಕ್ತಿಶಾಲಿಯಾದ ರಾಜನೇ.

ಝಾನ್ಸಿಯ ರಾಜ ಗಂಗಾಧರರಾಯನ ಕೈಹಿಡಿದ ಧರ್ಮಪತ್ನಿ ರಮಾಬಾಯಿ ಕಾಲವಾಗಿದ್ದಳು. ಮಕ್ಕಳೂ ಇರಲಿಲ್ಲ. ವಿದ್ವಾಂಸರೂ ಸುಸಂಸ್ಕೃತರೂ ಆಗಿದ್ದ ವೈದಿಕ ಮನೆತನದ ತಾತ್ಯಾ ದೀಕ್ಷಿತರು ಗಂಗಾಧರ ರಾಯನಿಗೆ ಆತ್ಮೀಯರು ಮತ್ತು ಗುರುಗಳು. ಸಮಾಜದ ಹಿತದೃಷ್ಟಿಯಿಂದ, ನಗರದ ಜಾತ್ರೆ, ಕುಲದೇವರ ಪೂಜೆ, ಯಜ್ಞ ಹೋಮಾದಿಗಳನ್ನು ಧರ್ಮಪತ್ನಿ ಇಲ್ಲದೆ ನೆರವೇರಿಸಿದರೆ ಫಲ ಸಿಗದು ಎಂದು ರಾಜನನ್ನು ಎರಡನೇ ಮದುವೆಗೆ ಒಪ್ಪಿಸಿದರು. ಪುರದ ಹಿತ ದೃಷ್ಟಿಯಿಂದ ಮಾಡಿದ ಮಾರ್ಗದರ್ಶನ. ಇದುವೇ ಬ್ರಾಹ್ಮಣನ ಗುಣ ಧರ್ಮ. ತಾತ್ಯಾ ದೀಕ್ಷಿತರೆ ಮೋರೋ ಪಂಥರನ್ನು ಭೇಟಿ ಮಾಡಿ ಮದುವೆ ಪ್ರಸ್ತಾಪ ಮಾಡಿ 18 ವರ್ಷದ ಮನುಭಾಯಿಯನ್ನು ಝಾನ್ಸಿಯರಾಜ ಗಂಗಾಧರ ರಾಯರಿಗೆ ಕೊಟ್ಟು ಮದುವೆ ಮಾಡಿಸಿದರು. ಅಂದಿನಿಂದ ಮನೂಭಾಯಿ ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯಾದಳು. 1851 ರಲ್ಲಿ ಲಕ್ಷ್ಮಿಬಾಯಿ ಗಂಡು ಮಗುವಿಗೆ ಜನ್ಮವಿತ್ತಳು. ಆದರೆ ಕ್ರೂರ ವಿಧಿ. ಮೂರು ತಿಂಗಳಲ್ಲೇ ಮಗು ತೀರಿ ಕೊಂಡಿತು. ವಾರಸುದಾರರಿಲ್ಲದ ರಾಜ್ಯದ ಬಗ್ಗೆ ಗಂಗಾಧರರಾಯರಿಗೆ ಮನೋರೋಗ ಅಂಟಿಕೊಂಡಿತು. ರೋಗಪೀಡಿತನಾಗಿ ಹಾಸಿಗೆ ಹಿಡಿದ ರಾಜ ರಾಣಿಯೊಡನೆ ಸಮಾಲೋಚಿಸಿ 1853ರಲ್ಲಿ ತಮ್ಮ ಕುಲದವನೇ ಆದ ಹುಡುಗನನ್ನು ದತ್ತು ತೆಗೆದುಕೊಂಡು ಅವನಿಗೆ ದಾಮೋದರರಾಯ ಎಂದು ಹೆಸರಿಟ್ಟರು. ಮಗುವನ್ನು ದತ್ತು ಪಡೆದ ಕೆಲವೇ ದಿನಗಳಲ್ಲಿ ಗಂಗಾಧರರಾಯರು ಡಾಲ್ ಹೌಸಿಗೆ ಪತ್ರ ಬರೆದು ದತ್ತು ಪುತ್ರನಿಗೆ ಉತ್ತರಾಧಿಕಾರವಿರುವಂತೆ ಮನ್ನಿಸಿ, ದಾಮೋದರರಾವ್ ಪ್ರೌಢನಾಗುವ ತನಕ ರಾಣಿ ಲಕ್ಷ್ಮೀಬಾಯಿಯನ್ನು ಅವನ ಪ್ರತಿನಿಧಿಯಾಗಿ ಮನ್ನಿಸಬೇಕೆಂದು ವಿನಂತಿಸಿ

ಕೊಂಡರು. ಅದಾದ ಕೆಲವೇ ದಿನಗಳಲ್ಲಿ ಅಂದರೆ 1853ರಲ್ಲಿ ಗಂಗಾಧರರಾಯ ನಿಧನ ಹೊಂದಿದರು. ಆ ವೇಳೆಗಾಗಲೆ ಲಾರ್ಡ್ ಡಾಲ್ ಹೌಸಿಯು ಹೇರಿದ್ದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಕರಾಳ ಶಾಸನ,ಗಂಡನ ಮರಣ, ಕೈಯಲ್ಲಿ ಮಗು ದಾಮೋದರ, ರಾಜ್ಯ ಕಬಳಿಸಿಕೊಳ್ಳಲು ಬಾಯಿ ತೆರೆದು ನಿಂತಿರುವ ಡಾಲ್ ಹೌಸಿ, ಇವುಗಳಿಂದ ದಿಕ್ಕೆಟ್ಟವಳಂತಾದಳು ರಾಣಿ ಲಕ್ಷ್ಮೀಬಾಯಿ.

ಕೊನೆಗೂ 1854ರ ಮಾರ್ಚ್ ನಲ್ಲಿ ಡಾಲ್ ಹೌಸಿಯಿಂದ ಕರಾಳ ಪತ್ರವೊಂದು ಬಂದಿತ್ತು. ಮಗುವಿನ ದತ್ತು ಸ್ವೀಕಾರ ಕಂಪೆನಿಯು ಒಪ್ಪುವುದಿಲ್ಲ, ಝಾನ್ಸಿಯನ್ನು ಕಂಪನಿ ಆಡಳಿತದಲ್ಲಿ ವಿಲೀನಗೊಳಿಸಲಾಗುವುದು, ರಾಣಿಯು ಕೋಟೆಯನ್ನು ತ್ಯಜಿಸಿ ಜನವಸತಿಯಲ್ಲಿರುವ ಅರಮನೆಯಲ್ಲಿ ವಾಸಿಸಬೇಕು, ತಿಂಗಳಿಗೆ 5 ಸಹಸ್ರ ರೂ ಮಾಸಾಶನ ಕೊಡಲಾಗುವುದು ಎಂದು ಘೋಷಿಸ ಲಾಗಿತ್ತು. ಆಘಾತಗೊಂಡ ರಾಣಿ –" ಸಾಧ್ಯವಿಲ್ಲ. ನಾನು ಝಾನ್ಸಿಯನ್ನು ಬಿಟ್ಟು ಕೊಡಲಾರೆ" ಎಂದು ದಿಟ್ಟ ತನದಿಂದ ಘೋಷಿಸಿದಳು. ಈ ಬ್ರಾಹ್ಮಣ ಮಹಿಳೆಯ ಘರ್ಜನೆ ಯಾವ ಕ್ಷತ್ರಿಯ ಪುರುಷನನ್ನೂ ಮೀರಿಸುವಂತಿತ್ತು. ಸಿಡಿದೇಳುವುದು, ಘರ್ಜಿಸುವುದು, ಪ್ರತಿರೋಧ ನೀಡುವುದು ಕೇವಲ ಯಾವುದೇ ಪಂಗಡದ ಯಾವುದೇ ಪುರುಷ ಮಾತ್ರರ ಸ್ವತ್ತಲ್ಲ, ಸ್ತ್ರೀಯರಿಗೂ ಆ ಶಕ್ತಿ ಇದೆ ಎಂದು ತೋರಿಸುವ ಮೂಲಕ ಸ್ತ್ರೀಕುಲಕ್ಕೆ ಆದರ್ಶ ಪ್ರಾಯಳಾದಳು ಈ ಬ್ರಾಹ್ಮಣ ಮಹಿಳೆ.

ಬ್ರಿಟಿಷ್ ಕ್ಯಾಪ್ಟನ್ ಹ್ಯೂರೋಸ್ ಪತ್ರವೊಂದನ್ನು ರಾಣಿಗೆ ಕಳುಹಿಸುತ್ತಾನೆ. ನಾಲ್ಕಾರು ಜನ ಅಂಗರಕ್ಷಕರೊಂದಿಗೆ ನಿಶಸ್ತ್ರಳಾಗಿ ಬಂದು ಎರಡು ದಿನಗಳೊಳಗೆ ಭೇಟಿಯಾಗಬೇಕು ಎಂದಿತ್ತು ಆ ಪತ್ರದಲ್ಲಿ. ಹೆಣ್ಣು ಹೆಂಗ ಸೊಬ್ಬಳನ್ನು ಕುತಂತ್ರದಿಂದ ಹಿಡಿದು ಹಾಕುವ ಅವನ ತಂತ್ರಕ್ಕೆ ಬಲಿಯಾಗುವಷ್ಟು ಮೂರ್ಖಳಲ್ಲ ಈ ಲಕ್ಷ್ಮೀಬಾಯಿ. ಪರಕೀಯರೆದುರು ನಿಂತು ಮಗುವನ್ನು ಎರವಲಾಗಿಡುವ ನಾರಿ ನಾನಲ್ಲ ಎಂಬ ಈ ನಾರಿಯ ಮಾತು ಕ್ಯಾಪ್ಟನ್ ಹ್ಯೂರೋಸ್ ನ ಎದೆಗೆ ಬಡಿದ ಸಿಡಿಲಾಯಿತು.

ಮಾರ್ಚ್ 25, 1958 ಕ್ಯಾಪ್ಟನ್ ಹ್ಯೂರೋಸ್ ನ ಮುಂದಾಳತ್ವದಲ್ಲಿ ಬ್ರಿಟಿಷ್ ಸೈನ್ಯ ಝಾನ್ಸಿಯ ಮೇಲೆ ಎರಗಿತು. "ಝಾನ್ಸಿಯ ಕೋಟೆಯನ್ನು ಜರ್ಜರಗೊಳಿಸಿ, ಒಳ ನುಗ್ಗಿ, ರಾಣಿಯನ್ನು ಜೀವಂತ ಸೆರೆಹಿಡಿಯಿರಿ, ಇಲ್ಲವೇ ಕೊಂದು ಹಾಕಿ" ಇದು ಹ್ಯೂರೋಸ್ ನ ಆಜ್ಞೆ. "ಬ್ರಿಟಿಷರ ಆಘಾತದಿಂದ ಕೋಟೆ ರಕ್ಷಿಸಿ, ವೈರಿಗಳ ತುಂಡರಿಸಿ, ಝಾನ್ಸಿ ಅರ್ಥಾತ್ ಭಾರತದ ವಿದೇಶಿ ಸಂಕೋಲೆಯನ್ನು ಕಿತ್ತೆಸೆಯಿರಿ" ಇದು ಲಕ್ಷ್ಮೀಬಾಯಿಯ ಆದೇಶ.

ಝಾನ್ಸಿಯ ಸುತ್ತಲೂ ಹ್ಯೂರೋಸ್ನ ಸೈನ್ಯ ಆವರಿಸಿಕೊಂಡಿತು. ನಗರದಿಂದ ಮುನ್ನೂರು ಅಡಿ ದೂರದಲ್ಲಿ ಒಂದು ಎತ್ತರದ ಬಂಡೆಯ ಮೇಲೆ ತೋಪುಗಳನ್ನು ಇಟ್ಟು ಎತ್ತರವಾದ ಗುಡ್ಡದ ಮೇಲೆ ದುರ್ಬೀನ್ ಗಳನ್ನು ಇಟ್ಟು ಕೋಟೆಯೊಳಗಿನ ಚಲನವಲನಗಳನ್ನು ಗಮನಿಸುತ್ತಿದ್ದ ಹ್ಯೂರೋಸ್. ಇತ್ತ ಮುಂಚೆಯೇ ಆಕ್ರಮಣ ಅರಿತಿದ್ದ ಲಕ್ಷ್ಮೀಬಾಯಿ 4000 ಸೈನಿಕರೊಂದಿಗೆ ಸಕಲ ಶಸ್ತ್ರಅಸ್ತ್ರಗಳೊಂದಿಗೆ ಯುದ್ಧಕ್ಕೆ ಸನ್ನದ್ಧಳಾಗಿದ್ದಳು. ಘನ ಘೋರ ಯುದ್ಧ ಪ್ರಾರಂಭವಾಯಿತು. ಅಪಾರ ಬ್ರಿಟಿಷ್ ಸೈನ್ಯದೊಡನೆ ಝಾನ್ಸಿ ಸೈನ್ಯ ವೀರಾವೇಷದಿಂದ ಹೋರಾಡಿತು. ಹತ್ತು ದಿನಗಳವರೆಗೂ ಯುದ್ಧ ನಡೆಯಿತು. ಝಾನ್ಸಿಯ ಸಹಾಯಕ್ಕೆಂದು ತಾಂತ್ಯ ಟೋಪೆ 1500 ಸೈನಿಕರೊಂದಿಗೆ ಬಂದ. ಆದರೆ ಬ್ರಿಷ್ ಸೈನ್ಯ ಅವರನ್ನು ಸದೆಬಡೆಯಿತು. ಈ ಸಮಾಚಾರ ತಿಳಿದ ಲಕ್ಷ್ಮೀಬಾಯಿ ಸೈನ್ಯ ಧೃತಿಗೆಟ್ಟಿತು. ಲಕ್ಷ್ಮೀಬಾಯಿ ಚಿಂತೆಗೀಡಾದಳು. ಮುಖ ಕಪ್ಪುಗಟ್ಟಿತು. ಆದರೂ ಸೈನ್ಯಕ್ಕೆ ಧೈರ್ಯ ತುಂಬುತ್ತಾ ಕಾದಾಡಿದಳು. ಸೋಲಿನ ಮೇಲೆ ಸೋಲು ಆಗುತ್ತಿದೆ, ಅಪಾರ ಬ್ರಿಟಿಷ್ ಸೈನ್ಯ ಕೋಟೆಯೊಳಗೆ ನುಗ್ಗಿದರೆ ಸೋಲು ಶತಸಿದ್ಧ ಎಂದರಿತ ಲಕ್ಷ್ಮೀಬಾಯಿ ಮುಂದೆಯಾದರೂ ಬ್ರಿಟಿಷ್‍ರ ವಿರುದ್ಧ ಯುದ್ಧ ಮಾಡಿ ತಾಯ್ನಾಡನ್ನು ಮುಕ್ತಗೊಳಿಸುವ ಉದ್ದೇಶದಿಂದ ಹತ್ತು ಹದಿನೈದು ಜನ ಸಹಾಯಕರೊಂದಿಗೆ ಬೆನ್ನಿಗೆ ದಾಮೋದರನನ್ನು ಕಟ್ಟಿಕೊಂಡು ಪಲಾಯನ ಮಾಡಿ ತಪ್ಪಿಸಿಕೊಂಡಳು.

ತಪ್ಪಿಸಿಕೊಂಡ ಲಕ್ಷ್ಮಿಬಾಯಿ ಒಂದೇ ಸಮನೆ 102 ಮೈಲಿ ಪ್ರಯಾಣ ಮಾಡಿ ಕಾಲ್ಪಿ ಎಂಬ ನಗರವನ್ನು ತಲುಪಿದಳು. ಎಲ್ಲಾ ಕಡೆಯೂ ಸೋಲನ್ನು ಅನುಭವಿಸಿದ್ದ ಕ್ರಾಂತಿಕಾರಿಗಳಿಗೆ ಆಶ್ರಯ ತಾಣವಾಗಿತ್ತು ಆ ಕಾಲ್ಪಿ. ಅಲ್ಲಿದ್ದ ರಾವ್ ಸಾಹೇಬ್ ತಾಂತ್ಯ ಟೋಪಿಯವರೊಂದಿಗೆ ಲಕ್ಷ್ಮಿ ಬಾಯಿಯು ಸೇರಿಕೊಂಡಳು. ಈ ವಿಷಯ ಹ್ಯೂರೋಸ್ ಗೆ ತಿಳಿದು ಸೈನ್ಯದೊಂದಿಗೆ ಕಲ್ಪಿಗೂ ಬಂದನು. ಕ್ರಾಂತಿಕಾರಿಗಳು ಒಟ್ಟಾಗಿ ತಮ್ಮ ಸೈನ್ಯದೊಂದಿಗೆ ಕಾದಾಡಿದರು. ಆದರೆ ಗೆಲುವು ಹ್ಯೂರೋಸ್ ನದಾಯಿತು. ಅಲ್ಲಿಂದಲೂ ಕ್ರಾಂತಿಕಾರಿಗಳು ಪಲಾಯನ ಗೈದರು.

ಝಾನ್ಸಿಯಲ್ಲಿ ಸೋತದ್ದಾಯಿತು. ಕಲ್ಪಿಯಲ್ಲೂ ಸೋತದ್ದಾಯಿತು. ಆದರೂ ಎದೆಗುಂದಲಿಲ್ಲ ಈ ಬ್ರಾಹ್ಮಣ ಹೆಂಗಸು. ಎಲ್ಲಾ ಕ್ರಾಂತಿಕಾರಿಗಳ ಜೊತೆ ಸಮಾಲೋಚನೆ ನಡೆಯಿತು. "ಅಂಜುವೆದೆ ನಮ್ಮದಲ್ಲ" ಎಂಬುದನ್ನು ಬ್ರಿಟಿಷರಿಗೆ ತೋರಿಸಬೇಕಿತ್ತು. ಆಪತ್ತು, ವಿಪತ್ತುಗಳ, ಅಪಜಯ, ಅವಮಾನಗಳ ನಡುವೆ ಧೃತಿಗೆಡದೆ ಹೊಸ ದಾರಿ ಹುಡುಕಲು ಹೊರಟರು ಲಕ್ಷ್ಮಿ ಬಾಯಿ ಮತ್ತು ಸಂಗಡಿಗರು. ಇವರೆಲ್ಲರ ಗುರಿ ಗ್ವಾಲಿಯರ್ ಕಡೆ ತಿರುಗಿತು.ಅಲ್ಲಿಯ ರಾಜ ಜಿಯಾಜಿರಾವ್ ಸಿಂಧ್ಯನ ಸಹಕಾರದಿಂದ ಬ್ರಿಟಿಷರ ವಿರುದ್ಧ ಹೋರಾಡಬೇಕೆಂಬ ಯೋಜನೆ. ಆದರೆ ಜಿಯಾಜಿರಾವ್ ಹೋರಾಟಕ್ಕೆ ಸಿದ್ಧನಿರಲಿಲ್ಲ. ಊರು ಬಿಟ್ಟು ಆಗ್ರಾದತ್ತ ಪಲಾಯನ ಮಾಡಿದ. ಕ್ರಾಂತಿಯ ಪಡೆ ಗ್ವಾಲಿಯರ್ ಒಳಹೊಕ್ಕು ನಗರದ ಹತೋಟಿ ಪಡೆಯಿತು. ಗ್ವಾಲಿಯರ್ ಜನತೆ, ಸೈನಿಕರು ಎಲ್ಲರೂ ಲಕ್ಷ್ಮೀಬಾಯಿಗೆ ಸಹಕಾರ ನೀಡಿದರು. ತಕ್ಷಣದಿಂದಲೇ ಹೊಸ ಸೈನಿಕರ ಸೇರ್ಪಡೆ, ಅವರಿಗೆ ಶಸ್ತ್ರಅಭ್ಯಾಸ, ಮೊದಲೇ ಇದ್ದ ಸೈನಿಕರಿಗೆ ಸಮರಾಭ್ಯಾಸ ಹೀಗೆ ಗ್ವಾಲಿಯರ್ ಕೋಟೆ ರಕ್ಷಣೆಗೆ, ಊರ ರಕ್ಷಣೆಗೆ, ತಾಲೀಮುಗಳು ಶುರುವಾದವು. ಲಕ್ಷ್ಮೀಬಾಯಿ ಗ್ವಾಲಿಯರ್ ತಲುಪಿದ್ದು, ಸೈನಿಕರ ಯುದ್ಧ ಸಿದ್ಧತೆ ಎಲ್ಲದರ ಮಾಹಿತಿ ಆಂಗ್ಲರಿಗೆ ಸಿಕ್ಕಿತು. ಕೂಡಲೇ ಎಚ್ಚೆತ್ತ ಆಂಗ್ಲರು ಯುದ್ಧ ಪಟುಗಳಾದ ಕರ್ನಲ್ ಸ್ಮಿತ್ ಮತ್ತು ಹ್ಯೂರೋಸ್ರನ್ನು ಬಲಾಢ್ಯ ಸೈನ್ಯದೊಂದಿಗೆ ಗ್ವಾಲಿಯರ್ ಗೆ ಕಳಿಸಿದರು. ಇವರು ಗ್ವಾಲಿಯರ್ ನಗರವನ್ನು ನಾಲ್ಕು ಕಡೆಯಿಂದ ಸುತ್ತುವರೆದರು. ಇತ್ತ ಕೆರಳಿದ ಸಿಂಹಿಣಿಯಂತೆ ರಣಚಂಡಿಯಾದ ರಾಣಿ ಲಕ್ಷ್ಮೀಬಾಯಿ ದೇಹ ರಕ್ಷಣೆಗೆ ಕಬ್ಬಿಣದ ಕವಚ, ಚೆಂಡೇರಿ ಪೇಟ, ಅದರ ಮೇಲೆ ಶರ್ವಾನಿ, ಎಡಬಲ ಪಕ್ಕದಲ್ಲಿ ಖಡ್ಗ, ಕೈಯಲ್ಲಿ ಗುರಾಣಿ ಹಿಡಿದು, ತನ್ನ ಸೈನ್ಯ ಪಾಳಯಕ್ಕೆ ಉತ್ಸಾಹ ತುಂಬುತ್ತ ಬ್ರಿಟಿಷರ ರುಂಡ ಚಂಡಾಡಲು ಯುದ್ಧ ಭೂಮಿಗೆ ಧುಮುಕಿದಳು. ಸೈನಿಕರ ಕೂಗಾಟ, ಚೀತ್ಕಾರ, ಜಯ ಘೋಷ ಮುಗಿಲು ಮುಟ್ಟಿತು. ಅರಿಗಳ ತಲೆಯನ್ನು ತರಿಯುತ್ತಾ ಮುಂದೆ ಸಾಗಿದಳು ರಾಣಿ. ಆಂಗ್ಲ ಸೈನಿಕರ ಸಂಖ್ಯೆ, ಅವರ ಕುತಂತ್ರ, ಯುದ್ಧ ಸಾಮಗ್ರಿ ಇವುಗಳ ಮುಂದೆ ರಾಣಿಯ ಸೈನ್ಯಶಕ್ತಿ ಕರಗುತ್ತಾ ಬಂತು. ಎಲ್ಲಿ ಹೋದರೂ ಶತ್ರುಗಳ ಮಧ್ಯೆ ರಾಣಿ ಪ್ರಾಣದ ಹಂಗು ತೊರೆದು ನೂರಾರು ವೈರಿಗಳ ಪ್ರಾಣ ತೆಗೆದಳು. ಮೈಯಲ್ಲಿ ಗಾಯ, ರಕ್ತ ಸುರಿಯುತ್ತಿದೆ. ಅನತಿ ದೂರದಲ್ಲಿ ತನ್ನ ಸೈನ್ಯ ಕಂಡರೂ ತಲುಪಲಾಗದಂತೆ ಶತ್ರುಗಳು ಆವರಿಸಿದ್ದಾರೆ. ಸುತ್ತೆಲ್ಲ ಖಡ್ಗ ಬೀಸುವ ಸೈನಿಕರೇ. ಎಲ್ಲೋ ಒಂದಿಬ್ಬರು ಅವಳ ಅಂಗರಿದ್ದಾರೆ. ಶತ್ರುವಿನ ಖಡ್ಗ ಪ್ರಹಾರದಿಂದ ರಾಣಿಯ ತಲೆಯಭಾಗ ಮತ್ತು ಕಣ್ಣುಕೆನ್ನೆ ಕತ್ತರಿಸಿದೆ. ಇನ್ನೊಂದು ಏಟು ಎದೆಗೆ ಬಿದ್ದಿದೆ. ಇಷ್ಟಾದರೂ ಆ ವೀರ ವನಿತೆ ಹೋರಾಡು ತ್ತಲೇ ಇದ್ದಾಳೆ. ಕೊನೆಗೂ ರಾಣಿ ಕುದುರೆಯಿಂದ ಕೆಳಗೆ ಬಿದ್ದಳು. ಬಲಗಣ್ಣು ಹೊರಗೆ ಬಂದಿದೆ. ರಕ್ತ ಹರಿಯುತ್ತಿದೆ. ಉಸಿರು ಮೇಲೆ ಬರುತ್ತಿದೆ. ಕೂಡಲೇ ಅಂಗರಕ್ಷಕರು ಬಂದು ಎಲ್ಲರ ಕಣ್ಣು ತಪ್ಪಿಸಿ ಪಕ್ಕದಲ್ಲೆ ಇದ್ದ ಗಂಗಾದಾಸರ ತೋಟಕ್ಕೆ ಕರೆತಂದರು. ಕಣ್ಣರಳಿಸಿ ನೋಡುತ್ತಾಳೆ, ಸುತ್ತಲೂ ಅವಳ ಆಪ್ತರು ಕಣ್ಣೀರಿಡುತ್ತಾ ನಿಂತಿದ್ದಾರೆ. ಏದುಸಿರು ಬರುತ್ತಿದೆ. ದತ್ತುಪುತ್ರ ದಾಮೋದರ ಗಂಗಾಜಲ ಕುಡಿಸಿದ. 1858 ಜೂನ್ 18– ವೀರ ವನಿತೆಯ ಪ್ರಾಣ ಪಕ್ಷಿ ಭಾರತಮಾತೆಯ ಪದತಲದಲ್ಲಿ ಲೀನವಾಯಿತು. ಸತ್ತರೂ ನನ್ನ ದೇಹ ಪರಕೀಯರು ಸ್ಪರ್ಷ ಮಾಡಬಾರದೆಂಬ ಅವಳ ಆಸೆ ಈಡೇರಿತು. ದತ್ತು ಪುತ್ರನಿಂದ ಅಂತ್ಯಸಂಸ್ಕಾರವಾಯಿತು.

**"ಅಳಿದರೇನು ದೇಹವಿಂದು**

**ದಾರಿದೀಪ ಉರಿವುದು/ ನವ ಜನಾಂಗ ನೆಗೆದು ಬಂದು ತೈಲವದಕೆ ಸುರಿವುದು//"**

**ಭಾರತ್ ಮಾತಾ ಕಿ ಜೈ**

# ದೈವ ಮತ್ತು ಪುರುಷ ಪ್ರಯತ್ನ- 2

(ಕೃಪೆ : ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು)

-ಡಾ. ಶಂಕರನಾರಾಯಣ ಜೋಯ್ಸ್

ದೈವ ಮತ್ತು ಪುರುಷಪ್ರಯತ್ನದ ಬಗ್ಗೆ ಒಂದು ವ್ಯವಸ್ಥಿತವಾದ ಚಿಂತನೆಯನ್ನು ನಡೆಸುವ ಮೊದಲ ಹಂತದಲ್ಲಿ ದೈವ, ವಿಧಿ ಮೊದಲಾದ ಪದಗಳು ಸಂಸ್ಕೃತ ಭಾಷೆಯಲ್ಲಿ ಯಾವ ಯಾವ ಅರ್ಥಗಳಲ್ಲಿ ಬಳಕೆಗೆ ಬಂದಿವೆ? ಎಂಬುದನ್ನು ಗಮನಿಸುವುದು ಅಗತ್ಯವಾಗಿದೆ. ಅಮರ ಕೋಶವು **'ದೈವಂದಿಷ್ಟಂ ಭಾಗಧೇಯಂ ಭಾಗ್ಯಂ ಸ್ತ್ರೀನಿಯತಿರ್ವಿಧಿಃ'**ಎಂಬುದಾಗಿ ದೈವ, ದಿಷ್ಟ, ಭಾಗಧೇಯ, ಭಾಗ್ಯ, ನಿಯತಿ, ವಿಧಿ ಎಂಬ ಪದಗಳನ್ನು ಪರ್ಯಾಯ ಪದಗಳೆಂದು ತಿಳಿಸುತ್ತೆ. ಕರ್ಮ ಹಾಗೂ ಅದೃಷ್ಟವೆಂಬ ಶಬ್ದಗಳೂ ಸಹ ಸಾಮಾನ್ಯವಾಗಿ ಈ ಅರ್ಥದಲ್ಲೂ ಬಳಕೆಯಲ್ಲಿವೆ.

**ದೇವಾತ್ ನಿಯತಾತ್ಆಗತಂದೈವಮ್**-ಒಂದು ನಿಯತವಾದ ದೇವತೆಯಿಂದ ಬಂದದ್ದು ದೈವ ಎಂದು ದೈವಪದಕ್ಕೆ ವಿವರಣೆ ನೀಡುವುದು ಉಂಟು. ದೇವಪದವು **'ದೀವ್ಯತಿ ಆನಂದೇನಕ್ರೀಡತಿ ಇತಿದೇವಃ**- ಆನಂದದಿಂದ ಕ್ರೀಡಿಸುವವನುದೇವ' ಎಂಬ ವಿವರಣೆಯುಳ್ಳದ್ದಾಗಿದೆ. ದಿವು (ಕಾಂತೌ) ಎಂಬ ಧಾತುವಿನಿಂದಲೂ ಪ್ರಕಾಶಮಯ ಎಂಬರ್ಥದಲ್ಲಿ ದೇವಪದ ಸಿದ್ಧವಾಗುವುದು. ಹಾಗಾದರೆ, ಆನಂದದಿಂದ ಕ್ರೀಡಿಸುವವರೂ ಪ್ರಕಾಶಮಯರೂ ಆದವರು ಯಾರು?

'ದೇವರು' ಎಂಬುದು ಹಿಂದೂ ಇಂದೂ ಪರಸ್ಪರ ವಿರುದ್ಧವಾದ ಅನೇಕ ಬಗೆಯ ಹೇಳಿಕೆಗಳಿಗೆ ತವರಾಗಿದೆ. ದೇವರು ನಿಜವೇ? ಸುಳ್ಳೇ? ಇರುವುದಾದರೆ ಹೇಗಿದ್ದಾನೆ? ಎಲ್ಲಿದ್ದಾನೆ? ಅವನಿಗೂ ನಮಗೂ ಯಾವ ಸಂಬಂಧ? ಇತ್ಯಾದಿ ಬಗೆ ಬಗೆಯ ಚಿಂತನೆಗಳು ಇತಿಹಾಸದಲ್ಲಿ ನಡೆದಿರುವುದು ಮಾತ್ರವಲ್ಲದೆ, ದೇವರ ಹೆಸರಿನಲ್ಲಿ ಸಾಕಷ್ಟು ಘರ್ಷಣೆ ಗಳೂ, ಸಾವು-ನೋವುಗಳೂ ಘಟಿಸಿವೆ. ಇಷ್ಟೆಲ್ಲ ಅನರ್ಥಗಳನ್ನು ಉಂಟು ಮಾಡಿದ ದೇವರು ಮಾನವರಿಗೆ ಹಿತೈಷಿಯೇ? ಇದೆಲ್ಲ ಕಲ್ಪನೆಯ ಕೂಸೆ? ಎಂದು ಮೊದಲಾಗಿ ಪ್ರಶ್ನೆಗಳು ತಲೆದೋರುತ್ತವೆ. ದೇವರಿದ್ದರೆ' ಇನ್ನು ಐದು ನಿಮಿಷ ಟೈಮ್ ಕೊಡುತ್ತೇನೆ. ಅವನು ನನ್ನ ಎದುರಿಗೆ ಬಂದು ನಿಲ್ಲಲಿ. ಒಮ್ಮೆ ಬರದಿದ್ದಲ್ಲಿ ದೇವರು ಇಲ್ಲ ಎಂಬುದೇ ತೀರ್ಮಾನ' ಎಂಬ ಧೋರಣೆಯಿಂದ ದೇವರ ಅಸ್ತಿತ್ವವನ್ನು ತರ್ಕಿಸಿ ದವರಿದ್ದಾರೆ. ದೇವರು ಎಲ್ಲರಿಗೂ ಸುಖದುಃಖಗಳನ್ನು ಕೊಡುವವನಾದರೆ ಅವನೇಕೆ ಮರೆಯಲ್ಲಿ ಈ ಕಾರ್ಯವೆಸಗಬೇಕು? ರಾಜಾರೋಷವಾಗಿ ಎದುರು ಬರಬಾರದೇ? ಎಂದು ಚಿಂತಿಸಿದವರಿದ್ದಾರೆ. ದೇವರು ಸರ್ವಶಕ್ತ ಎಂಬುದು ನಿಜವಾದರೆ ಅವನಿಂದ ಹೊರಲಾಗದ ಒಂದು ಕಲ್ಲು ಬಂಡೆಯನ್ನು ಅವನು ಸೃಷ್ಟಿಸಲಿ ಎಂದು ಅವನನ್ನು ಛಾಲೆಂಜ್ ಮಾಡುವವರಿದ್ದಾರೆ. ಅವನು ಅಂತಹ ಕಲ್ಲನ್ನು ಸೃಷ್ಟಿಸಿದರೆ ಅವನಿಗೆ ಹೊರಲು ಸಾಧ್ಯವಾಗದ ಒಂದು ಕಲ್ಲು ಬಂಡೆಯಿದೆ. ಅದರಿಂದ ಅವನು ಸರ್ವಸಮರ್ಥನಲ್ಲ ಎಂಬುದು ಸಿದ್ಧವಾದಂತಾಗುತ್ತದೆ. ಸೃಷ್ಟಿಸದಿದ್ದರೆ ಅಂತಹ ಒಂದು ವಸ್ತುವನ್ನು ಸೃಷ್ಟಿಸುವ ಯೋಗ್ಯತೆ ಇಲ್ಲವಾದ್ದರಿಂದ ಅವನು ಸರ್ವಸಮರ್ಥನಲ್ಲ ಎಂಬುದು ಆಗಲೂ ಸಿದ್ಧವಾಗುತ್ತೆ, ಎಂದು ದೇವರನ್ನು ಪೇಚಿಗೆ ಸಿಗಿಸುತ್ತೇವೆಂದು ಸಂತೋಷಪಡುವವರೂ ಇದ್ದಾರೆ. ದೇವರು ಮಾನವರಿಗೆ ಹಿತೈಷಿಯೇ ಆಗಿದ್ದರೆ ಸುಖವನ್ನೇ ಕೊಡುಬಹುದಿತ್ತಲ್ಲ ದುಃಖವನ್ನೇಕೆ ಉಂಟು ಮಾಡಬೇಕು? ಎಂದು ಆಕ್ಷೇಪಿಸುವವರಿಲ್ಲದಿಲ್ಲ. ದೇವರಿಗೂ ರಾಗದ್ವೇಷಗಳುಂಟೇ? ಶಿವ-ವಿಷ್ಣುಗಳಿಗೆ ಪೈಪೋಟಿ. ಗಣೇಶ, ಸುಬ್ರಹ್ಮಣ್ಯರಲ್ಲಿ ಪರಸ್ಪರ ಸ್ಪರ್ಧೆ. ಲಕ್ಷೀ-ಪಾರ್ವತಿಯರಿಗೆ ಹೊಯ್ದಾಟ. ಹೀಗೆ ಅವರೇ ರಾಗದ್ವೇಷಗಳಿಗೆ ಒಳಗಾಗಿರುವಾಗ ಅವರು ನಮಗೇನು ಶ್ರೇಯಸ್ಸನ್ನುಂಟು ಮಾಡಬಲ್ಲರು? ಅವರಿಗೆ ಮೂರ್ತ ರೂಪವಿರುವು ದಾದರೆ ಗಣೇಶೋತ್ಸವದಂತಹ ದಿನಗಳಲ್ಲಿ ಏಕಕಾಲದಲ್ಲಿ ಇಷ್ಟೆಲ್ಲ ಮನೆಗಳಿಗೆ ಭಾಗವಹಿಸುವುದಾದರೂ ಹೇಗೆ? ಅವನನ್ನು ಒಂದೆಡೆ ಸರ್ವಶಕ್ತ ಎಂದು ಕೊಂಡಾಡುವುದೆಂತು, ಇನ್ನೊಂದೆಡೆ ಅವನಿಗೆ ತಾವೇ ಪ್ರಾಣ ಪ್ರತಿಷ್ಠಾಪನೆ ಮಾಡುವುದೆಂತು. ಇವೆಲ್ಲ ಪರಸ್ಪರ ವಿರುದ್ಧವಾದ ವ್ಯವಹಾರಗಳಲ್ಲವೆ? ದೇವಸ್ಥಾನಗಳನ್ನು ದರೋಡೆಕೋರರು ಎಷ್ಟು ಬಾರಿ ಸೂರೆಗೊಂಡಿಲ್ಲ! ತನ್ನ ವಸ್ತುಗಳನ್ನೇ ತಾನು ಕಾಪಾಡಿಕೊಳ್ಳಲಾರದ ದೇವರು ಇನ್ನೊಬ್ಬರನ್ನು ಕಾಪಾಡುತ್ತಾನೆಯೆ? ದೇವರ ಸನ್ನಿಧಿ ಪವಿತ್ರ ಎನ್ನುವುದಾದರೆ ಅವನ ಪಾದಸನ್ನಿಧಿಯಲ್ಲೇ ಸದಾ ವಾಸಮಾಡುವ ಜಿರಳೆಗಳು ಎಲ್ಲರಿಗಿಂತಲೂ ಧನ್ಯವಾದವುಗಳಲ್ಲವೆ? ಎಂದು ಮೊದಲಾಗಿ ಆ ದೇವರ ಮೇಲೆ ಪ್ರಶ್ನೆಗಳ ಸುರಿಮಳೆ.

ಭೂಗರ್ಭದಲ್ಲಿ ಹೊನ್ನಗಣಿಯಿರುತ್ತೆ. ಅದರ ಮೇಲೇ ನಡೆದಾಡುತ್ತಾ ಅಲ್ಲೇ ವಾಸಮಾಡುತ್ತಾ ಅದರ ಪರಿವೆಯಿಲ್ಲದೆ ಹೊನ್ನಿಗಾಗಿ ಪರದಾಡುತ್ತಿರ ಬಹುದಷ್ಟೇ! ಹೀಗಾಗಲು ಕಾರಣ? ಭೂಗರ್ಭದಲ್ಲಿರುವ ಹೊನ್ನನ್ನು ಅರ್ಥಮಾಡಿಕೊಳ್ಳಲು ಒಂದು ದೃಷ್ಟಿಕೋನವಿರಬೇಕು. ಒಂದು ಸಾಧನ ವಿರಬೇಕು. ಅವುಗಳಿಲ್ಲವಾದಾಗ ಹೊನ್ನಗಣಿಯೂ ಮಣ್ಣಿನ ರಾಶಿಯಾಗಿಯೇ ತೋರುತ್ತೆ. ಇದೇ ರೀತಿ ಈ ಸೃಷ್ಟಿಯ ಗರ್ಭದಲ್ಲೇನಿದೆ? ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೂ ಒಂದು ದೃಷ್ಟಿಕೋನ ವಿರಬೇಕಾಗುತ್ತೆ. ಒಂದು ಸಾಧನವಿರಬೇಕಾಗುತ್ತೆ. ಅಂತಹ ದೃಷ್ಟಿಕೋನವಾಗಲಿ - ಸಾಧನವಾಗಲಿ ಇಲ್ಲದವರು ಏನೇ ಹೇಳಿದರೂ ಅದು ನಂಬಲರ್ಹವಾಗುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅಂತಹ ದೃಷ್ಟಿಕೋನ ಹಾಗು ಸಾಧನವುಳ್ಳವರು ಏನೆಂದು ಹೇಳುತ್ತಾರೋ ಅದು ಸಾಮಾನ್ಯರ ದೃಷ್ಟಿಗೆ ಅರಿವಾಗದ ವಿಷಯವಾದರೂ ನಂಬಲು ಯೋಗ್ಯವಾಗಿರುತ್ತೆ. ನಂಬಲು ಅರ್ಹವಾದ ವಿಚಾರದ ಬಗ್ಗೆ ಹುಟ್ಟುವ ನಂಬಿಕೆ ಕ್ರಮಕ್ರಮವಾಗಿ ಆ ವಸ್ತುವಿನ ದರ್ಶನದ ಕಡೆಗೆ ಕರೆದೊಯ್ಯುತ್ತೆ. ಅದಕ್ಕೂ ಮಿಗಿಲಾಗಿ ಸತ್ಯವಲ್ಲದ್ದನ್ನು ನಂಬಿ ಭ್ರಮಿಸುವ ದೊಡ್ಡ ಅನರ್ಥವನ್ನು ದೂರ ಮಾಡುತ್ತೆ.

ಸನಾತನಾರ್ಯಭಾರತ ಮಹರ್ಷಿಗಳು ಧಾರಣಾ-ಧ್ಯಾನ-ಸಮಾದಿ ಗಳೆಂಬ ಇಂದ್ರಿಯ ಸಂಯಮ ವಿದ್ಯೆಯನ್ನು ಮೈಗೂಡಿಸಿಕೊಂಡವರಾಗಿ **'ಆವೃತ್ತಚಕ್ಷುಃ ಅಮೃತತ್ವಮಿಚ್ಛನ್'** ಎಂಬ ಉಪನಿಷದ್ವಾಣಿಯು ಸಾರುವಂತೆ ಅಮೃತತ್ವವನ್ನು ಬಯಸಿ ಹಿನ್ನೋಟದಿಂದ ನೋಡಿದರು. ಅವರು ಈ ಮಾನವದೇಹವೆಂಬ ಪ್ರಯೋಗಾಲಯದಲ್ಲಿ ಮಾಡಿದ ಅದ್ಭುತಸಾಧನೆ ಅದು. ಈ ಪ್ರಯೋಗದಲ್ಲಿ ದೂರದರ್ಶಕ, ಸೂಕ್ಷ್ಮದರ್ಶಕ, ಪಾರದರ್ಶಕ ವೆಂಬ ಯಾವ ಸಾಧನ ಅವರಿಗಿತ್ತು? ದೈವದತ್ತವಾದ ಮಾನವನ ಚಿತ್ತಕ್ಕೇ ಈ ಎಲ್ಲ ಸಾಧನಗಳ ಸಾಮರ್ಥ್ಯವು ನಿಸರ್ಗಸಿದ್ಧವಾಗಿದೆಯೆಂಬ ಸತ್ಯವನ್ನು ಅವರು ಅರಿತವರಾಗಿದ್ದರು. ಆದ್ದರಿಂದ ತಮ್ಮ ಚಿತ್ತವನ್ನೇ ಪರಿಶುದ್ಧವಾದ ಸಾಧನವನ್ನಾಗಿ ಮಾಡಿಕೊಂಡು ಅಂತಸ್ಸತ್ಯವನ್ನು ದರ್ಶನ ಮಾಡಿದರು. ಅವರೂ ನಿಸರ್ಗಸಂಶೋಧಕರೇ! ಅವರೂ ಪ್ರಕೃತಿಗರ್ಭದಲ್ಲೇ ನಿದೆಯೆಂಬುದನ್ನೇ ಶೋಧಿಸಿದರು. ಆಗ ಅವರು ಕಂಡದ್ದು

**ಹಿರಣ್ಮಯಂಪುರುಷಂ ಜ್ಯೋತೀ ರೂಪಮ್** । ಜ್ಯೋತೀ ರೂಪನಾದ ಹಿರಣ್ಮಯನಾದ ಪುರುಷನನ್ನು. ಆ ಹಿರಣ್ಮಯನಾದ ಪುರುಷನ ವ್ಯಾಪ್ತಿಯೆಷ್ಟು? ಎಂದು ಅವರು ಚಿತ್ತವನ್ನು ಹರಿಸಿದಾಗ ಅವನು ಸಮಗ್ರ ಸೃಷ್ಟಿಯನ್ನು ಆವರಿಸಿ ಎಲ್ಲೆಲ್ಲೂ ತುಂಬಿ ತಾನೇತಾನಾಗಿ ಏಕ ಮಾತ್ರ ಸತ್ಯರೂಪನಾಗಿ ಬೆಳಗುತ್ತಿದ್ದಾನೆಂಬ ಸತ್ಯವನ್ನು ಮನಗಂಡರು. **ಏಕಮೇವಪರಂ ಬ್ರಹ್ಮವಿಭಾತಿ** । – ಒಂದೇ ಒಂದಾದ ಪರಂ ಬ್ರಹ್ಮವು ಬೆಳಗುತ್ತಿದೆ' ಎಂದು ತಾವು ಕಂಡ ಸತ್ಯವನ್ನು ಉದ್ಘೋಷಿಸಿದರು. ಬೃಹತ್ತಾಗಿ ಎಲ್ಲೆಲ್ಲೂ ವ್ಯಾಪಿಸಿರುವುದೇ ಬ್ರಹ್ಮ. ಅವನ ಸ್ವರೂಪವನ್ನು ಮತಿಗೆ ತಂದುಕೊಂಡು **ಸಚ್ಚಿದಾನಂದರೂಪಂಬ್ರಹ್ಮ।** – ಸತ್–ಚಿತ್–ಆನಂದ ರೂಪವಾದದ್ದು ಬ್ರಹ್ಮ ಎಂದು ಅರುಹಿದರು. ನಿತ್ಯನೂ ಅವಿನಾಶಿಯೂ ಪ್ರಕಾಶಮಯನೂ ಆನಂದರೂಪನೂ ಆಗಿದ್ದಾನೆ ಎಂಬುದು ಅವರ ಮತಿಗೆ ಬಂದ ವಿಷಯ. ಅವರು ಕಂಡ ಈ ಸತ್ಯವನ್ನು 'ದೇವ' ಎಂಬ ಪದದಿಂದಲೂ ವ್ಯವಹರಿಸಿದರು. ಅವನು ಬೆಳಗುತ್ತಿದ್ದವನಾದ್ದರಿಂದ ದೇವ. ಅವನ ಆ ಪ್ರಕಾಶವೇ ಈ ಸೃಷ್ಟಿಯಲ್ಲಿ ಎಲ್ಲೆಲ್ಲೂ ತುಂಬಿ 'ಬೆಳಕು'ಎಂಬುದಕ್ಕೆ ಅವಕಾಶ ನೀಡಿದೆಯೆಂಬ ನಿಜವನ್ನುಕಂಡರು–

**ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿಕುತೋಽಯಮಗ್ನಿಃ । ತಮೇವಭಾನ್ತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥**

'ಸೂರ್ಯನು ಸ್ವತಃ ಬೆಳಗುತ್ತಿಲ್ಲ. ಚಂದ್ರನಾಗಲಿ ನಕ್ಷತ್ರಗಳಾಗಲಿ ಸ್ವತಃಪ್ರಕಾಶಮಯರಲ್ಲ, ಈ ಮಿಂಚು ಸ್ವತಃ ಬೆಳಗುತ್ತಿಲ್ಲ. ಅಗ್ನಿಯಾದರೂ ಸ್ವತಃ ಹೇಗೆ ಬೆಳಗೀತು? ಆ ಬೆಳಗುವ ಪರಮಪ್ರಕಾಶವನ್ನನುಸರಿಸಿ ಇವೆಲ್ಲವೂ ಬೆಳಗುತ್ತಿವೆ. ಆ ಪರಮಪ್ರಕಾಶಮಯನ ಪ್ರಕಾಶದಿಂದಲೇ ಇದೆಲ್ಲವೂ ಬೆಳಗುತ್ತಿದೆ'ಎಂದು ಅವರ ಅನುಭವ ಅಭಿವ್ಯಕ್ತಿಗೊಂಡಿತು. ಹೃದಯ ಗುಹೆಯಲ್ಲಿ ಕಂಡ ಆ ಸತ್ಯವನ್ನು ಎಲ್ಲೆಲ್ಲೂ ನೋಡಿ **ಏಕಮೇವಾದ್ವಿತೀಯಂ ಬ್ರಹ್ಮ** । ಎಂದರು. ಅಣುರೇಣುತೃಣಕಾಷ್ಠಗಳಲ್ಲಿ ನಿತ್ಯವಾಗಿ ನಿರ್ವಿಕಾರವಾಗಿ ಪ್ರತಿಷ್ಠಿತವಾದ ಆ ಸತ್ಯವನ್ನು–

**ಏಕೋ ದೇವಃ ಸರ್ವಭೂತೇಷುಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀಚೇತೋ ಕೇವಲೋ ನಿರ್ಗುಣಶ್ಚ ॥**

'ಒಂದೇ ಒಂದಾದ ಈ ಪ್ರಕಾಶವು ಸರ್ವಭೂತಗಳಲ್ಲೂ ಗೂಢವಾಗಿ ಅಡಗಿದೆ. ಎಲ್ಲೆಲ್ಲೂ ಇದೆ. ಎಲ್ಲ ಜೀವಕೋಟಿಗಳ ಅಂತರಾತ್ಮವಾಗಿದೆ. ಎಲ್ಲ ಕರ್ಮಗಳಲ್ಲೂ ಹಿಂದಿರುವ ಸೂತ್ರಧಾರಿ. ಎಲ್ಲವನ್ನೂ ನೋಡುತ್ತಿರುವ, ಅರಿತಿರುವ ನಿರ್ಗುಣವಾದ ಸತ್ಯವಿದು' ಎಂದು ಬಗೆಬಗೆಯಾಗಿ ಬಗೆಗೆ ಬಂದ ವಿಷಯವನ್ನು ಬಣ್ಣಿಸಿದರು.

ತಾವು ಕಂಡ ಸತ್ಯವನ್ನು, ತಮ್ಮಂತೆ ಸಾಧನ ಸಂಪತ್ತನ್ನು ಇಟ್ಟುಕೊಂಡವರೆಲ್ಲರೂ ಅನುಭವಿಸುವ ಸನ್ನಿವೇಶವನ್ನು ಮತ್ತೆ ಮತ್ತೆ ಪರಿಶೀಲಿಸಿ ಇದೊಂದು ಸಾರ್ವಕಾಲಿಕ ಸತ್ಯ ಎಂದು ಘೋಷಿಸಿದರು. ಪ್ರಯೋಗಾಲಯದಲ್ಲಿ ಕಂಡ ಒಂದು ಆವಿಷ್ಕಾರವನ್ನು ಹೇಗೆ ಅದೇ ರೀತಿಯಾದ ಪ್ರಯೋಗವನ್ನು ಮಾಡಿದಾಗ ಯಾರಾದರೂ ಕಂಡುಕೊಳ್ಳಬಹುದೋ ಅದೇರೀತಿ ತಾವು ಕಂಡ ಸತ್ಯವನ್ನು ಅವರು ಉಪಯೋಗಿಸಿದ ಸಾಧನಗಳನ್ನೇ ಬಳಸಿ ಮಾನವಮಾತ್ರನು ಕಂಡುಕೊಳ್ಳ ಬಹುದು ಎಂಬುದನ್ನು ತಾವು ಮನದಟ್ಟು ಮಾಡಿಕೊಂಡು ಲೋಕಕ್ಕೆ ಮನವರಿಕೆ ಮಾಡಿದರು. ಅವರೂ ವಿಜ್ಞಾನಿಗಳೇ. ಟೆಸ್ಟ್‌ಟ್ಯೂಬ್, ಥರ್ಮಾಮೀಟರ್ ಇತ್ಯಾದಿಗಳನ್ನು ಇಟ್ಟುಕೊಂಡು ಹೊರಟವನು ಮಾತ್ರವೇ ವಿಜ್ಞಾನಿಯೆಂಬುದು ಭ್ರಾಂತಜನರ ಅಲ್ಪಮತಿಯ ನೋಟ. ಆಧುನಿಕ ವಿಜ್ಞಾನದಲ್ಲಿ ಹೇಗೆ ಪ್ರಯೋಗವನ್ನು ಅನೇಕ ಬಾರಿ ಆವೃತ್ತಿಗೊಳಿಸಿ ಸತ್ಯವನ್ನು ಒರೆಹಚ್ಚಬಹುದೋ ಬೇರೆಬೇರೆ ಪ್ರಮಾಣಗಳಿಂದ ಪರಿಶೀಲಿಸಿ ನಿರ್ಣಯಿಸಬಹುದೋ ಅದೇರೀತಿ ಅಷ್ಟೇ ನಿಖರವಾಗಿ ಸತ್ಯವನ್ನು ಪತ್ತೆಹಚ್ಚಿದ ಅವರು ವಿಜ್ಞಾನಿಗಳಲ್ಲದೆ ಮತ್ತೇನು? ಅವರ ಸಾಧನೆ ಶೋಧನೆಗಳ ಅರಿವಿಲ್ಲದಿದ್ದಾಗ ಅವರ ಬೋಧನೆಯೂ ಬಗೆಗೆ ಹರಿಯದಾದೀತು. ಅದು ಯಾರತಪ್ಪು? ಆದ್ದರಿಂದ ಋಷಿಮಹರ್ಷಿಗಳು ಕಂಡ ಸತ್ಯದ ಬಗ್ಗೆ ಸ್ವತಃ ಯಾವ ಪರಿಶ್ರಮವೂ ಇಲ್ಲದೆ ಅಪಲಾಪ ಮಾಡಲೆಳೆಸುವುದು ಅವಿವೇಕ ಮಾತ್ರವಾದೀತು. ಆಧುನಿಕ ವಿಜ್ಞಾನದ ಪರಿವೆಯೇ ಇಲ್ಲದವನೊಬ್ಬ ಚಂದ್ರಲೋಕಯಾನದ ಬಗ್ಗೆ ಎಷ್ಟೇ ಗೇಲಿ ಕುಚೋದ್ಯದ ಮಾತುಗಳನ್ನಾಡಿದರೂ ಅದು ಹೇಗೆ ಪರಿಹಾಸಾಸ್ಪದವೋ ಅದೇ ರೀತಿ ಮಹರ್ಷಿಗಳ ಜ್ಞಾನವಿಜ್ಞಾನಗಳ ಬಗ್ಗೆ ಸರಿಯಾದ ಸಾಧನ–ಅಧ್ಯಯನಗಳಿಲ್ಲದವನು ಆಡುವ ಮಾತು ಅವನವನ ಬಾಲಿಶಪ್ರವೃತ್ತಿಯ ಪ್ರತೀಕವೇ.

ಇನ್ನು ನಮಗೆ ಸ್ವತಃ ತಿಳಿಯುವ ತನಕ ಅಂತಹ ಸತ್ಯವನ್ನು ಒಪ್ಪಿಕೊಳ್ಳುವುದಿಲ್ಲ ಎನ್ನುವುದಾದರೆ ಇದೇ ನ್ಯಾಯವನ್ನು ತಮ್ಮ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಪ್ರಯೋಗದಲ್ಲಿಟ್ಟುಕೊಂಡಿದ್ದಾರಾ? ಎಂದು ಪ್ರಶ್ನಿಸಬೇಕಾಗುತ್ತದೆ. ನಿಮ್ಮ ಹಾರ್ಟ್, ಬ್ರೈನ್, ಕಿಡ್ನಿ ಮೊದಲಾದ ಅವಯವಗಳನ್ನು ನೀವೇ ನೋಡಿಕೊಂಡು ಅನಂತರ ಒಂದು ನಿರ್ಣಯಕ್ಕೆ ಬಂದಿದ್ದೀರ? ಅಥವಾ ಅದರ ಬಗ್ಗೆ ಶೋಧನೆ ಮಾಡಿದಒಬ್ಬ ವೈದ್ಯ ವಿಜ್ಞಾನಿಯನ್ನು ನಂಬಿ ವ್ಯವಹರಿಸುತ್ತೀರೋ – ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ರೋಗವೆಂದೊಡನೆ 'ವೈರಸ್ ಇನ್ಫೆಕ್ಷನ್' ಎಂಬ ಮಾತನಾಡುವಾಗಲೆಲ್ಲ ವೈರಸ್ಸನ್ನು ನೋಡಿ ತಾವೇ ನಿರ್ಣಯಿಸಿಕೊಂಡು ಮಾತನಾಡುತ್ತಿದ್ದೀರ? ಇಲ್ಲಿ ಯಾವ ನ್ಯಾಯದ ಅವಲಂಬನದೊಂದಿಗೆ ತಮ್ಮ ವ್ಯವಹಾರ? ಎಂದೇ ಪರಿಶೀಲಿಸಿ ಕೊಳ್ಳಬೇಕು.

ಆದ್ದರಿಂದ ''ದೇವ', 'ದೇವತಾ' ಎಂಬಪದಗಳಿಂದ ಬಂದ ವ್ಯವಹಾರ ಕಲ್ಪನೆಯಕೂಸಲ್ಲ. ಋಷಿಮಹರ್ಷಿಗಳ ಪ್ರಯೋಗಾಲಯದಲ್ಲಿ ಆವಿಷ್ಕಾರ ಗೊಂಡ ನಿತ್ಯಸತ್ಯ. ಇಂತಹ ಸತ್ಯವನ್ನು ಕಾಲಕಾಲದಲ್ಲಿ ಈ ದೇಶದಲ್ಲಿ ಸಂಭವಿಸಿದ ಸಾಧಕರೂ ಶೋಧಕರೂ ಕಂಡು ಕೊಂಡಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅಂತಹ ಸತ್ಯವನ್ನು ತಾವೂ ಕಂಡು, ಮಾತ್ರವಲ್ಲದೆ ಆ ಸತ್ಯವನ್ನು ಕಾಣಬಯಸಿದ ಅನೇಕರಿಗೆ ತಮ್ಮ ಅಂತಃಸ್ಫೂರ್ತಿಯ ಬಲದ ಮೇಲೆ ಅದರ ಅನುಭವವಾಗುವಂತೆ ಮಾಡಿ 'ಯಾವುದನ್ನೂ ನಾನು ಹೇಳುತ್ತೇನೆ ಎಂಬ ಕಾರಣದಿಂದ ಒಪ್ಪಿಕೊಳ್ಳ ಬೇಕಾಗಿಲ್ಲಪ್ಪ, ವಿಷಯ ಹಾಗುಂಟೇ ನೋಡಿ, ಅಹುದಾದರೆ ಅಹುದೆನ್ನಿ ಇಲ್ಲವಾದರೆ ಇಲ್ಲವೆನ್ನಿ' ಎಂಬ ವೀರ ಘೋಷದೊಂದಿಗೆ, ವಿಷಯ–ಪ್ರಯೋಗ–ಅನುಭವ ಇವೇನನ್ನ ಶಾಸ್ತ್ರವಪ್ಪ' ಎಂದು ಋಷಿ ಪ್ರಣೀತವಾದ ಶಾಸ್ತ್ರಗಳ ಸತ್ಯಾರ್ಥತೆಯನ್ನು ತನ್ನ ಪ್ರಯೋಗ ವಿಜ್ಞಾನದಿಂದ ಲೋಕದ ಮುಂದೆ ಬಿಚ್ಚಿಟ್ಟ ಮಹಾಗುರು–ಶ್ರೀರಂಗ–ವಿಜಯಲಕ್ಷ್ಮೀ–ಮಹಾತಾಯಿಯವರನ್ನು ಕಂಡನುಭವಿಸಿದ ಅನುಭವಿಸುತ್ತಿರುವ ಸುಕೃತಿಗಳಿದ್ದಾರೆ. 'ಪರಮಾತ್ಮದರ್ಶನವೆಂಬುದು ಈ ಭುವಿಯಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ಮಾನವನ ಜನ್ಮಸಿದ್ಧವಾದ ಹಕ್ಕು' ಎಂದು ಆ ಅಂತಸ್ಸತ್ಯವನ್ನು ಸಾಕ್ಷಾತ್ಕಾರಿಸಿಕೊಳ್ಳುವ ಬಗ್ಗೆ ಸುಪ್ತವಾದ ಹೃದಯಗಳನ್ನು ಬಡಿದೆಬ್ಬಿಸಿದ ಆ ಮಹಾಗುರುವಿನ ಮಾತನ್ನೂ ಮತಿಯನ್ನೂ ಕೃತಿಯನ್ನೂ ಸ್ಮರಿಸುತ್ತೇನೆ.

(ಮುಂದುವರೆಯುವುದು)

**4 ನೇ ಪುಟದಲ್ಲಿ ಮುಂದುವರೆದಿದೆ**

ಅಭಿಮಾನವನ್ನು ಹೊಂದಿರುತ್ತಾನೆ. ಆಗ ಅವನನ್ನು 'ತೈಜಸ' ಎನ್ನುವ ಹೆಸರಿನಿಂದ ಗುರುತಿಸುವರು.

**ಸುಷುಪ್ತ್ಯವಸ್ಥಾ ಕಾ? ಅಹಂ ಕಿಮಪಿ ನ ಜಾನಾಮಿ, ಸುಖೇನಮ ಯಾನಿದ್ರಾ ಅನುಭೂಯತೇ ಇತಿ ಯತ್ ತತ್ ಸುಷುಪ್ತ್ಯವಸ್ಥಾ। ಕಾರಣಶರೀರಾಭಿಮಾನೀಆತ್ಮಾಪ್ರಾಜ್ಞಃ ಇತಿ ಉಚ್ಯತೇ।**

**ಅನುವಾದ:** ಸುಷುಪ್ತ್ಯವಸ್ಥೆಯು ಏನು? ನಾನು ಏನನ್ನೂ ತಿಳಿಯುವುದಿಲ್ಲ, ಸುಖವಾಗಿ ನನ್ನಿಂದ ನಿದ್ರೆ ಅನುಭವಿಸಲ್ಪಡುತ್ತದೆ ಎನ್ನುವ ಅವಸ್ಥೆಯೇಸುಷುಪ್ತ್ಯವಸ್ಥೆ. ಕಾರಣ ಶರೀರಾಭಿಮಾನಿಯಾದ ಆತ್ಮನು ಪ್ರಾಜ್ಞನೆಂದು ಕರೆಯಲ್ಪಡುವನು.

**ವಿವರಣೆ:** ಗಾಢನಿದ್ರೆಯ ಅವಸ್ಥೆಯನ್ನು ಸುಷುಪ್ತಿ ಎನ್ನುವರು. ಆಗ ಇಂದ್ರಿಯಗಳು ಹಾಗೂ ಮನಸ್ಸು ಸುಪ್ತವಾಗಿರುತ್ತವೆ. ಹಾಗಾಗಿ ಯಾವುದೇ ವಿಷಯದ ಅರಿವು ಇರುವುದಿಲ್ಲ. ಸುಷುಪ್ತಿಯಿಂದ ಎದ್ದವನು 'ನಾನು ಏನನ್ನೂ ತಿಳಿಯಲಿಲ್ಲ" ಎನ್ನುವುದು ಸುಷುಪ್ತಿಯಲ್ಲಿ ವಿಷಯಗಳ ಅನುಭವದ ಅಭಾವವನ್ನಲ್ಲದೆ ಅಜ್ಞಾನದ ಇರುವಿಕೆಯನ್ನು ಸೂಚಿಸುತ್ತದೆ. ಸುಷುಪ್ತಿಯಲ್ಲಿ ವಿಷಯಗಳ ಅನುಭವವಿಲ್ಲದಿದ್ದರೂ ಸುಖದ ಅನುಭವವು ಆಗುತ್ತಿರುತ್ತದೆ, ಹಾಗಾಗಿ ಸುಷುಪ್ತಿಯಿಂದ ಎದ್ದವನು 'ನಾನು ಸುಖವಾಗಿ ನಿದ್ರಿಸಿದೆ' ಎನ್ನುವನು. ಸುಷುಪ್ತಿಯಲ್ಲಿ ಸ್ಥೂಲ ಹಾಗೂ ಸೂಕ್ಷ್ಮಶರೀರಗಳ ಅನುಭವವಿರುವುದಿಲ್ಲ. ಆದರೆ ಕಾರಣ ಶರೀರವಾದ ಅಜ್ಞಾನವಿದ್ದು ಆತ್ಮನು ಅದರೊಂದಿಗೆ ಅಭಿಮಾನವನ್ನು ಹೊಂದಿರುವನು. ಕಾರಣ ಶರೀರಾಭಿಮಾನಿಯಾದ 'ಆತ್ಮನನ್ನು ಪ್ರಾಜ್ಞ ಎನ್ನುವರು.

**ಪಞ್ಚಕೋಶಾಃ ಕೇ? ಅನ್ನಮಯಃ ಪ್ರಾಣಮಯಃ ಮನೋಮಯಃ ವಿಜ್ಞಾನಮಯಃ ಆನನ್ದಮಯಃ ಚ ಇತಿ।**

**ಅನುವಾದ:** ಐದು ಕೋಶಗಳುಯಾವುವು?

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಹಾಗೂ ಆನಂದಮಯ ಇವು.

**ವಿವರಣೆ:** ಆತ್ಮನುಪಂಚಕೋಶಾತೀತನು ಎಂದು ಹಿಂದೆ ತಿಳಿಸಲಾಗಿತ್ತು. ಅನ್ನಮಯಾದಿ ಐದು ಕೋಶಗಳುತೈತ್ತಿರೀಯೋಪ ನಿಷತ್ತಿನಲ್ಲಿ ತಿಳಿಸಲ್ಪಟ್ಟಿವೆ. ಒಂದು ಅಮೂಲ್ಯವಾದ ವಸ್ತುವನ್ನು ಸುರಕ್ಷಿತವಾಗಿರಿಸುವ ಆವರಣವನ್ನು ಲೋಕದಲ್ಲಿ ಕೋಶ ಎನ್ನುವರು. ಉದಾಹರಣೆಗೆ ಖಡ್ಗದಕೋಶವು ಖಡ್ಗವನ್ನು ತನ್ನ ಒಳಗೆ ಇರಿಸಿ ಕೊಳ್ಳುತ್ತದೆ. ಅದೇ ರೀತಿ ಈ ಐದು ಕೋಶಗಳು ಆತ್ಮನನ್ನು ಆವರಿಸಿಮರೆಮಾಡುತ್ತವೆ.

**ಅನ್ನಮಯಃಕಃ? ಅನ್ನರಸೇನ ಏವ ಭೂತ್ವಾಅನ್ನರಸೇನ ಏವ ಅಭಿವೃದ್ಧಿಂಸಂಪ್ರಾಪ್ಯಅನ್ನರೂಪಪೃಥಿವ್ಯಾಂಯದ್ವಿಲೀಯತೇಸಃಅನ್ನಮಯಃ ಕೋಶಃ।**

**ಅನುವಾದ:** ಯಾವುದು ಅನ್ನಮಯವು ಏನು? ಅನ್ನರಸದಿಂದಲೇ ಉಂಟಾಗಿ, ಅನ್ನರಸದಿಂದಲೇ ಬೆಳವಣಿಗೆಯನ್ನು ಹೊಂದಿ, ಅನ್ನರೂಪದಭೂಮಿಯಲ್ಲಿವಿಲೀನವಾಗುವುದೋ ಅದು ಅನ್ನಮಯ ಕೋಶ.

**ವಿವರಣೆ:** ಅನ್ನಮಯಕೋಶವೆಂದರೆ ಈ ಸ್ಥೂಲಶರೀರವೇ. ಇದು ತಂದೆ–ತಾಯಿಯರು ಉಂಡ ಅನ್ನದ ಸಾರದಿಂದಲೇ ಗರ್ಭದ ರೂಪದಲ್ಲಿ ಉಂಟಾಗತ್ತದ ಹಾಗೂ ಅನ್ನದಿಂದಲೇ ಬೆಳೆಯತ್ತದೆ. ಮರಣದ ಬಳಿಕ ಇದು ಅನ್ನರೂಪದ ಪೃಥ್ವೀತತ್ತ್ವದಲ್ಲಿ ಲೀನವಾಗುತ್ತದೆ. ಅನ್ನದವಿಕಾರ ವಾದ್ದರಿಂದ ಇದನ್ನು ಅನ್ನಮಯ ಕೋಶ ಎನ್ನುವರು.

**ಪ್ರಾಣಮಯಃಕಃ? ಪ್ರಾಣಾದಿ ಪಂಚಾವಯವಃ ವಾಗಾದೀಂದ್ರಿಯ ಪಞ್ಚಕಂ ಚ ಮಿಲಿತ್ವಾಪ್ರಾಣಮಯಃಕೋಶಃ।**

**ಅನುವಾದ:** ಪ್ರಾಣಮಯವು ಏನು?

ಪ್ರಾಣಾದಿ ಐದು ಅವಯವಗಳೂ, ವಾಗಾದಿ ಐದು ಇಂದ್ರಿಯಗಳೂ ಸೇರಿ ಪ್ರಾಣಮಯ ಕೋಶ.

**ವಿವರಣೆ:** ಪ್ರಾಣ ಎಂದರೆ ದೇಹದಲ್ಲಿನ ಉಸಿರಾಟ, ಆಹಾರದ ಪಚನ, ರಕ್ತಸಂಚಲನ ಇತ್ಯಾದಿ ಜೈವಿಕ ಚಟುವಟಿಕೆಗಳಿಗೆ ಕಾರಣವಾದ ಸೂಕ್ಷ್ಮವಾದ ತತ್ತ್ವ. ಇದರ ಐದು ಪ್ರಭೇದಗಳಾದ ಪ್ರಾಣ, ಅಪಾನ, ವ್ಯಾನ, ಉದಾನ ಹಾಗೂ ಸಮಾನ ಎಂಬುವನ್ನು ಐದು ಅವಯವಗಳು ಎಂದಿದ್ದಾರೆ. ಇವುಗಳು ಹಾಗೂ ವಾಗಾದಿ ಐದು ಕರ್ಮೇಂದ್ರಿಯಗಳೂ ಸೇರಿ ಪ್ರಾಣಮಯಕೋಶವಾಗುತ್ತದೆ. ಪ್ರಾಣಮಯ ಕೋಶವು ಕ್ರಿಯಾಶಕ್ತಿಪ್ರಧಾನವಾಗಿದ್ದು ದೇಹದಲ್ಲಿನ ಎಲ್ಲಾ ಕ್ರಿಯೆಗಳಿಗೆ ಕಾರಣವಾಗಿರುತ್ತದೆ.

**ಮನೋಮಯಃಕಃ? ಮನಃ ಚ ಜ್ಞಾನೇಂದ್ರಿಯಪಂಚಕಂ ಚ ಮಿಲಿತ್ವಾಮನೋಮಯಃಕೋಶಃ।**

**ಅನುವಾದ:** ಮನೋಮಯವು ಏನು? ಮನಸ್ಸು ಹಾಗೂ ಐದು ಜ್ಞಾನೇಂದ್ರಿಯಗಳು ಸೇರಿ ಮನೋಮಯ ಕೋಶ.

ವಿವರಣೆ: ಅಂತಃಕರಣದ ಎರಡು ಭೇದಗಳು ಮನಸ್ಸು ಹಾಗೂ ಬುದ್ಧಿ. ಇವುಗಳಲ್ಲಿ ಸಂಕಲ್ಪ ಹಾಗೂ ವಿಕಲ್ಪ ಎನ್ನುವ ಚಟುವಟಿಕೆಗಳನ್ನು ಮಾಡುವ ಅಂತಃಕರಣವು ಮನಸ್ಸು ಎನ್ನಲ್ಪಡುತ್ತದೆ. ಈ ಮನಸ್ಸು ಐದು ಜ್ಞಾನೇಂದ್ರಿಯಗಳೊಂದಿಗೆ ಸೇರಿದಾಗ ಮನೋಮಯ ಕೋಶ ಎನ್ನಲ್ಪಡುತ್ತದೆ. ಪ್ರಾಣಮಯವುಕ್ರಿಯಾಶಕ್ತಿಪ್ರಧಾನವಾದರೆ ಇದು ಇಚ್ಛಾಶಕ್ತಿಪ್ರಧಾನವಾಗಿದೆ.

**ವಿಜ್ಞಾನಮಯಃಕಃ? ಬುದ್ಧಿಃಜ್ಞಾನೇಂದ್ರಿಯಪಂಚಕಂ ಚ ಮಿಲಿತ್ವಾ ವಿಜ್ಞಾನಮಯಃ ಕೋಶಃ।**

**ಅನುವಾದ:** ವಿಜ್ಞಾನಮಯವು ಏನು? ಬುದ್ಧಿ ಹಾಗೂ ಐದು ಜ್ಞಾನೇಂದ್ರಿಯಗಳು ಸೇರಿ ವಿಜ್ಞಾನಮಯ ಕೋಶ.

**ವಿವರಣೆ:** ನಿಶ್ಚಯವೆನ್ನುವ ವೃತ್ತಿಯನ್ನು ಹೊಂದಿದ ಅಂತಃಕರಣ ವನ್ನು ಬುದ್ಧಿ ಅಥವಾ ವಿಜ್ಞಾನ ಎನ್ನುವರು. ಬುದ್ಧಿಯು ಐದು ಜ್ಞಾನೇಂದ್ರಿಯಗಳೊಂದಿಗೆ ಸೇರಿ ವಿಜ್ಞಾನಮಯಕೋಶವಾಗುತ್ತದೆ. ಈ ಕೋಶವುಜ್ಞಾನಶಕ್ತಿಪ್ರಧಾನವಾಗಿದೆ. ಪ್ರಾಣಮಯ, ಮನೋಮಯ ಹಾಗೂ ವಿಜ್ಞಾನಮಯ ಈ ಮೂರು ಕೋಶಗಳುಸೂಕ್ಷ್ಮಶರೀರಕ್ಕೆ ಸೇರಿವೆ. ಆನಂದಮಯಃಕೋಶಃಕಃ? ಪ್ರಿಯಮೋದಾದಿವೃತ್ತಿಮತ್ಸ್ವ ಸ್ವರೂಪಾಜ್ಞಾನಂಯದ್ ಅಸ್ತಿ, ತದ್‌ನಂದಮಯಃಕೋಶಃ।

**ಅನುವಾದ:** ಆನಂದಮಯ ಕೋಶವು ಏನು?

ಪ್ರಿಯ, ಮೋದ ಇತ್ಯಾದಿ ವೃತ್ತಿಗಳಿರುವಸ್ವಸ್ವರೂಪದಅಜ್ಞಾನವೇ ಆನಂದಮಯ ಕೋಶ.

**ವಿವರಣೆ:** ಕಾರಣಶರೀರವಾದಅಜ್ಞಾನದಲ್ಲಿ ಉಂಟಾಗುವ ವೃತ್ತಿಗಳು ನಮ್ಮ ಸುಖದ ಅನುಭವಕ್ಕೆ ಕಾರಣವಾಗಿವೆ. ಈ ವೃತ್ತಿಸಹಿತವಾದ ಅಜ್ಞಾನವನ್ನೇ ಆನಂದಮಯ ಕೋಶ ಎನ್ನುವರು. ಸುಖಾನುಭವದ ತೀವ್ರತೆಯನ್ನು ಆಧಾರವಾಗಿಟ್ಟುಕೊಂಡು ಈ ವೃತ್ತಿಗಳಲ್ಲಿ ಪ್ರಿಯ ಮೋದ ಹಾಗೂ ಪ್ರಮೋದ ಎಂದು ಮೂರು ಬಗೆಗಳನ್ನುಹೇಳಲಾಗುತ್ತದೆ. ಪ್ರಿಯ ಎಂದರೆ ಇಷ್ಟವಸ್ತುವನ್ನು ನೋಡುವುದರಿಂದ ಉಂಟಾಗುವ ಸುಖವೃತ್ತಿ. ಇದಕ್ಕಿಂತ ಹೆಚ್ಚಿನ ಸುಖವು ಇಷ್ಟವಸ್ತುವನ್ನು ಪಡೆದಾಗ ಉಂಟಾಗುವ ಮೋದ ಎನ್ನುವ ವೃತ್ತಿಯಿಂದ ಅನುಭವಿಸಲ್ಪಡುತ್ತದೆ. ಪ್ರಮೋದ ಎಂದರೆ ಇಷ್ಟವಸ್ತುವನ್ನುಅನುಭವಸುವಾಗ ಉಂಟಾಗುವ ಉತ್ಕೃಷ್ಟವಾದ ಸುಖವೃತ್ತಿ. ಈ ವೃತ್ತಿಗಳುಆನಂದಮಯದಭಾಗಗಳಾಗಿವೆ.

**ಮುಂದುವರೆಯುವುದು......**

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902

**ಸದಸ್ಯರು**

ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245

**ಬ್ರಾಹ್ಮಣ ಸೇವಾಶ್ರಮ ಸಂಘ (ರಿ)**
ಚಾರಿಟೆಬಲ್ ಟ್ರಸ್ಟ್

ನಂ 68, 4ನೇ ಕ್ರಾಸ್ ಮಾದಾವರ ನ್ಯೂ ಟೌನ್ ಮಾದಾವರ ಪೋಸ್ಟ್ ಬೆಂಗಳೂರು 562162
ಮೊ-9342330134 - 9379154584 - 9019329575

ನಮ್ಮ ಸಂಸ್ಥೆಯು ನಡೆಸುತ್ತಿರುವ ವೃದ್ಧಾಶ್ರಮಕ್ಕೆ
60 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವೃದ್ಧರನ್ನು ಆಹ್ವಾನಿಸಲಾಗಿದೆ.
ಇಲ್ಲಿ ಸ್ನಾನಕ್ಕೆ ಬಿಸಿನೀರು, ಪ್ರಾರ್ಥನೆಗಾಗಿ ಭವಾನಿಶಂಕರ ದೇವಸ್ಥಾನ ಇದೆ,
ಉತ್ತಮ ಊಟೋಪಹಾರ, ವಾಕಿಂಗ್ ಸ್ಥಳಾವಕಾಶ ಮನರಂಜನೆಗೆ ಟಿ.ವಿ.
ಹಾಗೂ ಇತರೇ ಹೆಚ್ಚಿನ ಸೌಲಭ್ಯವಿದೆ.

(ಹಾಸಿಗೆ ಹಿಡಿದಿರುವ ವೃದ್ಧರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ)

**ಈ ಸೇವೆಯ ಅವಶ್ಯ ಉಳ್ಳವರು ಸಂಪರ್ಕಿಸಿ**

ಹೆಚ್ಚಿನ ವಿವರಗಳಿಗೆ ದಯಮಾಡಿ ಸಂಪರ್ಕಿಸಿ.
ಡಾ|| ಎಸ್.ಚಂದ್ರಶೇಖರ್ ~ 9342330134
ಧನ್ಯವಾದಗಳು

ದಯಮಾಡಿ ಇದನ್ನು ನಿಮಗೆ ತಿಳಿದಿರುವ ಬ್ರಾಹ್ಮಣರಿಗೆ ಹಾಗೂ
ನಿಮ್ಮಲ್ಲಿರುವ ಬ್ರಾಹ್ಮಣ ಗುಂಪುಗಳಿಗೆ ಕಳುಹಿಸಿಕೊಡಿ.
ಈ ಸೇವೆಯ ಅವಶ್ಯವಿರುವವರಿಗೆ ಇದನ್ನು ತಲುಪಿಸಿ ಎಂದು ಕೋರುತ್ತೇನೆ.

IIShri Shankaralinga VijayateII



Reg No:BK-IV 152/19-20

**ಆನಂದಾಸ್ ಸೇವಾ ಸದನ ಟ್ರಸ್ಟ್ (ರಿ)**

**Ananda's Seva Sadana Trust ®**

**'Senior Citizen Home Geriatric Home & Rehabilitation Centre'**

**Facilities Available :**

- Geriatric/Oldage Care
- Emergency Oxygen Facility
- BIPAP/CPAP Care
- Blood Investigation
- Doctor/Nurses/Physiotherapists
- Television, WiFi, CCTV Surveillance
- Daily activities: Yoga, Bhajans, Meditation
- 24/7 Nursing Care
- Ambulance Facility
- Wheel Chair, walkmate
- RT/PEG Feed

**OLD AGE HOME EXCLUSIVE FOR BRAHMINS**

Dressing | injections | catheterization | IV Cannulation | RT/PEG Feeding



76762 89023 63625 43616 70906 95002
Anandas Brahmin anandassevasadana@gmail.com
www.anandassevasadana.com

We believe if you want Happiness in Life, Never be a Owner of Love, Always be Donor of Love!!

UNIT - 1 : # 40, 4th Main Road, 3rd Stage, BEML layout, Rajarajeshwari Nagar, Bengaluru - 560 098.
**Ph : 080 - 4211 5788**

UNIT - 2 : # 4-15, Survey No: 56, Muragappa Layout, Jawaregowda Nagar, Rajarajeshwari Nagar, Bengaluru - 560 098.
**Ph : 080 - 4149 6133**

## ವಿಪ್ರ ಅಂಗವಿಕಲರು ಹಾಗೂ ವೃದ್ಧರಿಂದ
# ಮಾಸಾಶನ ಯೋಜನೆಗೆ ಅರ್ಜಿ ಆಹ್ವಾನ

ಸಂಕಷ್ಟದಲ್ಲಿರುವ ಅರ್ಹ ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಮುಂದಿನ ದಿನಗಳಲ್ಲಿ ಮಾಸಿಕ ಸಹಾಯ ಧನವಾಗಿ 'ಮಾಸಾಶನ' ನೀಡಲು ಯೋಜಿಸಲಾಗಿದೆ. ಆಸಕ್ತ ಅರ್ಹ ಫಲಾನುಭವಿಗಳು ತಮ್ಮ ವಿವರಗಳು ಹಾಗೂ ಸ್ಥಳೀಯ ಪದಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಮಹಾಸಭೆಗೆ ಅರ್ಜಿ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗೆ ಮಹಾಸಭೆ ಕಛೇರಿಯನ್ನು ಸಂಪರ್ಕಿಸಿ.

### ಪ್ರಾಯೋಜಕತ್ವಕ್ಕಾಗಿ ಮನವಿ

ಸಮಾಜದ ಉಳ್ಳವರು, ಮತ್ತು ಸಬಲರು ಈ ಯೋಜನೆಗೆ ಪ್ರಾಯೋಜಕರಾಗಿ ಮುಂದೆ ಬಂದು ಅಪೂರ್ವವಾದ ಯೋಜನೆಗೆ ಕಾರ್ಯ ರೂಪಕ್ಕೆ ಬರುವಂತೆ ನೆರವಾಗಬೇಕೆಂದು ಮಹಾಸಭೆಯ ಅಧ್ಯಕ್ಷರು ವಿನಂತಿಸಿಕೊಂಡಿದ್ದಾರೆ. ಒಂದು ವರ್ಷಕ್ಕೆ 6000ರೂಗಳನ್ನು ನೀಡಿ ಪ್ರಾಯೋಜಕರಾದಲ್ಲಿ ಅವರದೆ ಹೆಸರಿನಲ್ಲಿ ಈ ಹಣದಿಂದ ಒಬ್ಬರಿಗೆ 12 ತಿಂಗಳು 500ರೂಗಳಂತೆ ತಿಂಗಳಿಗೆ ಸಹಾಯಧನ ರೂಪದಲ್ಲಿ ಮಾಸಾಶನ ನೀಡಲು ಯೋಜಿಸಿದೆ. ಆದ್ದರಿಂದ ಕನಿಷ್ಠ 6,000 ರೂಗಳನ್ನು ನೀಡಿ ಪ್ರಾಯೋಜಕರಾಗಲು ಕೋರಿದೆ. ಪ್ರಾಯೋಜಕರ ಹೆಸರನ್ನು ಮಹಾಸಭೆಯ ಜಾಲತಾಣ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.

–ಪ್ರಧಾನ ಕಾರ್ಯದರ್ಶಿಗಳು


SARVODAYA LAND DEVELOPERS

# 29/2, 12th Main Road, Near Srinagar Bus Stand, Srinagar, Bangalore - 560 050.
E-mail: sarvodayalanddevelopers.nras@gmail.com

## ಸರ್ವೋದಯ ಲ್ಯಾಂಡ್ ಡೆವೆಲಪರ್, ಶ್ರೀನಗರ, ಬೆಂಗಳೂರು

ಬೆಂಗಳೂರು ದಕ್ಷಿಣ ಕೆಂಗೇರಿ ಹೋಬಳಿಯ ಚಿನ್ನಕುರ್ಚಿ ಗ್ರಾಮದಲ್ಲಿ, ಬ್ರಾಹ್ಮಣರಿಗಾಗಿ ಪ್ರತ್ಯೇಕ ಬಡಾವಣೆಯಲ್ಲಿ ಸ್ಥಾಪಿಸುತ್ತಿದ್ದೇವೆ. ಒಟ್ಟು 8.05 ಎಕರೆ ಜಾಗದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಬ್ರಾಹ್ಮಣರಿಗಾಗಿಯೇ ನಿರ್ಮಿತವಾಗುತ್ತಿರುವ ಬಡಾವಣೆ.

1. ಎಲ್ಲಾ ರೀತಿಯಲ್ಲಿ ದಾಖಲೆಗಳನ್ನು ನುರಿತ ವಕೀಲರಿಂದ ಪರಿಶೀಲಿಸಲಾಗಿದೆ.
2. ನಮ್ಮ ಬಡಾವಣೆ ಪ್ರಸ್ತುತ ಮೂಲಭೂತ ಸೌಕರ್ಯದ ನಿರ್ಮಾಣದ ಹಂತದಲ್ಲಿದೆ.
3. ಖರೀದಿದಾರರಿಗೆ ನಿವೇಶನ ಸಾಲದ ಸೌಲಭ್ಯವನ್ನು ಕೂಡ .. ಸಂಸ್ಥೆಯಿಂದ ವ್ಯವಸ್ಥೆ ಮಾಡಲಾಗಿದೆ.
4. ಈ ಬ್ರಾಹ್ಮಣರ ಬಡಾವಣೆಯಲ್ಲಿ ಎಲ್ಲಾ ನಿವೇಶನಗಳು ಆದಷ್ಟು ಕೈಗೆಟಕುವ ಬೆಲೆಯನ್ನು ಹೊಂದಿರುತ್ತದೆ.
5. ನಮ್ಮ ಬಡಾವಣೆಯಲ್ಲಿ ಒಟ್ಟು 219 ನಿವೇಶನಗಳು ಲಭ್ಯವಿದೆ.

ಹೆಚ್ಚಿನ ಮಾಹಿತಿಗಾಗಿ ಆಸಕ್ತರು ಈ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ಪವನ್ ಕುಮಾರ್–9945605677, ಲೋಕೇಶ್ – 9986480869

**Details of the Plots/Sites**

| Sl. No. | PLOT SIZE | NO FO SITE |
|---|---|---|
| 1 | 20 X 30 | 67 |
| 2 | 20 X 40 | 14 |
| 3 | 30 X 30 | 19 |
| 4 | 30 X 40 | 46 |
| 5 | Odd Sites | 73 |
| Total | | 219 |

ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ

ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**



# ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಶುಭಾಶಯಗಳೊಂದಿಗೆ

ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336



**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

## ಸಂಘದ ಆಡಳಿತ ಮಂಡಳಿ ಸದಸ್ಯರು

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

॥ ಶ್ರೀ ನಂಜುಂಡೇಶ್ವರ ಸ್ವಾಮಿ ಪ್ರಸನ್ನ ॥

ಶ್ರೀ ವಾಸವಿ ಟೂರ್ಸ್ & ಟ್ರಾವೆಲ್ಸ್ (ರಿ.)

SRI VASAVI TOURS & TRAVELS ®

ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ

287, Opp Gali Anjaneya temple Building, Byatarayanapura Mysore Road B'lore-26
Email: srivasavitours3876@gmail.com / web: www.srivasavitourandtravels.com

SEETHARAM: 9343779464 8951221582 080-2675 6665

KASHI 6 DAYS
DELHI Bulk Group Bookings
AGRA 2 DAYS (By Flight, Fare extra)
ALLAHABAD
KEDAR 4/5DAYS
BADRI BY HELI & FLIGHT

VAISHNODEVI 4-5DAYS
AMARNATH BY HELI & FLIGHT
JAMMU / KASHMIR
NEPAL MUKTINATH
GUJARAT 4N/5D
KERALA

GOA PKG: 2N/3D
KOLHAPUR BY FLIGHT
HYDERABAD
RAMOJI FILIM CITY
Sigandur Choudeshwari 2N/3D

INDORE-UJJAIN: 1N/2D
SHIRDI / PURI JAGANNATH
VAI KUNTA EKADASHI SPECIAL
NAVA THIRUPATI PKG
RAMESHWARAM 3N/2DAY
MADURAI By 2+2 Bus



Daily Tirupati Balaji VIP Darshan
ತಿರುಪತಿ ಪ್ರವಾಸ 1ದಿ 1ರಾತ್ರಿ
Include: Pick up from Bangalore
2+2 Ac Volvo Bus, star Accomodation
For fresh up room, Breakfast Lunch
VIP Darshan with guide(1Laddu free)
Almelumangamma darshan On day
Return Back to Bangalore

Daily Shirdi / Bombay
Dharmastala Manthralaya
Holiday Honeymoon pkg
Shimla Kulu Manali, Kashmir
Lehladakh, Darjeeling Gangtok
JimCorbet Massoorie Nainital
Alleppy Tekkdy Munnar, Ooty
Kodaikenal, Hyderabad, Goa
Kanyakumari DELHI, AGRA

Kailasamanasrova Yathre
Golden Dhamaka offer subsidy
Rs.30,000/-from Govt. for Yathra

ಅಮರನಾಥ & ವೈಷ್ಣೋದೇವಿ 17ದಿನ
ಅಮೃತಸರ್ ವಾಘಬಾರ್ಡರ್ ಜಮ್ಮುಕಾಶ್ಮೀರ್
ರಘುನಾಥ ಮಂದಿರ ಕಟ್ರಾ ಕೀರಭವಾನಿ
ಬಾಲ್ತಾಲ್ ಕುರುಕ್ಷೇತ್ರ ಶಿವಕೋರಿ ಜ್ವಾಲಮುಖಿ
ಚಾಮುಂಡದೇವಿ ಚಿಂತಪೂರ್ಣಿ ಕಾಂಗಡ

INTERNATIONAL PKG:
DUBAI,BALI, BAKU, SRILANKA
SINGAPPORE, MALAYSIA,
BANGKOK PATTAYA THAILAND
LAKSHADWEEP MALDIVES

ಕೇರಳ ವಿಶೇಷ ಪ್ರವಾಸ ಗುರುವಾಯೂರು,
ಕಾಲಡಿ, ಆಲೆಪ್ಪಿ ಟೇಕಡಿ ಮುನ್ನಾರ್ ಜಲಾಯ, ಕೊಚ್ಚಿನ್ ವೈನಾಡು

ವಾಸವಿ ಪೆನುಗೊಂಡ ಪ್ರವಾಸ 9 ದಿನ
Andhra Vasavi Penugonda
ಶ್ರೀಶೈಲಂ ಮಹಾನಂದಿ ಹೈದರಾಬಾದ್
ಭದ್ರಾಚಲಂ ವಾಸವಿಪೆನುಗೊಂಡ ಅಣ್ಣಾವರಂ
ವಿಜಯವಾಡ ಕನಕದುರ್ಗ ಪಂಚರಾಮಲು
ಅಮರಾವತಿ ಮಂಗಳಗಿರಿ ರ್‍ಯಾಲಿ

Tamilnadu 7d 7 ದಿನ
ತಿರುವಣ್ಣಾಮಲೈ ತಿರುಕಡೈಯೂರು
ತಂಜಾವೂರು ಮೇಲಮರವುತ್ತೂರು ನವಗ್ರಹ
ಶುಚೀಂದ್ರಂ ತಿರುಚೆಂದೂರ್
Rameshwaram 4d 4n
ರಾಮೇಶ್ವರಂ ಎಕ್ಸ್‌ಪ್ರೆಸ್ ಪ್ರವಾಸ 4 ದಿನ
ಕನ್ಯಾಕುಮಾರಿ ಮಧುರೈ ಪಳನಿ

Rajasthan Pkg 15d
Jaipur Jodhpur Udaypur
Ajmeer Mt. Abu Rathanbor

ಚಾರ್‌ದಾಮ್ ಪ್ರವಾಸ 16 ದಿನ
ದೆಹಲಿ ಕೇದಾರ್‌ನಾಥ್ ಬದ್ರಿನಾಥ್
ಗಂಗೋತ್ರಿ ಯಮುನೋತ್ರಿ ಗಂಗಾನಾನಿ
ಗುಪ್ತಕಾಶಿ ತ್ರಿಯೋಗಿನಾರಾಯಣ
ಉತ್ತರಕಾಶಿ ದೇವ. ಕರ್ಣ. ರುದ್ರಪ್ರಯಾಗ್
ಇಂಡೋಟಿಬೇಟಿಯನ್ ಮಾನಾ ಹಳ್ಳಿ
ಹೂಕ್ಕೀಮಠ ಜೋಶಿಮಠ ಮಿನಿಸ್ವಿಜ್ಜರ್
ಲ್ಯಾಂಡ್ ಹರಿದ್ವಾರ ಋಷಿಕೇಶ್

Golden Dhamaka offer subsidy
Rs.20,000/-*
from Govt. for CHARDHAM Yathra

CHARDHAM 4D PKG
By flight & Helicopter
Kedar & Badrinath
Gangothri Yamunothri

Kolkata Darjeling Gangtok 14 d
Dakshineshwar Gangasagara Silguri

ಕಾಶೀ ಎಕ್ಸ್‌ಪ್ರೆಸ್ ಪ್ರವಾಸ 5ದಿನ
Kashi Express PKG 6d By Flight
ಕಾಶೀ ವಿಶ್ವನಾಥ ಕಾಶಿವಿಶಾಲಾಕ್ಷಿ ಅನ್ನಪೂರ್ಣೇಶ್ವರಿ
ಗಂಗಾರತಿ ಗಯಾ ವಿಷ್ಣುಪಾದ ಬೋದಗಯಾ
(ಬುದ್ಧನಿಗೆ ಜ್ಞಾನೋದಯವಾದ ಜಾಗ)
ಅಲಹಾಬಾದ್ ವಿಂಧ್ಯಾಚಲ ಸೀತಾಮಡಿ

Golden Dhamaka offer subsidy
Rs.5,000/-
from Govt. for KASHI Yathra

ಕಾಶೀ&ದೆಹಲಿ ಪ್ರವಾಸ 15 ದಿನ ದೆಹಲಿ
ಅಯೋಧ್ಯ ನೈಮಿಷಾರಣ್ಯ ಆಗ್ರ ಮಥುರಾ
ಬೃಂದಾವನ ಹರಿದ್ವಾರ ಋಷಿಕೇಶ್
ಕಾಶೀ ಚಾರ್‌ದಾಮ್ ಪ್ರವಾಸ 25 ದಿನ

ಗುಜರಾಥ್ ಪ್ರವಾಸ 15 ದಿನ
ಸೋಮನಾಥ ದ್ವಾರಕ ಬೇಟ್‌ದ್ವಾರಕ
ಪೋರಬಂದರ್ ಜಾಂಬವಂತನಗುಹೆ
ಸಿದ್ಧಪುರ್(ಮಾತೃಗಯಾ)
ಭಾವನಗರ ಅಹಮದಾಬಾದ್

ರೈಲಿನ ಪ್ರಯಾಣಿಕರು 125ದಿನ ಮುಂಚೆ
ನಿಮ್ಮ ಸೀಟನ್ನುಕಾಯ್ದಿರಿಸಿಕೊಳ್ಳುವುದು

ನೇಪಾಳ ಮುಕ್ತಿನಾಥಪ್ರವಾಸ 15 ದಿನ
ಜನಕ್‌ಪುರ ಪೋಕ್ರ ಲುಂಬಿನಿ ಗರುಡ-
ನಾರಾಯಣ ಮನೋಕಾಮನ ಕಾಠ್ಮಂಡು
ವೇದವ್ಯಾಸ ಜನ್ಮಸ್ಥಳ ಪಶುಪತಿನಾಥ

ಅಂಡಮಾನ್ನಿಂದ ಅಂಡಮಾನ್ ಪ್ರವಾಸ 5 ದಿನ
Andaman PKG 5days
ಪೋರ್ಟ್‌ಬ್ಲೇರ್ ಸೆಲ್ಯುಲರ್ ಜೈಲ್ ರೋಸ್
ಐಲ್ಯಾಂಡ್ ಹ್ಯಾವ್‌ಲಾಕ್ Portblair
Celular Jail Rose Island Havlok

BHUBANESHWAR Pkg
KONARK PURI JAGANNATH
Jarkhand Vaidyanatheshwar etc.,

Included: Travelling in 2+2 Ac bus Morning Coffee / Tea, 3 times food / 2-3 Sharing Room Accomodation for Group departure

ಮೈಸೂರು ಊಟಿ ಕೊಡೈಕೆನಾಲ್ ಮಡಿಕೇರಿ ಕೂರ್ಗ್ 6ದಿ | ಹಂಪೆ ಕೂಡಲಸಂಗಮ ಬಿಜಾಪುರ ಶಿರಡಿ 7ದಿ 8ರಾತ್ರಿ | ಸಿಗಂದೂರು ಚೌಡೇಶ್ವರಿ 3 ದಿನ

ಕರ್ನಾಟಕ ಕ್ಷೇತ್ರ ಪ್ರವಾಸ 5 ದಿನ | ದಾಂಡೇಲಿ ಪ್ರವಾಸ 1ದಿ 2ರಾತ್ರಿ | ಶಾಲಾ ಕಾಲೇಜುಗಳ ವಿಶೇಷ ಪ್ರವಾಸ



NEW RENEWAL ಪಾಸ್ಪೋರ್ಟ್

We book Online Flight /Heli Bus/ Train ticket & Room/car/ bus/ TT etc.,

# ಪ್ರತಿಭಾ ಪುರಸ್ಕಾರ ಸಮಾರಂಭ–2022



ಪ್ರತಿಭೆಗಳನ್ನು ಪ್ರೋತ್ಸಾಹಿಸಿದ ಗಣ್ಯರಿಗೆ ಗೌರವ ಸಮರ್ಪಣೆ



ಅಧ್ಯಕ್ಷರಿಂದ ಹಿತನುಡಿ



ಪ್ರದೀಪ್‌ಕುಮಾರ್‌ರವರಿಗೆ ಗೌರವ ಸಮರ್ಪಣೆ





ಅತಿಥಿಗಳಿಂದ ಪ್ರತಿಭಾವಂತರಿಗೆ ಪುರಸ್ಕಾರ

ಸಂಚಾಲಕರ ಪ್ರಾಸ್ತಾವಿಕ



ಪ್ರತಿಭಾ ಸಮೂಹ

PERIODICAL RATE

VIPRANUDI KANNADA MONTHLY.
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 28-12-2022 Date of Publishing 24-12-2022


# ಶುಭಾಶಯಗಳು

## ಡಾ|| ಉದಯ್ ಬಿ. ಗರುಡಾಚಾರ್

## ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



**Dr. Uday B. Garudachar**

**MLA, Chickpet Assembly Constituency**

/BGUdayBJP www.udaygarudachar.in


If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar